ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ನವೆಂಬರ್ 03, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 172 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



## ಭದ್ರಾ ನಾಲೆಗಳಲ್ಲಿನ ಅಕ್ರಮ ಪಂಪ್‌ಸೆಟ್‌ಗಳ ವಶ

ದಾವಣಗೆರೆ, ನ. 2-ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಬೆಳೆಗಳಿಗೆ ಕೊನೆಯ ಹಂತದ ನೀರು ಕೊಡಬೇಕಾಗಿರುವುದರಿಂದ ಭದ್ರಾ ನಾಲೆಗಳಲ್ಲಿ ಅಕ್ರಮವಾಗಿ ಅಳವಡಿಸಿರುವ ಪಂಪ್‌ಸೆಟ್‌ಗಳನ್ನು ತೆರವುಗೊಳಿಸಿ, ಅಂತಹ ಪಂಪ್‌ಸೆಟ್‌ಗಳಿಗೆ ಸರಬರಾಜಾಗುವ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ. ಗುರುವಾರ ಹೊನ್ನಾಳಿ ರಸ್ತೆಯಲ್ಲಿರುವ ಅರಳೀಪುರ, ಯಲೋದಹಳ್ಳಿ ಹಾಗೂ ಇನ್ನಿತರೆ ಪ್ರದೇಶಗಳ ಕಾಲುವೆ, ನಾಲೆಗಳಲ್ಲಿ ಅಕ್ರಮವಾಗಿ ನೀರು ತೆಗೆಯಲು ಬಳಸುತ್ತಿದ್ದ ಪಂಪ್‌ಗಳನ್ನು ತೆರವುಗೊಳಿಸಲಾಗಿದೆ. ನೀರಾವರಿ ಇಲಾಖೆ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು ಉಪಸ್ಥಿತರಿದ್ದರು.

# ಪೂರ್ಣಾವಧಿಗೆ ನಾನೇ ಸಿಎಂ

## ಸರ್ಕಾರದ ಪತನ ಬಿಜೆಪಿಯ ಹಗಲುಗನಸು: ಸಿದ್ದರಾಮಯ್ಯ

ಬೆಂಗಳೂರು, ನ. 2 - ಪ್ರಸಕ್ತ ವಿಧಾನಸಭಾ ಅವಧಿಯ ಪೂರ್ತಿ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಘೋಷಿಸಿಕೊಂಡಿದ್ದಾರೆ.

ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ವಿಷಯ ಮುನ್ನೆಲೆಗೆ ಬಂದಿರುವ ಹಿನ್ನೆಲೆಯಲ್ಲೇ ಮುಖ್ಯಮಂತ್ರಿ ಅವರೇ ಈ ಸ್ಪಷ್ಟನೆ ನೀಡಿದ್ದಾರೆ.

ಅಧಿಕಾರ ಹಂಚಿಕೆ ಹಾಗೂ ಸರ್ಕಾರಕ್ಕೆ ಇರಿಸು-ಮುರಿಸು ತರುವಂತಹ ಯಾವುದೇ ಹೇಳಿಕೆ ನೀಡ ಬಾರದೆಂದು ಎಐಸಿಸಿ ವರಿಷ್ಠರು ನಿನ್ನೆ ಬೆಂಗಳೂರಿನಲ್ಲಿ ಸಭೆ ನಡೆಸಿ ಎಚ್ಚರಿಕೆ ನೀಡಿದ ಬೆನ್ನಲ್ಲೇ ಸಿದ್ದರಾಮಯ್ಯ ಅವರೇ ಇಂತಹ ಹೇಳಿಕೆ ನೀಡಿದ್ದಾರೆ.

ಸಹಕಾರ ಸಚಿವ ಕೆ.ಎನ್. ರಾಜಣ್ಣ ಕೂಡ, ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಮುಖ್ಯಮಂತ್ರಿ ಎಂದು ಪುನರುಚ್ಚರಿಸಿದ್ದಾರೆ.

ವಿಜಯನಗರ ಜಿಲ್ಲಾ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಅಧಿಕಾರ ಹಂಚಿಕೆ ಗೊಂದಲಕ್ಕೆ ತೆರೆ ಎಳೆದಿದ್ದಾರೆ.

ಮುಖ್ಯಮಂತ್ರಿ ಹುದ್ದೆಯ ಬಗ್ಗೆ ಚರ್ಚೆ ಮಾಡುತ್ತಿರುವವರಿಗೆ ಕೆಲಸವಿಲ್ಲ, ಪೂರ್ಣಾವಧಿಗೆ



ನಮ್ಮದೇ ಸರ್ಕಾರ, ನಾನೇ ಮುಖ್ಯಮಂತ್ರಿ ಎಂದರು.

ಯಡಿಯೂರಪ್ಪ ಆರೋಪಗಳು ಸುಳ್ಳು, ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂದು ಬಿಜೆಪಿಯವರು ಹಗಲುಗನಸು ಕಾಣುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಯಡಿಯೂರಪ್ಪನವರು ರಾಜಕೀಯದಿಂದ ನಿವೃತ್ತರಾಗಿದ್ದಾರೆ. ಬಿಜೆಪಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿತು. ವಿಧಾನಸಭೆಯಲ್ಲಿ ಅವರು ಕಣ್ಣೀರಿಟ್ಟಿದ್ದರು. ಅವರ ಪಕ್ಷದವರೇ ಅವರನ್ನು ಮನೆಗೆ ಕಳುಹಿಸಿದ್ದಾರೆ. ಅವರ ಹೇಳಿಕೆಗಳಿಗೆ ಏನೂ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ. ಜನ ನಮ್ಮನ್ನು ಆಯ್ಕೆ ಮಾಡಿದ್ದಾರೆ. ನಾವು ಐದು ವರ್ಷ ಆಡಳಿತ ಮಾಡುತ್ತೇವೆ. ಮತ್ತೆ ಚುನಾವಣೆಗೆ ಹೋಗುತ್ತೇವೆ. ಮತ್ತೆ ಜನ ನಮಗೆ ಆಶೀರ್ವಾದ ಮಾಡಲಿದ್ದಾರೆ. ರಮೇಶ್ ಜಾರಕಿಹೊಳಿ ಸೋತು ಮನೆಯಲ್ಲಿರುವವರು, ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಅದಕ್ಕೆಲ್ಲಾ ಉತ್ತರಿಸಲಾಗುವುದಿಲ್ಲ ಎಂದು ತಿಳಿಸಿದರು.

ಮುಂಬರುವ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಪಕ್ಷದ ನಾಯಕರು ರಾಜ್ಯಕ್ಕೆ ಆಗಮಿಸಿದ್ದಾರೆ. ಶಾಸಕರನ್ನು ಕೆಲವು ನಿಗಮ-ಮಂಡಳಿಗಳಿಗೆ ಅಧ್ಯಕ್ಷರಾಗಿ ನೇಮಕ ಮಾಡುವ ಪ್ರಕ್ರಿಯೆಯೂ ಇದ್ದು, ಈ ಬಗ್ಗೆಯೂ ಕೇಂದ್ರ ನಾಯಕರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು.

ರೈತರ ಬಗ್ಗೆ ಕಾಳಜಿ ಇದ್ದರೆ, ಬಿಜೆಪಿ ಸಂಸದರು ರಾಜ್ಯ ಸರ್ಕಾರವನ್ನು ಟೀಕಿಸುವ ಬದಲು ಕೇಂದ್ರದೊಂದಿಗೆ ಮಾತನಾಡಿ, ರಾಜ್ಯಕ್ಕೆ ಪರಿಹಾರಗಳನ್ನು ಬಿಡುಗಡೆಗೊಳಿಸಿದರೆ ಉತ್ತಮ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಕೇಂದ್ರಕ್ಕೆ ಬರ ಪರಿಹಾರವಾಗಿ 17,900 ಕೋಟಿ ರೂ. ಕೋರಿ ಮನವಿ ಸಲ್ಲಿಸಲಾಗಿದೆ. ಪರಿಹಾರ ಮೊತ್ತವನ್ನು ಬಿಡುಗಡೆ ಮಾಡದೇ ಕೇಂದ್ರ ಸರ್ಕಾರ ಕರ್ನಾಟಕಕ್ಕೆ (4ನೇ ಪುಟಕ್ಕೆ)


# ಅಭಿವೃದ್ಧಿ ಸ್ಥಗಿತ, ಆಶ್ವಾಸನೆ ಈಡೇರಿಕೆಗೆ ಪರದಾಟ

ಬೆಂಗಳೂರು, ನ. 2 - ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ದಿನನಿತ್ಯ ಹಗುರ ಹೇಳಿಕೆ ನೀಡುತ್ತಿದ್ದರೆ, ನಿಮ್ಮ ಅಹವಾಲು ಯಾರು ಕೇಳುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಟೀಕಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೆಹಲಿಗೆ ಹೋಗಿ ಕುಳಿತು ಪ್ರಧಾನಿ ಹಾಗೂ ಕೇಂದ್ರ ಸಚಿವರ ಸಮಯಾವಕಾಶ ಪಡೆದು ರಾಜ್ಯದ ಸಮಸ್ಯೆಗಳ ಬಗ್ಗೆ ಪರಿಹಾರ ಕಂಡುಕೊಳ್ಳಿ ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿ ಜನತೆ ತತ್ತರಿಸಿದಾರೆ, ನೀವು ಪಕ್ಷ ರಾಜಕೀಯ ಮಾಡಿಕೊಂಡಿದ್ದೀರಿಯೇ ಹೊರತು, ವಾಸ್ತವ ಪರಿಸ್ಥಿತಿಯ ಕುರಿತು ಗಮನ ಹರಿಸಿಲ್ಲ ಎಂದು ಟೀಕಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿ



### ಆರ್ಥಿಕವಾಗಿ ಸರ್ಕಾರ ದಿವಾಳಿ ಎಂದು ಮಾಜಿ ಸಿಎಂ ಯಡಿಯೂರಪ್ಪ ಟೀಕೆ

ಕಾರಕ್ಕೆ ಬಂದು 6 ತಿಂಗಳಾದರೂ ಅಭಿವೃದ್ಧಿ ಕಾರ್ಯಗಳು ಮುಂದುವರೆಯದೇ ಸ್ಥಗಿತಗೊಂಡಿವೆ. ಮತದಾರರಿಗೆ ಅಪಾರ ಭರವಸೆ ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಆಶ್ವಾಸನೆ ಈಡೇರಿಸಲು ಪರದಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು (4ನೇ ಪುಟಕ್ಕೆ)

# ಬಸವಾಪಟ್ಟಣ ಉಪವಿಭಾಗದಲ್ಲಿ ಅಕ್ರಮ ಪಂಪ್‌ಸೆಟ್‌ಗಳ ತೆರವು ಕಾರ್ಯಾಚರಣೆ

## 150 ಅಕ್ರಮ ಪಂಪ್‌ಸೆಟ್‌ಗಳು ವಶಕ್ಕೆ : ಸ್ಥಳಕ್ಕೆ ಭದ್ರಾ ಎಇಇ ಭೇಟಿ

ಮಲೇಬೆನ್ನೂರು, ನ.2- ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್ ಅವರ ನಿರ್ದೇಶನದ ಮೇರೆಗೆ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ನೀರು ತಲುಪಿಸುವ ಉದ್ದೇಶದಿಂದ ಭದ್ರಾ ನಾಲೆಯಲ್ಲಿ ಅಕ್ರಮವಾಗಿ ಅಳವಡಿಸಿ ಕೊಂಡಿದ್ದ ಪಂಪ್‌ಸೆಟ್‌ಗಳ ತೆರವು ಕಾರ್ಯಾಚರಣೆ ಗುರುವಾರದಿಂದ ಆರಂಭಗೊಂಡಿದೆ.

ಮಲೇಬೆನ್ನೂರು ಭದ್ರಾ ನಾಲಾ ನಂ.3 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕಚೇರಿ ವ್ಯಾಪ್ತಿಯಲ್ಲಿ ಬರುವ ಬಸವಾಪಟ್ಟಣ ಉಪವಿಭಾಗದಲ್ಲಿ ಗುರುವಾರ ಬೆಳಿಗ್ಗೆಯಿಂದ ಸಂಜೆವರೆಗೆ ಸುಮಾರು 150 ಅಕ್ರಮ ಪಂಪ್ ಸೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬಸವಾಪಟ್ಟಣದಿಂದ ಹರಲೀಪುರದವರೆಗೆ ಇವತ್ತು ಕಾರ್ಯಾಚರಣೆ



ನಡೆದಿದ್ದು, ಶುಕ್ರವಾರ ಹರಲೀಪುರದಿಂದ ಮಲೇಕುಂಬಳೂರು, ಕುಂದೂರು, ಯಕ್ಕನಹಳ್ಳಿ ಮಾರ್ಗವಾಗಿ ಕೊಪ್ಪದವರೆಗೂ ಮಾಡಲಾಗುವುದೆಂದು ಅಕ್ರಮ ಪಂಪ್‌ಸೆಟ್ ತೆರವು ಕಾರ್ಯಾಚರಣೆಯ ನೇತೃತ್ವ ವಹಿಸಿರುವ ಎಇಇ ಧನಂಜಯ 'ಜನತಾವಾಣಿ'ಗೆ ತಿಳಿಸಿದರು.

ಅಕ್ರಮ ಪಂಪ್‌ಸೆಟ್‌ಗಳಿಗೆ ಪೂರೈಕೆ ಆಗುತ್ತಿದ್ದ ವಿದ್ಯುತ್ ಸಂಪರ್ಕವನ್ನೂ ಕಡಿತಗೊಳಿಸಿದ್ದರಿಂದ ಗುರುವಾರ ಸಂಜೆ ಕೊಮಾರನಹಳ್ಳಿ ಬಳಿ ನಾಲೆಯಲ್ಲಿ 4.5 ಅಡಿಗೆ ನೀರಿನ ಹರಿವು ಹೆಚ್ಚಾಗಿತ್ತು. (4ನೇ ಪುಟಕ್ಕೆ)

# ಚಿಕ್ಕಬಳ್ಳಾಪುರದ ಸೊಳ್ಳೆಗಳಲ್ಲಿ ಝೀಕಾ ವೈರಸ್ ಪತ್ತೆ

ಬೆಂಗಳೂರು, ನ. 2 - ನೆರೆಯ ಕೇರಳ ರಾಜ್ಯವನ್ನು ನಡುಗಿಸುತ್ತಿರುವ ಝೀಕಾ ವೈರಸ್ ಇದೀಗ ಕರ್ನಾಟಕಕ್ಕೂ ಪ್ರವೇಶಿಸಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪದ ಚಿಕ್ಕಬಳ್ಳಾಪುರ ಜಿಲ್ಲೆಯ ಐದು ಗ್ರಾಮಗಳ ಸೊಳ್ಳೆಗಳಲ್ಲಿ ಈ ವೈರಸ್ ಪತ್ತೆಯಾಗಿದೆ.



ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ತಲಕಾಯಬೆಟ್ಟದ ಸೊಳ್ಳೆಗಳಲ್ಲಿ ಈ ವೈರಸ್ ಪತ್ತೆಯಾದ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಸಂದೇಶ ನೀಡಿದೆ.

ಮೂವತ್ತು ಗರ್ಭಿಣಿಯರೂ ಸೇರಿದಂತೆ 37 ಮಂದಿಯಲ್ಲಿ ತೀವ್ರ ಜ್ವರ ಕಾಣಿಸಿ ಕೊಂಡಿದ್ದು, ಇವರೆಲ್ಲರ ರಕ್ತದ ಮಾದರಿ ಯನ್ನು ನಿಮ್ಹಾನ್ಸ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ನಂತರ ಮನುಷ್ಯರಲ್ಲಿ ಝೀಕಾ ವೈರಸ್ ಹರಡಿದೆಯೇ ಎಂಬುದು ದೃಢವಾಗಲಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಸೊಳ್ಳೆಗಳಲ್ಲಿ ಈ ವೈರಸ್ ಹರಡಿರುವುದನ್ನು ದೃಢಪಡಿಸಿದ್ದು, ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳು ಜೊತೆಗೂಡಿ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿವೆ ಎಂದಿದ್ದಾರೆ.

ಸೋಂಕಿತ ಸೊಳ್ಳೆಯು ಕಚ್ಚಿದ ಬಳಿಕ 2ರಿಂದ 14 ದಿನಗಳಲ್ಲಿ ರೋಗದ ಲಕ್ಷಣಗಳು ಕಾಣಿಸುತ್ತವೆ. ಈ ಲಕ್ಷಣಗಳು ಎರಡು ವಾರಗಳ (3ನೇ ಪುಟಕ್ಕೆ)

## ತಂದೆ ವಿರುದ್ಧ ಮಗುವಿನ ಅಪಹರಣ ಪ್ರಕರಣ ದಾಖಲಿಸಲಾಗದು : ಹೈಕೋರ್ಟ್

ಮುಂಬೈ, ಅ. 2 – ಕಾನೂನಿನ ನಿರ್ಬಂಧ ಇರದ ಹೊರತು ತಂದೆ ತನ್ನ ಮಗುವನ್ನು ಕರೆದುಕೊಂಡು ಹೋದರೆ ಅದನ್ನು ಅಪಹರಣ ಎಂದು ಕರೆಯಲಾಗದು ಎಂದು ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠ ತಿಳಿಸಿದೆ.

ತಾಯಿಯ ಜೊತೆಗೆ ತಂದೆ ಸಹ ಮಗುವಿನ ಕಾನೂನು ಬದ್ಧ ಪೋಷಕರಾಗಿದ್ದಾರೆ. ಹೀಗಿರುವಾಗ ತಾಯಿಯ ಬಳಿಯಿದ್ದ ಅಪ್ರಾಪ್ತ ಮಗುವನ್ನು ಕರೆದುಕೊಂಡು ಹೋದ ಕಾರಣಕ್ಕೆ ಅಪಹರಣ ಪ್ರಕರಣ ದಾಖಲಿಸಲಾಗದು ಎಂದು ನ್ಯಾಯಮೂರ್ತಿಗಳಾದ ವಿನಯ್ ಜೋಷಿ ಹಾಗೂ ವಾಲ್ಮೀಕಿ ಎಸ್.ಎ. ಮೆನೆಜೆಸ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ಅಪ್ರಾಪ್ತರ ಕಾಳಜಿ ವಹಿಸುವವರು ಪೋಷಕರಾಗಿರುತ್ತಾರೆ. ತಂದೆಯ ಮೇಲೆ (2ನೇ ಪುಟಕ್ಕೆ)



ಉತ್ತರ ಗಾಜಾ ಪಟ್ಟಿಯ ಜಬಾಲಿಯಾ ನಿರಾಶ್ರಿತರ ಶಿಬಿರದಲ್ಲಿ ಇಸ್ರೇಲಿ ವಾಯುದಾಳಿಯಿಂದ ನಾಶವಾದ ಕಟ್ಟಡದ ಅವಶೇಷಗಳಿಂದ ಬಾಲಕಿಯನ್ನು ಹೊರತೆಗೆಯಲು ಪ್ಯಾಲೆಸ್ಟೀನಿಯಾದವರು ಪ್ರಯತ್ನಿಸುತ್ತಿರುವುದು.

## ಎ.ಐ. ನಿಯಂತ್ರಣಕ್ಕೆ 28 ದೇಶಗಳ ಸಹಮತ

ಲಂಡನ್, ನ. 2- ಬೃಹದಾಕಾರವಾಗಿ ಬೆಳೆಯುತ್ತಿರುವ ಕೃತಕ ಬುದ್ಧಿವಂತಿಕೆ (ಎ.ಐ.) ತರಬಹುದಾದ ವಿನಾಶಕಾರಿ ಅಪಾಯಗಳನ್ನು ನಿಯಂತ್ರಿಸಲು ಜೊತೆಯಾಗಿ ಕಾರ್ಯನಿರ್ವಹಿಸಲು ಅಮೆರಿಕ ಹಾಗೂ ಬ್ರಿಟನ್ ಸೇರಿದಂತೆ 28 ದೇಶಗಳ ನಿಯೋಗಿಗಳು ಸಮ್ಮತಿಸಿದ್ದಾರೆ.

ಎ.ಐ. ಸುರಕ್ಷತಾ ಶೃಂಗಸಭೆಯ ಮೊದಲ ಸಭೆಯಲ್ಲಿ ಆಧುನಿಕ ತಂತ್ರಜ್ಞಾನದ ಹೊಸ ದಿಗಂತಗಳ ಬಗ್ಗೆ ಚರ್ಚಿಸಲಾಗಿದೆ. ಎ.ಐ. ಮಾನವರ ಅಸ್ತಿತ್ವಕ್ಕೇ ಅಪಾಯ ತರಬಹುದು ಎಂದು ಕೆಲ ವಿಜ್ಞಾನಿಗಳು ಎಚ್ಚರಿಸುತ್ತಿರುವ ಹಿನ್ನೆಲೆಯಲ್ಲಿ ಈ ಸಭೆ ಪ್ರಾಮುಖ್ಯತೆ (2ನೇ ಪುಟಕ್ಕೆ)

## ಜೆಇಇ – ಮೇನ್ ಪಠ್ಯ ಕಡಿತ

ನವದೆಹಲಿ, ನ. 2 – ಸಿ.ಬಿ.ಎಸ್.ಇ. ಹಾಗೂ ಇತರೆ ಶಾಲಾ ಮಂಡಳಿಗಳು ಪಠ್ಯ ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ, ಜೆ.ಇ.ಇ. - ಮೇನ್ ಪರೀಕ್ಷೆಯ ಪಠ್ಯವನ್ನೂ ಕಡಿಮೆ ಮಾಡಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ತಿಳಿಸಿದೆ. ಜೆಇಇ – ಮೇನ್ 2024 ಜನವರಿ ಪರೀಕ್ಷೆಗೆ ಸಂಬಂಧಿಸಿದಂತೆ ಆದೇಶ ಹೊರಡಿಸಲಾಗಿದೆ. ಫೆಬ್ರವರಿ 12, 2024ರಲ್ಲಿ ಪರೀಕ್ಷೆಯ ಫಲಿತಾಂಶ ಪ್ರಕಟಿಸಲಾಗುವುದು ಎಂದೂ ತಿಳಿಸಲಾಗಿದೆ.

ಕೊರೊನಾ ಹಿನ್ನೆಲೆಯಲ್ಲಿ ಹಲವಾರು ಪರೀಕ್ಷಾ ಮಂಡಳಿಗಳು ಪಠ್ಯ ಕಡಿತ ಮಾಡಿವೆ. ಈ ಹಿನ್ನೆಲೆಯಲ್ಲಿ ಪರೀಕ್ಷೆಯ ಅಂಶಗಳನ್ನು ಕಡಿತಗೊಳಿಸಲಾಗಿದೆ.

## 2.87 ಲಕ್ಷ ಟನ್ ಗೋಧಿ ಹರಾಜು

ನವದೆಹಲಿ, ನ. 2 – ಕೇಂದ್ರ ಸರ್ಕಾರದ ಆಹಾರ ನಿಗಮ 2.87 ಲಕ್ಷ ಟನ್ ಗೋಧಿಯನ್ನು ತನ್ನ ಕಾಪು ದಾಸ್ತಾನಿನಿಂದ ಸಗಟು ಗ್ರಾಹಕರಿಗೆ ಬಿಡುಗಡೆ ಮಾಡಿದೆ.

19ನೇ ಸುತ್ತಿನ ಇ-ಹರಾಜಿನಲ್ಲಿ ಗೋಧಿ ಹಾಗೂ ಅಕ್ಕಿಯನ್ನು ಮಾರಾಟ ಮಾಡಲಾಗಿದೆ. ಜೂನ್ 28ರಿಂದ ಪ್ರತಿ ವಾರ ಇ-ಹರಾಜು ನಡೆಸಲಾಗುತ್ತಿದೆ. ಅಕ್ಕಿ ಹಾಗೂ ಗೋಧಿಯ ಬೆಲೆ ನಿಯಂತ್ರಣದಲ್ಲಿರಿಸಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

# ದಾನ - ಧರ್ಮದಿಂದಲೇ ನನಗೆ ಶ್ರೇಯಸ್ಸು ಸಿಕ್ಕಿದೆ : ಶಾಸಕ ಎಸ್ಸೆಸ್

## ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾದ ಎಸ್ಸೆಸ್ ಅವರಿಗೆ ಜಿಲ್ಲಾ ಸಹಕಾರ ಬ್ಯಾಂಕುಗಳ ಒಕ್ಕೂಟದಿಂದ ಸನ್ಮಾನ

ದಾವಣಗೆರೆ,ನ.2- 'ನಾನು ಮಾಡಿದ ದುಡಿಮೆಯಲ್ಲಿ ಗಳಿಸಿದ ಲಾಭದಲ್ಲಿ ಶೇ. 10 ರಷ್ಟನ್ನು ಸಮಾಜಕ್ಕೆ ಕೊಟ್ಟಿರುವ ದಾನ -ಧರ್ಮದಿಂದಲೇ ನನಗೆ ಶ್ರೇಯಸ್ಸು ಸಿಕ್ಕಿದೆ' ಎಂದು ಹಿರಿಯ ಶಾಸಕರೂ ಆಗಿರುವ ಬಾಪೂಜಿ ಸಹಕಾರಿ ಬ್ಯಾಂಕ್ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಸಂತೃಪ್ತಿ ವ್ಯಕ್ತಪಡಿಸಿದರು.

ವಿಜಯಪುರದ ಡೀಮ್ಡ್ ವಿಶ್ವವಿದ್ಯಾಲಯ (ಬಿಎಲ್‌ಡಿಇ) ದಿಂದ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾದ ತಮಗೆ ದಾವಣಗೆರೆ ಜಿಲ್ಲಾ ಸಹಕಾರ ಬ್ಯಾಂಕುಗಳ ಒಕ್ಕೂಟದಿಂದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ನೀಡಿದ ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿ ಅವರು ಮಾತನಾಡಿದರು.

ನಮ್ಮ ದುಡಿಮೆಯಲ್ಲೇ ಕನಿಷ್ಠ ಶೇ .10 ರಷ್ಟು ದಾನ - ಧರ್ಮ ಮಾಡಿದಾಗ ಸಮಾಜಕ್ಕೆ ಕಿಂಚಿತ್ತೂ ಋಣ ತೀರಿಸಲು ಸಾಧ್ಯ. ಅಲ್ಲದೇ, ಈ ಮೂಲಕವೂ ದೇಶದ ಅಭಿವೃದ್ಧಿಗೆ ನಮ್ಮ ಪಾಲು ಮತ್ತು ಸಹಯೋಗ ನೀಡಿದಂತಾಗುತ್ತದೆ ಎಂದು ಎಸ್ಸೆಸ್ ಪ್ರತಿಪಾದಿಸಿದರು.

ದಾನ - ಧರ್ಮದಿಂದ ನಮ್ಮ ಜೀವನದಲ್ಲಿ ಶಾಂತಿ - ನೆಮ್ಮದಿ ಸಿಗುತ್ತದೆ ; ಇದು, ನಮ್ಮ ಭಾರತೀಯ ಸಂಸ್ಕೃತಿ



ಕೂಡಾ ಆಗಿದ್ದು, ಇದನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಹ ದೇಶದ ಸಂಸ್ಕೃತಿಗೆ ಸಹಕಾರ ನೀಡಬೇಕು ಎಂದು ಅವರು ಕಳಕಳಿ ವ್ಯಕ್ತಪಡಿಸಿದರು.

ಇವತ್ತು ನನಗೆ ಪ್ರಶಸ್ತಿ - ಪುರಸ್ಕಾರಗಳು ಬಂದಿವೆ ಎಂದರೆ ಅದರ ಹಿಂದೆ ದಾನ - ಧರ್ಮದ ಕೊಡುಗೆ ಇದೆ. ಸ್ಥಾನ - ಮಾನ, ಗೌರವಾಧರಗಳು ದೊರೆತಿದ್ದರೆ ಅದಕ್ಕೆ ಇದೇ ಕಾರಣ. ಅತ್ಯುತ್ತಮವಾಗಿ ಆರೋಗ್ಯವಾಗಿದ್ದು, ಆಯಸ್ಸು ವೃದ್ಧಿಸಲು ಅದೇ ಕಾರಣ ಎಂದು ತಮಗೆ ಸಿಕ್ಕಿರುವ ಶ್ರೇಯಸ್ಸಿನ ಗುಟ್ಟನ್ನು ಎಸ್ಸೆಸ್ ಎಳೆ-ಎಳೆಯಾಗಿ ಬಿಡಿಸಿಟ್ಟರು.

ನನ್ನ ಜೀವನದಲ್ಲಿ ನಾನು ಯಾರನ್ನೂ ವಿರೋಧಿಸಿಲ್ಲ. ನನ್ನನ್ನು ವಿರೋಧಿಸಿದವರನ್ನು ಅತ್ಯಂತ ಪ್ರೀತಿಯಿಂದ ಕಂಡಿದ್ದೇನೆ. ಎಲ್ಲರೂ ನನ್ನವರೇ ಎನ್ನುವ ಭಾವನೆಯಿಂದ ಸ್ಪಂದಿಸಿದ್ದೇನೆ. ಇದೂ ಕೂಡಾ ನನ್ನ ಶ್ರೇಯಸ್ಸಿಗೆ ಕಾರಣ ಎಂದು ಎಸ್ಸೆಸ್ ಹೇಳಿದರು.

ಪ್ರಶಸ್ತಿ - ಪುರಸ್ಕಾರಗಳು ನಮ್ಮ ಜವಾಬ್ದಾರಿ ಹೆಚ್ಚಿಸುತ್ತವೆ ಎಂದ ಅವರು, ಸಹಕಾರ ಬ್ಯಾಂಕುಗಳ ಒಕ್ಕೂಟದಿಂದ ಇಂದು ನೀಡಿರುವ ಸನ್ಮಾನಕ್ಕೆ ನನ್ನ ಜವಾಬ್ದಾರಿ ಹೆಚ್ಚಿಸಿದೆ. ಮತ್ತಷ್ಟು ಸಾಮಾಜಿಕ ಸೇವೆ ಸಲ್ಲಿಸಬೇಕು ಎನ್ನುವ ಪ್ರೇರಣೆ - ಉತ್ಸಾಹ ತಂದಿದೆ ಎಂದು ಶಿವಶಂಕರಪ್ಪ ಪ್ರತಿಕ್ರಿಯಿಸಿದರು.

**ಮಾರ್ಗದರ್ಶನ ಬೇಕು :** ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಮಾತುಗಳನ್ನಾಡಿದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷರೂ ಆಗಿರುವ ಜಿಲ್ಲಾ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವ ಕಾರ್ಯದರ್ಶಿ ಎನ್.ಎ. ಮುರುಗೇಶ್ ಅವರು, ಎಸ್ಸೆಸ್ ನೂರ್ಕಾಲ ಬಾಳಲಿ, ಅವರ ಮಾರ್ಗದರ್ಶನ ನಮ್ಮೆಲ್ಲರಿಗೆ ಇರಲಿ ಎಂದು ಆಶಿಸಿದರು.

ಇತ್ತೀಚಿನ ದಿನಗಳಲ್ಲಿ ಒಂದು ಸಣ್ಣ ಪ್ರಶಸ್ತಿಗೂ ಅರ್ಜಿ ಹಾಕಿ ಪಡೆಯುವಂತಹ ಪರಿಸ್ಥಿತಿ ಇದೆ. ಆದರೆ, ನಾವು ಮಾಡುವ ಸಾಮಾಜಿಕ ಸೇವೆ ಅರ್ಥಪೂರ್ಣ ಮತ್ತು ಮಾದರಿಯಾಗಿದ್ದಲ್ಲಿ ಉನ್ನತ ಪ್ರಶಸ್ತಿಗಳು ನಮ್ಮನ್ನು ಹುಡುಕಿಕೊಂಡು ಬರುತ್ತವೆ ಎನ್ನುವುದಕ್ಕೆ ಎಸ್ಸೆಸ್ ಉದಾಹರಣೆಯಾಗಿದ್ದಾರೆ ಎಂದು ಹೇಳಿದರು.

**ಶತಾಯುಷಿಗಳಾಗಲಿ :** ತಮ್ಮ 93ನೇ ಇಳಿ ವಯಸ್ಸಿನಲ್ಲೂ ಯುವಕರು ನಾಚುವಂತೆ (4ನೇ ಪುಟಕ್ಕೆ)

ಜನ್ಮ ದಿನದ ಶುಭಾಶಯಗಳು



ಇಂದು ಜನ್ಮ ದಿನದ ಸಂಭ್ರಮದಲ್ಲಿರುವ
ಎಸ್.ಸಿ. ಕನ್‌ಸ್ಟ್ರಕ್ಷನ್ ಮಾಲೀಕರೂ
ಮತ್ತು ಗುತ್ತಿಗೆದಾರರೂ ಆದ
ಶ್ರೀ ಸುಭಾಷ್‌ಚಂದ್ರ. ಎಸ್.
ಅವರಿಗೆ ಜನ್ಮದಿನದ ಶುಭಾಶಯಗಳು.

ಶುಭಾಶಯ ಕೋರುವವರು :
ರಾಷ್ಟ್ರೀಯ ಹೆದ್ದಾರಿ ಗುತ್ತಿಗೆದಾರರ ಸಂಘ
ದಾವಣಗೆರೆ, ಚಿತ್ರದುರ್ಗ ಮತ್ತು ಶಿವಮೊಗ್ಗ

# ನಿರ್ವಾಹಕನ ನುಡಿ ಪ್ರೇಮ, ಕನ್ನಡದ ರಥವಾದ ಬಸ್

## ಕೈಮುಗಿದು ಏರು ಇದು ಕನ್ನಡದ ತೇರು



ಹರಪನಹಳ್ಳಿ, ನ. 2- ಸರ್ಕಾರಿ ಬಸ್‌ನಲ್ಲಿ ವಿವಿಧ ಕಲಾವಿದರು, ಕನ್ನಡ ಪುಸ್ತಕಗಳು, ಶಿಕ್ಷಣ ಸಂಸ್ಥೆಗಳ ಪರಿಚಯ, ಯುವ ಸಾಹಿತಿಗಳ ಮಾಹಿತಿ, ತಳಿರು ತೋರಣ, ಬಾಳೆಕಂಬದಿಂದ ಸಿಂಗಾರ, ಕನ್ನಡ ಧ್ವಜದ ಹಾರಾಟ, ಕನ್ನಡ ಹಾಡುಗಳ ನಿನಾದ ಇದು 68ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಪಟ್ಟಣದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ಸೊಂದರಲ್ಲಿ ಕಂಡು ಬಂದ ದೃಶ್ಯ.

ಚಿಗಟೇರಿ ಗ್ರಾಮದ ಬಸ್ ಕಂಡಕ್ಟರ್ ಬಿ.ಎಂ. ನಾಗರಾಜ್ ಕಳೆದ 10 ವರ್ಷಗಳಿಂದ ಸಾರಿಗೆ ಬಸ್ಸನ್ನು ರಾಜ್ಯೋತ್ಸವದಂದು ಕನ್ನಡ ರಥವನ್ನಾಗಿ ಮಾರ್ಪಡಿಸಿ ಕನ್ನಡ, ಸಾಹಿತ್ಯ, ಹಾಡುಗಳು, ಸಾಹಿತಿ, ಕವಿಗಳನ್ನು ಬಸ್‌ನಲ್ಲಿ ಪರಿಚಯಿಸಿ ಪ್ರಯಾಣಿಕರ ಗಮನ ಸೆಳೆಯುತ್ತಾ ಬಂದಿದ್ದಾರೆ.

ಪ್ರತಿವರ್ಷ ಒಂದೊಂದು ರೀತಿ ಬಸ್ಸನ್ನು ಕನ್ನಡಮಯವಾಗಿಸುವ ಈತ ಈ ಬಾರಿ ಬಸ್ಸಿನ ಮುಂಭಾಗ ಸುತ್ತಲೂ ಕೆಂಪು, ಹಳದಿ ಬಣ್ಣದ ಬಾವುಟ ಸುತ್ತಿ, ಬಲೂನುಗಳನ್ನು ಹಾರವಾಗಿ ಮಾಡಿ ಹಾಕಿದ್ದಾರೆ. ಒಳಗಡೆ ವಿಶ್ವೇಶ್ವರಯ್ಯ, ಅಬ್ದುಲ್ ಕಲಾಂ, ಗಿರೀಶ್ ಕಾರ್ನಾಡ್ ಹೀಗೆ ಸಾಹಿತ್ಯ, ವಿಜ್ಞಾನ, ಸಾಂಸ್ಕೃತಿಕ, ರಂಗಭೂಮಿ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರ ಭಾವಚಿತ್ರ ಅಂಟಿಸಿದ್ದಾರೆ.

ಕರ್ನಾಟಕದ ಹೆಸರಾಂತ ಸ್ಥಳಗಳ ಪರಿಚಯ, ಭಾವಚಿತ್ರ, ಮಾಹಿತಿ, ಕವಿಗಳ, ಸಾಹಿತಿಗಳ ಪರಿಚಯ ಹಾಗೂ ರಕ್ತದಾನ ಮಾಡಿ ಜೀವ ಉಳಿಸಿ ಎಂಬ ಬರಹ, ಇವೆಲ್ಲವುಗಳ ಮಧ್ಯೆ ಕನ್ನಡದ ನಾಡು- ನುಡಿಗೆ ಸಂಬಂಧಪಟ್ಟ ಸರ್ಕಾರ ನಿರ್ದೇಶನ ನೀಡಿದ 'ಉದಯವಾಗಲಿ ನಮ್ಮ ಕನ್ನಡ ನಾಡು,' ಎಲ್ಲಾದರೂ ಇರು ಎಂತಾದರೂ ಇರು ನಿ ಕನ್ನಡಿವಾಗಿರು, ಒಂದೇ ಒಂದೇ ಕರ್ನಾಟಕ ಒಂದೇ, ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ, ಹೊತ್ತಿತು ಹೊತ್ತಿತು ಕನ್ನಡ ದೀಪ ಹೀಗೆ ಇಂಪಾದ ಹಾಡುಗಳ ನೀನಾದ, ಒಟ್ಟಾರೆ ಬಸ್‌ನಲ್ಲಿ ಹತ್ತಿದರೆ ಇಳಿಯಲು ಮನಸ್ಸು ಬರವುದಿಲ್ಲ. ಈ ಬಸ್ ಹರಪನಹಳ್ಳಿ-ಕೊಟ್ಟೂರು ಮಾರ್ಗದಲ್ಲಿ ಸಂಚರಿಸುತ್ತದೆ.



### ಹರಪನಹಳ್ಳಿ-ಕೊಟ್ಟೂರು ಮಾರ್ಗದ ಸರ್ಕಾರಿ ಬಸ್‌ನಲ್ಲಿ ಕನ್ನಡ ಧ್ವಜದ ಹಾರಾಟ, ಕನ್ನಡ ಹಾಡುಗಳ ನಿನಾದ

ಕಂಡಕ್ಟರ್ ಬಿ.ಎಂ. ನಾಗರಾಜ್ ಮಾತನಾಡಿ, ಕನ್ನಡ ಸಾಹಿತ್ಯದ ಬಗ್ಗೆ ಜನರಿಗೆ ಜಾಗೃತಿ ಮೂಡಲಿ ಎಂಬ ಸದಾಶಯದಿಂದ ಪ್ರತಿವರ್ಷ ವಿಭಿನ್ನವಾಗಿ ಬಸ್ಸನ್ನು ಕನ್ನಡಮಯವಾಗಿಸುತ್ತೇನೆ, ಪ್ರತಿವರ್ಷ ಸ್ವಂತ ಖರ್ಚಿನಲ್ಲಿ ಕನ್ನಡ ಉಳಿಸುವ ಕಾಯಕ ಮಾಡುತ್ತಾ ಬಂದಿದ್ದೇನೆ. ಕನ್ನಡದ ಕೆಲಸಕ್ಕೆ ಸ್ಥಳೀಯ ಡಿಪೋ ಮ್ಯಾನೇಜರ್ ಹಾಗೂ ಸಿಬ್ಬಂದಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಮೆಕ್ಯಾನಿಕ್‌ಗಳಾದ ರಮೇಶ್ ಹಾಗೂ ಗಜನಾಯ್ಕ ಅವರ ಪ್ರೋತ್ಸಾಹ ಹಾಗೂ ಸಹಕಾರ ಯಾವಾಗಲೂ ಇದೆ ಎನ್ನುತ್ತಾರೆ.

# ಆಪರೇಷನ್ ಹಸ್ತ ಮಾಡಲು ಮುಂದಾದ ಕಾಂಗ್ರೆಸ್

**ಎಂಟು ಶಾಸಕರನ್ನು ಸೆಳೆಯಲು ನಿರ್ಧಾರ**

ಬೆಂಗಳೂರು, ನ. 2 - ಆಪರೇಷನ್ ಕಮಲಕ್ಕೂ ಮುನ್ನವೇ ಆಪರೇಷನ್ ಹಸ್ತ ಮಾಡಲು ಕಾಂಗ್ರೆಸ್ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಮಹಾರಾಷ್ಟ್ರ ಮಾದರಿಯಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪತನಗೊಳ್ಳಲಿದೆ ಎಂದು ಬಿಜೆಪಿ ಹಿರಿಯ ನಾಯಕ ಹಾಗೂ ಶಾಸಕ ರಮೇಶ್ ಜಾರಕಿಹೊಳಿ ಹೇಳಿಕೆ ನೀಡಿದ ಬೆನ್ನಲ್ಲೇ ಆಪರೇಷನ್ ಹಸ್ತ ಚುರುಕುಗೊಂಡಿದೆ.

ಮಾಜಿ ಸಚಿವರಾದ ಎಸ್.ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್ ಸೇರಿದಂತೆ 8 ಬಿಜೆಪಿ ಶಾಸಕರು ನವೆಂಬರ್ 10ರಂದು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಲಿದ್ದಾರೆ ಎಂದು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ 20ಕ್ಕೂ ಹೆಚ್ಚು ಸ್ಥಾನವನ್ನು ಕರ್ನಾಟಕದಿಂದ ಗೆಲ್ಲಲೇಬೇಕೆಂದು ಪಣತೊಟ್ಟಿರುವ ಕಾಂಗ್ರೆಸ್, ಮತ ಗಳಿಕೆ ಪ್ರಮಾಣ ಹೆಚ್ಚಿಸಿಕೊಳ್ಳಲು ಬಿಜೆಪಿ ಶಾಸಕರು ಮತ್ತು ಮುಖಂಡರನ್ನು ಸೆಳೆದುಕೊಳ್ಳುತ್ತಿದೆ. ಚುನಾವಣೆಯಲ್ಲಿ ಹೆಚ್ಚು ಮತ ಗಳಿಕೆ ತಂತ್ರ ಒಂದೆಡೆಯಾದರೆ ಮತ್ತೊಂದೆಡೆ ಆಪರೇಷನ್ ಕಮಲದಿಂದ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ಹಿನ್ನಡೆಯಾಗ ಬಾರದೆಂಬ ಉದ್ದೇಶದಿಂದ ಪ್ರತಿಪಕ್ಷಗಳ ಸಂಖ್ಯಾ ಬಲವನ್ನು ಕುಗ್ಗಿಸುವ ಯತ್ನವೂ ಇದಾಗಿದೆ.

ಜೆಡಿಎಸ್-ಕಾಂಗ್ರೆಸ್ ನೇತೃತ್ವದ ಹೆಚ್.ಡಿ. ಕುಮಾರಸ್ವಾಮಿ ಸರ್ಕಾರ ಪತನಗೊಳ್ಳಲು ಕಾರಣರಾದ ಅಂದಿನ ಕಾಂಗ್ರೆಸ್ ಶಾಸಕರೇ ಇಂದು ಬಿಜೆಪಿಯಿಂದ ಆಪರೇಷನ್ ಹಸ್ತಕ್ಕೆ ಒಳಗಾಗುತ್ತಿದ್ದಾರೆ.

ಶಾಸಕರ ಜೊತೆಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಪರಾಭವಗೊಂಡ ಜೆಡಿಎಸ್ ಮತ್ತು ಬಿಜೆಪಿಯ ಅಭ್ಯರ್ಥಿಗಳನ್ನು ಸೆಳೆದು ಮತ ಪ್ರಮಾಣ ಹೆಚ್ಚಿಸಿಕೊಳ್ಳುವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತಿದೆ.

ತಮ್ಮ ಆಡಳಿತವಿರುವ ಸರ್ಕಾರದಲ್ಲಿ ಉಂಟಾಗಿರುವ ಗೊಂದಲ ನಿವಾರಿಸಲು ನಿನ್ನೆ ದಿಢೀರನೆ ಬೆಂಗಳೂರಿಗೆ ಧಾವಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಸುದೀರ್ಘ ಚರ್ಚೆ ನಡೆಸಿದ್ದರು.

ಈ ಸಂದರ್ಭದಲ್ಲೇ ಪಕ್ಷ ಮತ್ತು ಸರ್ಕಾರವನ್ನು ಮತ್ತಷ್ಟು ಬಲಗೊಳಿಸಿಕೊಳ್ಳಲು ಪಕ್ಷದ ಸಿದ್ಧಾಂತಗಳಿಗೆ ಒಪ್ಪಿ ಬಿಜೆಪಿ-ಜೆಡಿಎಸ್ ತೊರೆದು ಬರುವ ಶಾಸಕರು ಮತ್ತು ಮುಖಂಡರನ್ನು ಸೇರಿಸಿಕೊಳ್ಳಲು ಸಭೆಯಲ್ಲೇ ಎಐಸಿಸಿ ಮುಖಂಡರು ಹಸಿರು ನಿಶಾನೆ ತೋರಿದ್ದಾರೆ.

ವರಿಷ್ಠರ ಅನುಮತಿ ದೊರೆಯುತ್ತಿದ್ದಂತೆ ಆಪರೇಷನ್ ಹಸ್ತಕ್ಕೆ ಶಾಸಕರನ್ನು ಸೆಳೆಯುವ ಕಾರ್ಯ ಆರಂಭವಾಗಿದೆ.

# ಹೊನ್ನಾಳಿ : ಶಿವ ಸೊಸೈಟಿ ಅಧ್ಯಕ್ಷರಾಗಿ ಚಂದ್ರಪ್ಪ ಉಪಾಧ್ಯಕ್ಷರಾಗಿ ಕೆಂಚಪ್ಪ ಆಯ್ಕೆ



ಹೊನ್ನಾಳಿ, ಅ.2- ಶಿವ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿ ರಾಮೇಶ್ವರ ಪಿ. ಚಂದ್ರಪ್ಪ ಪಾಟೀಲ್, ಉಪಾಧ್ಯಕ್ಷರಾಗಿ ಸೂರಗೊಂಡನಕೊಪ್ಪ ಬಿ.ಕೆಂಚಪ್ಪ ಇಂದು ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಸಿಡಿಒ ಹಾಗೂ ಚುನಾವಣಾಕಾರಿ ನವೀನ್ ಕುಮಾರ್ ತಿಳಿಸಿದರು. ನಿರ್ದೇಶಕರಾದ ಶೈಲೇಶ್, ಮಂಜುಳಮ್ಮ, ಶಿವಕುಮಾರ್, ಶಂಕರೇಗೌಡ, ಬಸವರಾಜು, ಚೇತನ್, ಕರಿಬಸಪ್ಪ, ಸತೀಶ್, ಚನ್ನವೀರಪ್ಪ, ಯಶೋಧಮ್ಮ, ಕೃಷ್ಣನಾಯ್ಕ್, ಕಾರ್ಯದರ್ಶಿ ರುದ್ರೇಶ್,ಸಾಧು ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಗದ್ದಿಗೇಶ್, ಅರಬಗಟ್ಟೆ ರಮೇಶ್ ಹಾಗೂ ಇತರರು ಇದ್ದರು.

# ಹೆಣ್ಣಾದ ತೃತೀಯ ಲಿಂಗಿಗೂ ಗೃಹ ಹಿಂಸಾಚಾರ ಅನ್ವಯ?

### ಸುಪ್ರೀಂ ನಿಂದ ಪರಿಶೀಲನೆ

ನವದೆಹಲಿ, ನ. 2 – ತೃತೀಯ ಲಿಂಗಿಯೊಬ್ಬರು ಶಸ್ತ್ರಚಿಕಿತ್ಸೆಯ ನಂತರ ಮಹಿಳೆಯಾಗಿ ಪರಿವರ್ತನೆಯಾದರೆ ಗೃಹ ಹಿಂಸಾಚಾರ ಕಾಯ್ದೆಯಡಿ ಪರಿಹಾರ ಪಡೆಯಲು ಸಾಧ್ಯವೇ ಎಂಬ ಬಗ್ಗೆ ಸುಪ್ರೀಂ ಕೋರ್ಟ್ ಪರಿಶೀಲನೆ ನಡೆಸಲಿದೆ.

ಶಸ್ತ್ರಚಿಕಿತ್ಸೆಯ ನಂತರ ಮಹಿಳೆಯಾದವರು ಗೃಹ ಹಿಂಸಾಚಾರ ಕಾಯ್ದೆಯಡಿ ಬರುತ್ತಾರೆ ಎಂದು ಬಾಂಬೆ ಹೈಕೋರ್ಟ್ ತೀರ್ಪು ನೀಡಿತ್ತು.

ಈ ತೀರ್ಪು ಪ್ರಶ್ನಿಸಿ ಪತಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ. ಶಸ್ತ್ರಚಿಕಿತ್ಸೆಯಿಂದ ಮಹಿಳೆಯಾದ ವ್ಯಕ್ತಿ ಗೃಹ ಹಿಂಸಾಚಾರ ಕಾಯ್ದೆಯಡಿ ಬರುತ್ತಾರೆಯೇ ಹಾಗೂ ಜೀವನಾಂಶ ಪಡೆಯಬಹುದೇ ಎಂಬ ಬಗ್ಗೆ ಸುಪ್ರೀಂ ಕೋರ್ಟ್ ನಿರ್ಧರಿಸಲಿದೆ.

# ಸೇಂಟ್ ಜಾನ್ಸ್‌ನಲ್ಲಿ ರಾಜ್ಯೋತ್ಸವ



ದಾವಣಗೆರೆ, ನ. 2- ಕರ್ನಾಟಕ ಎಂದು ಮರುನಾಮಕರಣವಾಗಿ ಇಂದಿಗೆ 50 ವರ್ಷಗಳು ತುಂಬಿದ ಸವಿನೆನಪಿನಲ್ಲಿ ನಗರದ ಸೇಂಟ್‌ಜಾನ್ಸ್ ವಿದ್ಯಾಸಂಸ್ಥೆಯಲ್ಲಿ 68ನೇ ವರ್ಷದ ರಾಜ್ಯೋತ್ಸವವನ್ನು ಶಾಲಾ ಆವರಣದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ದಾವಣಗೆರೆ ವಿವಿ ಸಹ ಪ್ರಾಧ್ಯಾಪಕ ಡಾ. ಕೆ. ಮಲ್ಲಿಕಾರ್ಜುನ ವಿಶೇಷ ಅತಿಥಿಗಳಾಗಿ ಆಗಮಿಸಿ, ಕನ್ನಡದ ಪ್ರಾಚೀನ ಮಹಾಕಾವ್ಯಗಳು, ಶಾಸನಗಳು, ನದಿಗಳು, ಪಾಕೃತಿಕ ಸನ್ನಿವೇಶಗಳನ್ನು, ಕನ್ನಡಿಗರ ಗುಣ ಸ್ವಭಾವ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್‌ಕುಮಾರ್, ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ, ಖಜಾಂಚಿ ಪ್ರವೀಣ್ ಹುಲ್ಲುಮನೆ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲ ಆರ್. ಸೈಯದ್ ಆರೀಫ್, ಶ್ರೀಮತಿ ಪ್ರೀತಾ ಟಿ. ರೈ, ಉಪ ಪ್ರಾಂಶುಪಾಲ ಶ್ರೀಮತಿ ಎಸ್.ಎಂ. ನೇತ್ರಾವತಿ ಮತ್ತಿತರರು ಉಪಸ್ಥಿತರಿದ್ದರು.

# ಎ.ಐ. ನಿಯಂತ್ರಣಕ್ಕೆ ಸಹಮತ

(1ನೇ ಪುಟದಿಂದ) ಪಡೆದುಕೊಂಡಿದೆ.

ಎ.ಐ. ತಂತ್ರಜ್ಞಾನದ ಅಪಾಯಗಳನ್ನು ಅರ್ಥ ಮಾಡಿಕೊಂಡು ದೀರ್ಘಾವಧಿಯಲ್ಲಿ ಸುರಕ್ಷತೆ ಹೊಂದಲು ಈ ಸಭೆ ಮಹತ್ವದ್ದಾಗಿದೆ ಎಂದು ಬ್ರಿಟನ್ ಪ್ರಧಾನ ಮಂತ್ರಿ ರಿಶಿ ಸುನಕ್ ಹೇಳಿದ್ದಾರೆ. ಬ್ರಿಟನ್ ಹಾಗೂ ಇತರೆ ದೇಶಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎ.ಐ. ಟೆಕ್ ಕಂಪನಿಗಳ ಉತ್ತರದಾಯಿತ್ವವನ್ನು ಶಾಸನದ ಮೂಲಕ ನಿಗದಿ ಪಡಿಸಬೇಕು ಎಂದು ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಒತ್ತಾಯಿಸಿದರು.

ಶೃಂಗಸಭೆಯಲ್ಲಿ ಪಾಲ್ಗೊಂಡ ದೇಶಗಳು ಬೀಟ್‌ಚ್ಲಿ ಎಂಬ ಹೆಸರಿನ ಘೋಷಣೆಗೆ ಸಹಿ ಹಾಕಿವೆ. ಎ.ಐ. ಅಪಾಯಗಳಿಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಸರಣಿ ಸಭೆಗಳನ್ನು ನಡೆಸಲು ನಿರ್ಧರಿಸಲಾಗಿದೆ.

# ಪ್ರಕರಣ ದಾಖಲಿಸಲಾಗದು : ಹೈಕೋರ್ಟ್

(1ನೇ ಪುಟದಿಂದ) ಯಾವುದೇ ನಿರ್ಬಂಧ ಇಲ್ಲದಿರುವಾಗ, ಸ್ವಂತ ಮಗುವನ್ನು ಅಪಹರಿಸಿದ ಪ್ರಕರಣ ದಾಖಲಿಸಲಾಗದು ಎಂದು ನ್ಯಾಯಾಲಯ ಹೇಳಿದೆ.

ತನ್ನ ಪತಿ ಮೂರು ವರ್ಷದ ಮಗುವನ್ನು ಅಪಹರಿಸಿದ್ದಾರೆ ಎಂದು ವಿರಸಿತ ಪತ್ನಿ ಮಾರ್ಚ್ 29, 2023ರಲ್ಲಿ ಅಮರಾವತಿ ಪೊಲೀಸರಲ್ಲಿ ಎಫ್.ಐ.ಆರ್. ದಾಖಲಿಸಿದ್ದರು. ಈ ಬಗ್ಗೆ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದ ತಂದೆ, ನಾನು ಮಗುವಿನ ಸಹಜ ಪೋಷಕ. ಹೀಗಾಗಿ ಅಪಹರಣ ಪ್ರಕರಣ ದಾಖಲಿಸಲಾಗದು ಎಂದು ವಾದ ಮಂಡಿಸಿದ್ದರು.

# ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದಿಂದ ಸಂಗೀತ ಸೌರಭ



**ಹರಪನಹಳ್ಳಿ**

ಹರಪನಹಳ್ಳಿ, ನ. 2- ಹರಪನಹಳ್ಳಿ ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ವತಿಯಿಂದ 68ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಸಂಗೀತ ಸೌರಭ ಕಾರ್ಯಕ್ರಮ ಹಾಗೂ ಸನ್ಮಾನ ಸಮಾರಂಭವನ್ನು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ನೀಲಗುಂದದ ಗುಡ್ಡದ ಸಂಸ್ಥಾನ ಜಂಗಮ ಪೀಠದ ಶ್ರೀ ಚನ್ನಬಸವ ಶಿವಯೋಗಿಗಳು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ಅಧ್ಯಕ್ಷ ನಿಚ್ಚವನಹಳ್ಳಿ ಭೀಮಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಹಡಗಲಿಯ ವಲಯ ಅರಣ್ಯಾಧಿಕಾರಿ ರೇಣುಕಮ್ಮ, ಕೀಲು, ಮೂಳೆ ನಾಟಿ ವೈದ್ಯ ಡಾ. ಬಿ.ಬಿ.ಹೊಸೂರಪ್ಪ ಅವರನ್ನು ಸನ್ಮಾನಿಸಿ, ಗೌರವಿಸಿದರು.

ಉಪವಿಭಾಗಾಧಿಕಾರಿ ಟಿ.ವಿ. ಪ್ರಕಾಶ್, ಎಡಿಬಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಕನ್ನಡ ಸಹ ಪ್ರಾಧ್ಯಾಪಕ ಡಾ. ಡಿ. ತಿಪ್ಪೇಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ತಹಶಿಲ್ದಾರ್ ಗಿರೀಶ್ ಬಾಬು, ಇಒ ಪ್ರಕಾಶ, ಬಿಇಒ ಯು. ಬಸವರಾಜಪ್ಪ, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ರಾಜ್ಯೋತ್ಸವ ಪ್ರಶಸ್ತಿ ವಿಜೇತ ಬಾಗಳಿ ಷಡಕ್ಷರಪ್ಪ, ಮುಖಂಡರಾದ ಹೆಚ್.ಎನ್. ಪರಸನಾಯ್ಕ, ದೇವರ ತಿಮ್ಮಲಾಪುರದ ನಾಗರಾಜ ಬಣಕಾರ್, ಬೆಣ್ಣಿಹಳ್ಳಿಯ ನಿವೃತ್ತ ಶಿಕ್ಷಕ ಅಬ್ದುಲ್ ಸಲಾಂ, ನೂರುಲ್ಲಾ ಸಾಬ್, ಮೋತಿ ಮಾರುತಿ, ಮುಸ್ತಾಪ್ ಸಾಬ್ ಸೇರಿದಂತೆ ಇತರರು ಇದ್ದರು.

# ಕೆ. ರೇವಣಸಿದ್ದಪ್ಪ ಅವರಿಗೆ ಬೀಳ್ಕೊಡುಗೆ



**ಜಗಳೂರು**

ಜಗಳೂರು, ನ. 2- ಜಗಳೂರು ಅಗ್ನಿಶಾಮಕ ಠಾಣೆಯಲ್ಲಿ ಸೇವೆ ಸಲ್ಲಿಸಿ, ವಯೋನಿವೃತ್ತಿ ಹೊಂದಿರುವ ಕೆ. ರೇವಣಸಿದ್ದಪ್ಪ ಇವರಿಗೆ ಈಚೆಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು. ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪುಟ್ಟಸ್ವಾಮಿ ಮತ್ತು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಅಶೋಕ್ ಮತ್ತು ದಾವಣಗೆರೆ ಅಗ್ನಿಶಾಮಕ ಠಾಣಾಧಿಕಾರಿ ಅವಿನಾಶ್ ಮತ್ತು ಜಗಳೂರು ಅಗ್ನಿಶಾಮಕ ಠಾಣಾಧಿಕಾರಿ ಆರ್. ಹನುಮಂತರಾಯ ಅಭಿನಂದಿಸಿದ್ದಾರೆ.

# ರಾಷ್ಟ್ರೀಯ ನಾಟಕೋತ್ಸವಕ್ಕೆ ಭದ್ರಾವತಿ ತಾಲ್ಲೂಕಿನಿಂದ 53 ಕ್ವಿಂ. ಅಕ್ಕಿ ಸಮರ್ಪಣೆ

ಸಾಣೇಹಳ್ಳಿ, ಸೆ.22- ಸಾಣೇಹಳ್ಳಿಯಲ್ಲಿ ನವೆಂಬರ್ 2 ರಿಂದ ನಡೆಯುವ ರಾಷ್ಟ್ರೀಯ ನಾಟಕೋತ್ಸವಕ್ಕೆ ಭದ್ರಾವತಿ ತಾಲ್ಲೂಕಿನ ತರಳಬಾಳು ಯುವ ವೇದಿಕೆ ಮತ್ತು ತಾಲ್ಲೂಕಿನ ಸಾಧು ವೀರಶೈವ ಸಮಾಜದವರು 53 ಕ್ವಿಂಟಲ್ ಅಕ್ಕಿಯನ್ನು ಸಾಣೇಹಳ್ಳಿ ಶ್ರೀಮಠಕ್ಕೆ ಸಮರ್ಪಿಸಿ, ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಭಕ್ತಾದಿಗಳು ಕಾಯಕ ಮತ್ತು ದಾಸೋಹ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿರುವುದು ಸಂತೋಷ. ಪ್ರತಿಯೊಬ್ಬರೂ ಇಷ್ಟಲಿಂಗ ಧರಿಸಿದರೆ ದುರ್ವ್ಯಸನ, ದುರಾಚಾರ ದೂರವಾಗುವವು. ಆದುದರಿಂದ ಲಿಂಗದೀಕ್ಷೆ ಪಡೆಯಬೇಕೆಂದು ಶ್ರೀಗಳು ಸಲಹೆ ನೀಡಿದರು.

ಇದರಿಂದ ಧರ್ಮದ ದಾರಿಯಲ್ಲಿ ನಡೆದು ಆದರ್ಶ ವ್ಯಕ್ತಿತ್ವ ರೂಢಿಸಿಕೊಳ್ಳಲು ಸಾಧ್ಯವಾಗುವುದು. ವ್ಯಕ್ತಿ ಪರಿಶುದ್ಧವಾಗಿದ್ದರೆ ಸಮಾಜವೂ ಶುದ್ಧವಾಗುವುದು. ಈ ನೆಲೆಯಲ್ಲಿ ಹಿರಿಯರು ಕಿರಿಯರಿಗೆ ಮಾರ್ಗದರ್ಶಕರಾಗಬೇಕು. ಆಗ ಮನ, ಮನೆ, ಸಮಾಜದಲ್ಲಿ ಸುಧಾರಣೆಯಾಗುವುದು ಎಂದು ಹೇಳಿದರು.

ಕಲೆ, ಸಾಹಿತ್ಯ, ಸಂಗೀತದ ಒಲವು ಬೆಳೆಸಿಕೊಂಡು ಸುಸಂಸ್ಕೃತ ಜೀವನ ನಡೆಸುವಂತಾಗಲಿ ಎಂದು ಹಾರೈಸಿದ ಶ್ರೀಗಳು, ಕಲೆಗೆ ನೆರವು ನೀಡುವ ನಿಮ್ಮ ಸದ್ಭಾವನೆಗಳು ಹೀಗೇ ಮುಂದುವರೆದು ಇತರರಿಗೂ ಆದರ್ಶವಾಗಲಿ ಎಂದರು.

ಈ ಸಂದರ್ಭದಲ್ಲಿ ಭದ್ರಾವತಿ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಕೆ.ಜಿ. ರವಿಕುಮಾರ್, ಉಪಾಧ್ಯಕ್ಷ ಪರಮೇಶ್ವರಪ್ಪ, ಕಾರ್ಯದರ್ಶಿ ಭರಣೇಶ್, ಸಹ ಕಾರ್ಯದರ್ಶಿ ಬಿ. ಎಸ್. ಪರಮೇಶ್ವರಪ್ಪ, ಖಜಾಂಚಿ ನವೀನ್, ಸದಸ್ಯರಾದ ಮಲ್ಲಿಕಾರ್ಜುನ್, ವಸಂತಕುಮಾರ್, ಮಮತ ನರೇಂದ್ರ, ನಾಗರಾಜ, ಮಹೇಶ್ವರಪ್ಪ, ದಿನೇಶ್, ಆಶಾರಾಣಿ, ಮಹಾದೇವಪ್ಪ, ಎ ಎಸ್ ರವಿಕುಮಾರ, ರಾಜಕುಮಾರ, ಸತೀಶ್‌ಗೌಡ, ರುದ್ರಪ್ಪ, ಶಿವಕುಮಾರ್, ಮತ್ತಿತರರಿದ್ದರು.

# ಇಂದಿರಾ ಗಾಂಧಿ ಆದರ್ಶ ರಾಜಕಾರಣಿ



### ಜಗಳೂರು ಶಾಸಕ ಬಿ.ದೇವೇಂದ್ರಪ್ಪ ಬಣ್ಣನೆ

ಜಗಳೂರು, ನ.2- ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಸರಳ ಜೀವನ, ಆಡಳಿತ ವೈಖರಿ ಇಂದಿನ ರಾಜಕಾರಣಿಗಳಿಗೆ ಆದರ್ಶ ಎಂದು ಶಾಸಕ ಬಿ.ದೇವೇಂದ್ರಪ್ಪ ಹೇಳಿದರು.

ಪಟ್ಟಣದ ಜನಸಂಪರ್ಕ ಕೇಂದ್ರದಲ್ಲಿ ಇಂದಿರಾ ಗಾಂಧಿ ಅವರ 39ನೇ ಪುಣ್ಯಸ್ಮರಣೆ ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಇಂದಿರಾ ಗಾಂಧಿ ಅವರು ಆಗರ್ಭ ಶ್ರೀಮಂತನ ಮಗಳಾಗಿ ಜನಿಸಿದರೂ ಬಡವರ ಪ್ರತಿಬಿಂಬವಾಗಿ ತನ್ನದೇ ಜೀವನಶೈಲಿಯಲ್ಲಿ ಪ್ರತಿಯೊಬ್ಬರ ಬದುಕಿನ ಆಶಾಕಿರಣವಾಗಿದ್ದರು. ದೇಶಕ್ಕಾಗಿ ಅವರು ಪ್ರಾಣ ತ್ಯಾಗ ಮಾಡಿದ ಅಜರಾಮರ ಎಂದು ಬಣ್ಣಿಸಿದರು.

ದೇಶದ ಒಗ್ಗೂಡಿಕೆಗಾಗಿ 1885 ರಲ್ಲಿ ಎ.ಓ.ಹ್ಯೂಮ್ ಅವರು ಸ್ಥಾಪಿಸಿದ ಕಾಂಗ್ರೆಸ್ ಪಕ್ಷ ದೇಶದ ಜನಪರ, ಜನಪ್ರಿಯ ಆಡಳಿತಕ್ಕೆ ಕೈಗನ್ನಡಿಯಾಗಿದೆ.ದೇಶಕ್ಕೆ ಸ್ವಾತಂತ್ರ್ಯ, ತ್ರಿವರ್ಣ ಧ್ವಜ ಒದಗಿಸಿದ ಕಾಂಗ್ರೆಸ್ ಪಕ್ಷಕ್ಕೆ ಇತಿಹಾಸವಿದೆ.

ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಕಛೇರಿಯಿಲ್ಲದೆ ಪಕ್ಷದ ಸಭೆ ನಡೆಸಲು ಸ್ಥಳಕ್ಕಾಗಿ ಪರದಾಡಬೇಕಿತ್ತು. ಇದೀಗ ಚಿರಪರಿಚಿತ ಪಟ್ಟಣ ಪಂಚಾಯಿತಿ ಹಳೇ ಕಟ್ಟಡ ಜನಸಂಪರ್ಕ ಕೇಂದ್ರವಾಗಿ ಸುಂದರ ಅಲಂಕಾರಗೊಂಡು, ಪುಸ್ತಕಗಳ ಜ್ಞಾನಭಂಡಾರವಾಗಿ ಮಾರ್ಪಟ್ಟಿದೆ ಎಂದರು.

ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಕೆಪಿಸಿಸಿ ಸದಸ್ಯ ಕಲ್ಲೇಶ್‌ರಾಜ್ ಪಟೇಲ್, ಕೆಪಿಸಿಸಿ ಎಸ್‌ಸಿ ಘಟಕದ ಸಿ.ತಿಪ್ಪೇಸ್ವಾಮಿ ಮಾತನಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಓಬಣ್ಣ, ಪ್ರಕಾಶ್ ರೆಡ್ಡಿ, ಗುರುಮೂರ್ತಿ, ಪ್ರಭು, ಕಾಟಪ್ಪ, ಅಹಮ್ಮದ್ ಅಲಿ, ಎ. ವೆಂಕಟೇಶ್, ವಿಜಯ್ ಕೆಂಚೋಳ್, ಸತ್ಯಮೂರ್ತಿ, ಬಿ. ಮಹೇಶ್ವರಪ್ಪ, ಪ.ಪಂ ಸದಸ್ಯ ರಮೇಶ್ ರೆಡ್ಡಿ, ತಾನಾಜಿ, ಜಯ್ಯಣ್ಣ, ಶಾಂತಕುಮಾರ್ ಮುಂತಾದವರು ಇದ್ದರು.

## ಆರನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಪಾರ್ವತಮ್ಮ ಕಡ್ಲಯ್ಯ**

**ನಿಧನ: 03.11.2017**

"ತಾಯಿಗಿಂತ ದೇವರು ಜಗದಲ್ಲಿ ಇಲ್ಲ, ಅಕ್ಷರದಿಂದ ಅಮ್ಮನನ್ನು ವರ್ಣಿಸಲು ಆಗುವುದಿಲ್ಲ, ತಾಯಿಯ ಋಣವನ್ನು ತೀರಿಸುವುದಕ್ಕಂತೂ ಸಾಧ್ಯವೇ ಇಲ್ಲ"

ಸದಾ ನಿಮ್ಮ ಸ್ಮರಣೆಯಲ್ಲಿರುವ:

ಮಕ್ಕಳಾದ : ಟಿ.ಎಂ.ರುದ್ರಯ್ಯ, ನಿವೃತ್ತ ಎಎಸ್ಐ, ಟಿ.ಎಂ.ಸಿದ್ದಲಿಂಗಯ್ಯ, ಟಿ.ಎಂ.ಗಣೇಶಯ್ಯ, ಟಿ.ಎಂ. ನಾಗರಾಜಯ್ಯ, ಟಿ.ಎಂ. ಶಿವಯೋಗಿಸ್ವಾಮಿ, ಟಿ.ಎಂ. ಮಂಜುನಾಥಯ್ಯ, ಜಯಮ್ಮ ಶಶಿಕಲಾ ಹೆಚ್.ಎಂ.ರುದ್ರೇಶ್, ಚಂದ್ರಕಲಾ ಶ್ರೀಧರ ಸ್ವಾಮಿ

ಸೊಸೆಯಂದಿರಾದ: ಶ್ರೀಮತಿ ಕಮಲ, ಪೂರ್ಣಿಮ, ಲಲಿತ, ವಿಮಲಾಕ್ಷಿ, ರೇಖಾ

ಮೊಮ್ಮಕ್ಕಳಾದ: ಶ್ರೀಮತಿ ಗೀತಾರಾಣಿ, ಮಂಜುನಾಥ್ ಆರ್.ಎಂ., ಶ್ರೀಮತಿ ಸ್ವಾತಿ ಮತ್ತು ಬಿ. ವಿಶ್ವಾಸ್, ತಿಪ್ಪೇಶ್, ವಾಗೀಶ್, ಕಾರ್ತಿಕ್, ನಿಖಿಲ್, ಕೃತಿಕ, ಶಿವಶಂಕರ್, ಕಿರಣ್, ರವಿಶಂಕರ್, ಯಶಸ್, ಮಾ|| ಅಮಯ್, ಅವನಿ ಹಾಗೂ ಸಿಬ್ಬಂದಿ ವರ್ಗ, ಸ್ವಾತಿ ಇಂಡಸ್ಟ್ರೀಸ್, ದಾವಣಗೆರೆ.

## ಬಾವಿಹಾಳ್ ಜಿ.ಎಸ್. ಸುರೇಂದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಗುಮ್ಮನೂರು ಗ್ರಾಮದ ವಾಸಿ ಶ್ರೀಮತಿ ಗೌರಮ್ಮನವರ ಪತಿ ಬಾವಿಹಾಳ್ ಜಿ.ಎಸ್. ಸುರೇಂದ್ರಪ್ಪ (57) ಇವರು ದಿ. 02.11.2023ರ ಪೂರ್ವಾಹ್ನ 11.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ. 3.11.2023ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.

## ಬಿ.ಕಲಪನಹಳ್ಳಿ ಗ್ರಾಮದ ಪ್ರೇಮ ನಿಧನ



ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ವಾಸಿ ಸಣ್ಣಗೌಡ್ರ ಶ್ರೀ ಕೆ.ಜಿ. ಸುರೇಶ್ ಇವರ ಧರ್ಮಪತ್ನಿ ಶ್ರೀಮತಿ ಪ್ರೇಮ (50) ಇವರು ದಿನಾಂಕ 02.11.2023ರ ಗುರುವಾರ ರಾತ್ರಿ 8 ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.11.2023ರ ಶುಕ್ರವಾರ ಮಧ್ಯಾಹ್ನ 1ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ರಾಣೇಬೆನ್ನೂರು : ದಾಖಲೆಗಳನ್ನು ಪರಿಶೀಲಿಸಿದ ಕೃಷ್ಣಭೈರೇಗೌಡ



ರಾಣೇಬೆನ್ನೂರು, ನ.2- ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು, ಗುರುವಾರ ನಗರದ ತಹಶೀಲ್ದಾರ್ ಕಛೇರಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಲ್ಲಿನ ತಹಶೀಲ್ದಾರ್ ಕಛೇರಿಯಲ್ಲಿ ಸುಮಾರು ನೂರಾರು ವರ್ಷಗಳ ಕಾಗದಗಳ ದಾಖಲೆಗಳೂ ಇವೆ. ಅವುಗಳು ಈಗಾಗಲೇ ಶಿಥಿಲಾವಸ್ಥೆಯಲ್ಲಿವೆ. ಆದ್ದರಿಂದ ಅವುಗಳನ್ನು ಉಳಿಸಿಕೊಳ್ಳುವ ಬಗ್ಗೆ ತಹಶೀಲ್ದಾರ್‌ರ ಜೊತೆಗೆ ಮಾತನಾಡಿದ್ದೇನೆ ಎಂದರು.

ಕಂದಾಯ ಇಲಾಖೆಯಿಂದ ಸಾರ್ವಜನಿಕರಿಗೆ ಹಾಗೂ ಜನಸಾಮಾನ್ಯರಿಗೆ ತೊಂದರೆಯಾಗದಂತೆ ಪ್ರತಿ ಇಲಾಖೆಯ ಅಧಿಕಾರಿಗಳು ಎಚ್ಚರ ವಹಿಸಬೇಕು. ಈಗಾಗಲೇ ಶಿಥಿಲಾವ್ಯವಸ್ಥೆಯಲ್ಲಿರುವ ದಾಖಲೆಗಳು ಕಳೆದುಹೋದರೆ ಜನರಿಗೆ ಬಹಳ ಸಮಸ್ಯೆಯಾಗುತ್ತದೆ. ಅದಕ್ಕೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಎಲ್ಲ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ, ಡಿಜಿಟಲ್ ರೂಪದಲ್ಲಿ ಮುಂದಿನ ಪೀಳಿಗೆಗೂ ಉಳಿಸುವಂತಹ ಕಾರ್ಯ ಮಾಡಬೇಕು. ಸಾರ್ವಜನಿಕರಿಗೆ ಸುಲಭವಾಗಿ ದಾಖಲೆಗಳು ಲಭ್ಯವಾಗುವಂತೆ ಮಾಡುವುದು, ರೆಕಾರ್ಡ್ ರೂಮ್‌ಗಳಲ್ಲಿ ದಾಖಲೆಗಳನ್ನು ಡಿಜಿಟಲೀಕರಣ ಮಾಡಿ ಅವುಗಳನ್ನು ಉಳಿಸುವಂತಹ ಕೆಲಸ ಮಾಡಬೇಕು. ಅದಕ್ಕಾಗಿ ಸರ್ವೆ ನಂ. ಹಾಗೂ ರೆಕಾರ್ಡ್ ರೂಂ ಗಳನ್ನು ವೀಕ್ಷಣೆ ಮಾಡಿದ್ದೇನೆ. ಒಟ್ಟಾರೆ ಕಂದಾಯ ಇಲಾಖೆ ಜನಗಳಿಗೆ ಅನುಕೂಲವಾಗುವ ಹಾಗೆ ಪ್ರಾಮಾಣಿಕ ಕೆಲಸ ಮಾಡಬೇಕು. ಜನರಿಗೆ ನಮ್ಮಿಂದ ತೊಂದರೆಯಾಗಬಾರದು. ಜನರ ಜೀವನಕ್ಕೆ ಶಕ್ತಿ ತುಂಬುವ ರೀತಿಯಲ್ಲಿ ನಾವು ಕೆಲಸ ಮಾಡಬೇಕು. ಅದು ನಮ್ಮ ಉದ್ದೇಶವಾಗಿದೆ ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಹನುಮಂತಪ್ಪ ಶಿರಹಟ್ಟಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಲೋಕಸಭಾ ಸಮಿತಿಯಲ್ಲಿ ಅಸಭ್ಯ ಪ್ರಶ್ನೆ ಎಂದು ಮೊಹುವಾ ಆರೋಪ**

ನವದೆಹಲಿ : ಲೋಕಸಭೆಯ ನೈತಿಕ ಸಮಿತಿಯ ಅಧ್ಯಕ್ಷ ವಿನೋದ್ ಕುಮಾರ್ ಸೊಂಕರ್ ತಮಗೆ ಅಸಭ್ಯ ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ಸಂಸದೆ ಮೊಹುವಾ ಮೊಯಿತ್ರ ಆರೋಪಿಸಿದ್ದಾರೆ. ಲಂಚ ಪಡೆದು ಲೋಕಸಭೆಯಲ್ಲಿ ಪ್ರಶ್ನೆ ಕೇಳಿದ ಆರೋಪದ ಹಿನ್ನೆಲೆಯಲ್ಲಿ ಮೊಯಿತ್ರ ಸಮಿತಿ ಎದುರು ಹಾಜರಾಗಿದ್ದರು. ಸಮಿತಿಯ ಸಭೆಯಿಂದ ಅವರು ಹಾಗೂ ಪ್ರತಿಪಕ್ಷದ ಸದಸ್ಯರು ಹೊರ ಬಂದಿದ್ದಾರೆ. ಆರೋಪ ತಳ್ಳಿ ಹಾಕಿರುವ ಸೋಂಕರ್, ಮೊಯಿತ್ರ ಪ್ರಶ್ನೆಗಳಿಗೆ ಉತ್ತರಿಸದೇ ಹೊರ ಹೋಗಿದ್ದಾರೆ ಎಂದು ಹೇಳಿದ್ದಾರೆ.

**ದೆಹಲಿಯಲ್ಲಿ ಕಟ್ಟಡ ಕಾಮಗಾರಿ ಮೇಲೆ ನಿರ್ಬಂಧ**

ನವದೆಹಲಿ : ದೆಹಲಿಯಲ್ಲಿ ವಾಯು ಗುಣಮಟ್ಟ ತೀವ್ರವಾಗಿ ಹದಗೆಟ್ಟಿದ್ದು, ಕಟ್ಟಡ ನಿರ್ಮಾಣಕ್ಕೆ ಕಡಿವಾಣ ಹಾಕಲಾಗಿದೆ. ಚಳಿಗಾಲದಲ್ಲಿ ಇದೇ ಮೊದಲ ಬಾರಿಗೆ ನಿರ್ಬಂಧ ಹೇರಲಾಗಿದೆ.

**ಗಾಜಾದಲ್ಲಿ ಭಾರತ ಮಾನವೀಯ ನೆರವಿಗೆ ಆಕ್ಷೇಪವಿಲ್ಲ : ಇಸ್ರೇಲ್**

ನವದೆಹಲಿ : ಗಾಜಾದ ಜನರಿಗೆ ಭಾರತ ಮಾನವೀಯ ನೆರವು ನೀಡುವುದಕ್ಕೆ ಆಕ್ಷೇಪವಿಲ್ಲ ಎಂದು ಇಸ್ರೇಲ್ ರಾಯಭಾರಿ ನೋರ್ ಗಿಲನ್ ಹೇಳಿದ್ದಾರೆ. ಹಮಾಸ್ ಕುರಿತ ಮಾಹಿತಿಯನ್ನು ಭಾರತದ ಜೊತೆ ಹಂಚಿಕೊಳ್ಳಲಿದ್ದು, ಇದನ್ನು ಉಗ್ರವಾದಿ ಸಂಘಟನೆ ಎಂದು ಭಾರತ ಘೋಷಿಸುವ ನಿರೀಕ್ಷೆ ಇದೆ ಎಂದೂ ಅವರು ಹೇಳಿದ್ದಾರೆ.

**ಜ್ಞಾನವಾಪಿ ಮಸೀದಿ ಸಮೀಕ್ಷಾ ಕಾರ್ಯ ಪೂರ್ಣ**

ವಾರಣಾಸಿ : ಜ್ಞಾನವಾಪಿ ಮಸೀದಿ ಸಂಕೀರ್ಣದ ಸಮೀಕ್ಷಾ ಕಾರ್ಯ ಪೂರ್ಣಗೊಳಿಸಲಾಗಿದೆ ಎಂದು ಭಾರತೀಯ ಪುರಾತತ್ವ ಇಲಾಖೆಯು ವಾರಣಾಸಿ ನ್ಯಾಯಾಲಯಕ್ಕೆ ತಿಳಿಸಿದೆ. ಇಲಾಖೆ ತನ್ನ ವರದಿ ಸಲ್ಲಿಸಲು ನವೆಂಬರ್ 17ರವರೆಗೆ ಹೆಚ್ಚುವರಿ ಕಾಲಾವಕಾಶ ನೀಡಲಾಗಿದೆ.

**ಶ್ರೀಲಂಕಾ ಸಾಲ ಮರು ಹೊಂದಾಣಿಕೆ**

ಕೊಲಂಬೊ : ಶ್ರೀಲಂಕಾ ತನ್ನ ಸಾಲವನ್ನು ಮರು ಹೊಂದಿಸುವ ಬಗ್ಗೆ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಲಂಕಾದ ಸಾಲ ಮರು ಹೊಂದಿಸಲಾಗುವುದು ಹಾಗೂ ಆರ್ಥಿಕ ಚೇತರಿಕೆಗೆ ಹೆಚ್ಚಿನ ನೆರವು ನೀಡಲಾಗುವುದು ಎಂದವರು ಹೇಳಿದ್ದಾರೆ.

**ಫೆ.11ರಂದು ಪಾಕ್ ಸಾರ್ವತ್ರಿಕ ಚುನಾವಣೆ**

ಇಸ್ಲಾಮಾಬಾದ್ : ಬರುವ ಫೆಬ್ರವರಿ 11ರಂದು ಸಾರ್ವತ್ರಿಕ ಚುನಾವಣೆ ನಡೆಸುವುದಾಗಿ ಪಾಕಿಸ್ತಾನದ ಸುಪ್ರೀಂ ಕೋರ್ಟ್‌ಗೆ ಚುನಾವಣಾ ಸಂಸ್ಥೆ ತಿಳಿಸಿದೆ. ಇದರೊಂದಿಗೆ ಚುನಾವಣೆ ಕುರಿತು ಇದ್ದ ಅನಿಶ್ಚಿತತೆಗೆ ತೆರೆ ಬಿದ್ದಿದೆ.

**ಡಿ.ಕೆ. ಶಿವಕುಮಾರ್ ಸಿಎಂ ಆಗಲಿ ಎಂದ ಹುಸೇನ್**

ಬೆಂಗಳೂರು : ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕು ಎಂಬುದು ರಾಜ್ಯದ 224 ಕ್ಷೇತ್ರಗಳ ಜನರ ಬಯಕೆ ಎಂದು ಶಿವಕುಮಾರ್ ಆಪ್ತರಾದ ಶಾಸಕ ಹೆಚ್.ಎ. ಇಕ್ಬಾಲ್ ಹುಸೇನ್ ಹೇಳಿದ್ದಾರೆ. ಮುಂದಿನ ಐದು ವರ್ಷಗಳಿಗೂ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿದ ಬೆನ್ನಲ್ಲೇ ಹುಸೇನ್ ಈ ಹೇಳಿಕೆ ನೀಡಿದ್ದಾರೆ.

## ಹಿರೇಕೋಗಲೂರು ಬಳಿ ಸೂಪರ್ ಬ್ರಾಡ್‌ಗೇಜ್ ಹಾನಿ: ನೀರು ಪೋಲು



ಚನ್ನಗಿರಿ, ನ.2- ತಾಲ್ಲೂಕಿನ ಹಿರೇಕೋಗಲೂರು ಗ್ರಾಮದ ಗೋಮಾಳಕ್ಕೆ ಹೋಗುವ ರಸ್ತೆಯಲ್ಲಿ ಭದ್ರಾ ಕಾಲುವೆಗೆ ಅಡ್ಡಲಾಗಿ ನಿರ್ಮಿಸಿರುವ ಸೂಪರ್ ಬ್ರಾಡ್‌ಗೇಜ್ ಒಡೆದು ಹೆಚ್ಚಿನ ಮಟ್ಟದಲ್ಲಿ ನೀರು ಹರಿದು ಪೋಲಾಗುತ್ತಿದೆ.

ಸ್ಥಳಕ್ಕೆ ಭೇಟಿ ನೀಡಿದ ಬಿಜೆಪಿ ಮುಖಂಡ ಕೋಳೇನಹಳ್ಳಿ ಬಿ.ಎಂ. ಸತೀಶ್, ತಕ್ಷಣವೇ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರವರು ನೀರು ಪೋಲಾಗದಂತೆ ದುರಸ್ತಿ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪೋಲಾಗುತ್ತಿರುವ ನೀರು ಸಮೀಪದ ಹಿರೇಕೋಗಲೂರು ಕೆರೆಗೆ ಹರಿಯುತ್ತಿದೆ. ಕೆರೆಯಲ್ಲಿ ನೀರು ಸಂಗ್ರಹ ಹೆಚ್ಚಾಗಿ ಕೋಡಿ ಬಿದ್ದಿದೆ. ಇದರಿಂದ ಕೊನೆ ಭಾಗದ ಹಳ್ಳಿಗಳಾದ ಹೂವಿನಮಡು, ಮತ್ತಿ, ಗೋಣಿವಾಡ, ಹೊನ್ನಮರಡಿ, ಕುಕ್ಕುವಾಡ, ನಾಗರಸನಹಳ್ಳಿ ಮುಂತಾದ ಗ್ರಾಮಗಳಿಗೆ ನೀರು ತಲುಪುತ್ತಿಲ್ಲ.

ನೀರಾವರಿ ಇಲಾಖೆ ಅಧಿಕಾರಿಗಳು ಸಮರ್ಪಕವಾಗಿ ನೀರು ನಿರ್ವಹಣೆ ಮಾಡುತ್ತಿಲ್ಲ. ಈಗ ಭತ್ತದ ಪೈರು ಕಾಳು ಕಟ್ಟುವ ಹಂತದಲ್ಲಿದೆ. ರೈತರು ನೀರು ನೀರು ಎಂದು ಗೋಗೆರೆಯುತ್ತಿದ್ದಾರೆ. ಇತ್ತ ಕೊನೆ ಭಾಗದ ರೈತರಿಗೆ ದಕ್ಕಬೇಕಾದ ನೀರು ವ್ಯರ್ಥವಾಗಿ ಹರಿದು ಪೋಲಾಗುತ್ತಿದೆ. ರೈತರ ಕೂಗಿಗೆ ಸ್ಪಂದಿಸದ ಜಿಲ್ಲಾಡಳಿತ ದಿವ್ಯ ಮೌನಕ್ಕೆ ಶರಣಾಗಿದೆ ಎಂದವರು ಆರೋಪಿಸಿದರು.

ಈ ಸಂದರ್ಭದಲ್ಲಿ ಗೋಣಿವಾಡ ಪಿ.ಎ. ನಾಗರಾಜಪ್ಪ, ನೀರು ಬಳಕೆದಾರರ ಸಂಘದ ಅಧ್ಯಕ್ಷ ಎನ್.ಎಂ. ಹಾಲೇಶ್, ಕೋಳೇನಹಳ್ಳಿ ಕೆ ಶರಣಪ್ಪ, ಎಸ್.ಸಿ. ಸಿದ್ದಪ್ಪ ಮುಂತಾದವರು ಉಪಸ್ಥಿತರಿದ್ದರು.

## ಸೊಳ್ಳೆಗಳಲ್ಲಿ ಝೀಕಾ ವೈರಸ್ ಪತ್ತೆ

**(1ನೇ ಪುಟದಿಂದ)** ಕಾಲ ಹಾಗೇ ಇರುತ್ತವೆ. ಜ್ವರ, ದದ್ದು, ಸ್ನಾಯು ಹಾಗೂ ಗಂಟು ನೋವು, ಕಣ್ಣು ನೋವು ಅಥವಾ ಕಣ್ಣು ಕೆಂಪಾಗುವುದು, ತಲೆನೋವು, ಬಳಲಿಕೆ, ಹೊಟ್ಟೆ ನೋವು ಇತ್ಯಾದಿ ಕಂಡು ಬರುತ್ತದೆ. ವೈರಸ್ ಪೀಡಿತ ಸೊಳ್ಳೆ ಕಡಿತದಿಂದ ಸೋಂಕು ಹರಡುವುದರಿಂದ ವೈರಸ್ ಸೋಂಕು ಪ್ರದೇಶಕ್ಕೆ ಪ್ರಯಾಣ ಆದಷ್ಟು ತಡೆಗಟ್ಟುವುದು ಉತ್ತಮ.

ಗರ್ಭಿಣಿಯರಲ್ಲಿ ಈ ವೈರಸ್ ಕಂಡುಬಂದರೆ ಭ್ರೂಣದಲ್ಲಿರುವ ಮಗುವಿನ ಮೆದುಳಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ತಜ್ಞರು ತಿಳಿಸಿದ್ದಾರೆ.

# ಚೀನಾದಿಂದ ಅಮೆರಿಕಾಗೆ ಹೆಚ್ಚಿದ ವಲಸೆ

### ಆರ್ಥಿಕ ಸಂಕಷ್ಟ : ದುರ್ಗಮ ತಾಣಗಳ ಮೂಲಕ ಅಕ್ರಮವಾಗಿ ತೆರಳುತ್ತಿರುವ ಜನರು




ನವದೆಹಲಿ, ನ. 2 – ಚೀನಾದ ಆರ್ಥಿಕ ಪ್ರಗತಿ ಕುಂಠಿತವಾಗುತ್ತಿರುವ ಹಾಗೂ ಸರ್ಕಾರ ಕಠಿಣ ನಿರ್ಬಂಧಗಳನ್ನು ಹೇರುತ್ತಿರುವ ಹಿನ್ನೆಲೆಯಲ್ಲಿ, ಆ ದೇಶದ ಜನರು ಅಮೆರಿಕಗೆ ಅಕ್ರಮ ವಲಸೆ ಹೋಗುವ ಪ್ರಮಾಣ ಹೆಚ್ಚಾಗಿದೆ.

ಸಾಮಾಜಿಕ ಜಾಲತಾಣಗಳ ನೆರವಿನಿಂದಾಗಿ ಚೀನಾದ ಜನರು ಕಠಿಣ ಮಾರ್ಗಗಳ ಮೂಲಕ ಅಮೆರಿಕಗೆ ತಲುಪುತ್ತಿದ್ದಾರೆ. ಡೇರಿಯನ್ ಗ್ಯಾಪ್ ಮಾರ್ಗದ ಮೂಲಕ ಅಮೆರಿಕಗೆ ಬರುತ್ತಿರುವವರಲ್ಲಿ ವೆನೆಜುವೆಲ, ಇಕ್ವೆಡಾರ್ ಹಾಗೂ ಹೈಟಿಯನ್ಸ್‌ಗಳ ನಂತರ ಚೀನೀಯರು ನಾಲ್ಕನೇ ಸ್ಥಾನದಲ್ಲಿದ್ದಾರೆ.

ಈ ವರ್ಷದ ಮೊದಲ ಒಂಭತ್ತು ತಿಂಗಳಲ್ಲಿ ಚೀನಾದ ನಾಗರಿಕರು ವಲಸೆ ಬರುವ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ ಎಂದು ಪನಾಮಾದ ವಲಸೆ ಅಧಿಕಾರಿಗಳು ಹೇಳಿದ್ದಾರೆ.

ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಅಧ್ಯಕ್ಷ ಅವಧಿಯ ಮೇಲಿದ್ದ ನಿರ್ಬಂಧ ತೆಗೆದು ಹಾಕಿದ್ದರು. ನಂತರ, 2018ರಲ್ಲಿ ಚೀನಾದಿಂದ ಹೊರ ಹೋಗುವವರ ಪ್ರಮಾಣ ಹೆಚ್ಚಾಗಿತ್ತು. ಕೊರೊನಾ ನಂತರದಲ್ಲಿ ಚೀನಾದ ಗಡಿಗಳನ್ನು ಅತ್ಯಂತ ಭದ್ರಗೊಳಿಸಲಾಗಿತ್ತು. ಇದು ಹೊರ ಹೋಗುವುದನ್ನು ತಾತ್ಕಾಲಿಕವಾಗಿ ತಡೆದಿತ್ತು.

ಕೊರೊನಾ ಮಹಾಮಾರಿ ಅಂತ್ಯವಾಗುತ್ತಿದ್ದಂತೆಯೇ, ವಲಸೆ ಹೋಗುವುದು ಪುನರಾರಂಭವಾಗಿದೆ. ಚೀನಾದ ಆರ್ಥಿಕ ಪ್ರಗತಿ ಮಂದವಾಗಿದ್ದರೆ, ಯುವಕರಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಾಗಿದೆ. 2012ರಲ್ಲಿ ಚೀನಾದಿಂದ 1.20 ಲಕ್ಷ ಜನ ವೀಸಾ ಮೂಲಕ ವಲಸೆ ಹೋಗಿದ್ದರು. ಈ ವರ್ಷ 3.10 ಲಕ್ಷ ಜನ ಹೋಗಲಿದ್ದಾರೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ.

ವಲಸೆಯ ಈ ಅಲೆ ಚೀನಾದಲ್ಲಿ ಕಂಡು ಬರುತ್ತಿರುವ ಹತಾಶೆ ತೋರಿಸುತ್ತಿದೆ ಎಂದು ಯಿಬಾವೋ ಆನ್‌ಲೈನ್ ತಾಣದ ಸಂಪಾದಕ ಕೈ ಕ್ಸಿಯಾ ಹೇಳಿದ್ದಾರೆ.

ಸುಶಿಕ್ಷಿತರು, ಉನ್ನತ ಶಿಕ್ಷಣದವರಿಂದ ಹಿಡಿದು ಅನಕ್ಷರಸ್ಥರು, ಸಣ್ಣ ಉದ್ಯಮಗಳ ಮಾಲೀಕರಿಂದ ಹಿಡಿದು ಸ್ಥಿತಿವಂತರ ಕುಟುಂಬದವರೆಗೆ ಸಾಕಷ್ಟು ಜನರು ಆಶಾಭಾವನೆ ಕಳೆದುಕೊಂಡಿದ್ದಾರೆ ಎಂದು ಕ್ಸಿಯಾ ತಿಳಿಸಿದ್ದಾರೆ.

ವೀಸಾ ಮೂಲಕ ವಲಸೆ ಹೋಗಲು ಸಾಧ್ಯವಾಗದೇ ಇದ್ದವರು, ಅಕ್ರಮವಾಗಿ ಅಮೆರಿಕ – ಮೆಕ್ಸಿಕೋ ಗಡಿಯ ಮೂಲಕ ಬರುತ್ತಿದ್ದಾರೆ. ಈ ವರ್ಷ ಜನವರಿಯಿಂದ ಸೆಪ್ಟೆಂಬರ್ ನಡುವೆ 22,187 ಚೀನಾದ ಜನರು ಅಕ್ರಮವಾಗಿ ಮೆಕ್ಸಿಕೋದಿಂದ ವಲಸೆ ಬಂದಿದ್ದಾರೆ. 2022ಕ್ಕೆ ಹೋಲಿಸಿದರೆ ಇದು 13 ಪಟ್ಟು ಹೆಚ್ಚಾಗಿದೆ ಎಂದು ಗಡಿ ಭದ್ರತಾ ಸಿಬ್ಬಂದಿ ಹೇಳಿದ್ದಾರೆ.

ಇಕ್ವಿಡಾರ್‌ಗೆ ಚೀನಾದ ಜನರು ಬರಲು ವೀಸಾದ ಅಗತ್ಯವಿಲ್ಲ. ಹೀಗಾಗಿ ಇಕ್ವಿಡಾರ್ ಮೂಲಕ ಅಮೆರಿಕಗೆ ಬರುವುದು ಚೀನೀಯರಿಗೆ ಅತ್ಯಂತ ಜನಪ್ರಿಯ ಮಾರ್ಗವಾಗುತ್ತಿದೆ. ಸಾಮಾಜಿಕ ಜಾಲ ತಾಣಗಳಲ್ಲಿ ಚೀನಾದಿಂದ ಅಮೆರಿಕಗೆ ಬರುವ ಬಗ್ಗೆ ಹಲವಾರು ವಿಡಿಯೋಗಳಿವೆ. ದುರ್ಗಮ ಮಾರ್ಗಗಳಲ್ಲಿ ಬರುವಾಗ ಯಾವ ಎಚ್ಚರಿಕೆ ವಹಿಸಬೇಕು, ಯಾವ ಹೋಟೆಲ್‌ಗಳಲ್ಲಿ ಉಳಿದುಕೊಳ್ಳಬೇಕು, ಯಾವ ದೇಶಗಳ ಪೊಲೀಸರಿಗೆ ಲಂಚ ನೀಡಬೇಕು ಹಾಗೂ ಅಮೆರಿಕದ ವಲಸೆ ಅಧಿಕಾರಿಗಳು ಎದುರಾದಾಗ ಏನು ಮಾಡಬೇಕು ಎಂಬೆಲ್ಲ ವಿವರಗಳು ಇಲ್ಲಿವೆ.

ಭಾಷಾಂತರ ಮಾಡುವ ಮೊಬೈಲ್ ಆಪ್‌ಗಳೂ ಜನರಿಗೆ ನೆರವಾಗುತ್ತಿವೆ. ಸ್ಪ್ಯಾನಿಶ್ ಇಲ್ಲವೇ ಇಂಗ್ಲಿಷ್ ಭಾಷೆ ಬರದವರೂ ಈ ಮಾರ್ಗ ಬಳಸುವುದು ಸುಲಭವಾಗುತ್ತಿದೆ.

ಸಾಕಷ್ಟು ಜನರು ಯುರೋಪ್ ಮೂಲಕ ಮೆಕ್ಸಿಕೋಗೆ ಬರುತ್ತಿದ್ದಾರೆ. ಅಲ್ಲಿಂದ ಸ್ಥಳೀಯ ಗೈಡ್‌ಗಳ ನೆರವು ಪಡೆದು ಅಮೆರಿಕದ ಕಡೆ ತೆರಳುತ್ತಿದ್ದಾರೆ.

## ದುಗ್ಗಮ್ಮಪೇಟೆ ಸರ್ಕಾರಿ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ದಾವಣಗೆರೆ, ನ. 2- ಶಿವಾಜಿ ನಗರದ ಹಳೇ ಊರು ದುಗ್ಗಮ್ಮಪೇಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಜ್ಯೋತ್ಸವವನ್ನು ಆಚರಿಸಲಾಯಿತು. ಶಾಲೆಯ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಂಗರಾಜು ಹಾವನೂರು ಮಾತನಾಡಿ, ಕನ್ನಡ ಭಾಷೆಯು ಅಗಾಧ ಜ್ಞಾನ ಭಂಡಾರ ಹೊಂದಿರುವುದರಿಂದ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಹೊಂದಿದ ಭಾಷೆ ಎಂದು ತಿಳಿಸಿದರು.

ಶಾಲೆಯ ಮುಖ್ಯಶಿಕ್ಷಕರಾದ ಶ್ರೀಮತಿ ಕಲ್ಲಮ್ಮ ಸ್ವಾಗತಿಸಿದರು. ಶಿಕ್ಷಕ ಪ್ರಭುದೇವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಿಕ್ಷಕಿಯರಾದ ಶ್ರೀಮತಿ ಶಾರದಾ ವಂದಿಸಿದರು.

## ಸ.ಕಾಲೇಜು ಕಬಡ್ಡಿ ತಂಡ ತೃತೀಯ



ದಾವಣಗೆರೆ, ನ. 2- ದಾವಣಗೆರೆ ವಿಶ್ವವಿದ್ಯಾಲಯದ ಕಬಡ್ಡಿ ಅಂತರ ಕಾಲೇಜು ಕ್ರೀಡಾಕೂಟ ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನಲ್ಲಿ ಈಚೆಗೆ ನಡೆಯಿತು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದಾವಣಗೆರೆ ಪುರುಷ ತಂಡ ಭಾಗವಹಿಸಿ ತೃತೀಯ ಸ್ಥಾನ ಪಡೆದಿರುತ್ತದೆ. ವಿಜೇತ ತಂಡಕ್ಕೆ ಪ್ರಾಂಶುಪಾಲ ಡಾ. ದಾದಾಪೀರ್, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಎಂ.ಆರ್. ರೇಖಾ, ಪತ್ರಾಂಕಿತ ವ್ಯವಸ್ಥಾಪಕರಾದ ಗೀತಾದೇವಿ ಹಾಗೂ ಕಾಲೇಜಿನ ಕ್ರೀಡಾ ವಿಭಾಗದ ಸದಸ್ಯ ವೆಂಕಟೇಶ್ ಬಾಬು, ಜೆ.ಎಂ. ಮಂಜುನಾಥ ಅಭಿನಂದನೆ ಸಲ್ಲಿಸಿದ್ದಾರೆ.

# ಉದ್ಯೋಗದಲ್ಲಿ ಕನ್ನಡಕ್ಕೆ ಮೀಸಲಾತಿ ನೀಡಬೇಕು

### ಹರಪನಹಳ್ಳಿ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸುಭದ್ರಮ್ಮ ಒತ್ತಾಯ



ಹರಪನಹಳ್ಳಿ, ನ.2- ವಿಭಿನ್ನ ಭಾಷೆ, ಸಂಸ್ಕೃತಿ ಹೊಂದಿರುವ ಭಾರತ ದೇಶದಲ್ಲಿ ಕನ್ನಡ ಇತಿಹಾಸ ಹೊಂದಿರುವ ಏಕೈಕ ಭಾಷೆಯಾಗಿದೆ. ಕರ್ನಾಟಕದಲ್ಲಿ ಅನೇಕ ಭಾಷೆಗಳಿದ್ದರೂ ಕನ್ನಡವೇ ಆಡಳಿತ ಭಾಷೆಯಾಗಿದೆ. ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ವೃತ್ತದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅನ್ಯ ಭಾಷೆ ಕಲಿಯಬೇಕು. ನಮ್ಮ ಕನ್ನಡ ಭಾಷೆಯನ್ನು ಉಳಿಸಲು ಎಲ್ಲರೂ ಮುಂದಾಗಬೇಕು. ಪರಭಾಷೆಗಳು ಕಿಟಕಿ, ಗವಾಕ್ಷಿಯಾಗಿರಬೇಕು, ಆದರೆ ನಮ್ಮ ಭಾಷೆ ಹೆಬ್ಬಾಗಿಲಾಗಿರಬೇಕು. ಕನ್ನಡದಲ್ಲಿಯೇ ಪರೀಕ್ಷೆಗಳನ್ನು ಬರೆದು, ದೇಶದಲ್ಲಿ ಉನ್ನತ ಹುದ್ದೆಗೇರಲು ಸಾಧ್ಯವಾಗಿದೆ. ಹಾಗಾಗಿ ಕನ್ನಡ ಭಾಷೆಗೆ ದಕ್ಕೆಯಾದರೆ ಅದನ್ನು ಉಳಿಸಲು ಮುಂದಾಗೋಣ. ನವೆಂಬರ್ ಕನ್ನಡಿಗರಾಗದೇ ನಂ 1 ಕನ್ನಡಿಗರಾಗಬೇಕು.ಸಾಧು, ಸಂತರು, ದಾಸರು, ಶಿವಶರಣರು, ಕವಿಗಳಿಂದ ಕಂಗೊಳಿಸುತ್ತಿರುವ 'ಕನ್ನಡ ನಾಡು' ಎಂಬ ಹೆಸರಿಗೆ ಒಂದು ಧೀಮಂತ ಶಕ್ತಿ ಇದೆ. ಈ ಸುಂದರ ಸಮೃದ್ಧ ನಾಡಿನಲ್ಲಿ ಜನಿಸಿರುವುದು ನಮ್ಮೆಲ್ಲರ ಅದೃಷ್ಟ ಎಂದರು.

ಹಿರಿಯ ಸಾಹಿತಿ ಸುಭದ್ರಮ್ಮ ಮಾತನಾಡಿ, ರಾಜ್ಯದ ಆಡಳಿತ ಕೇಂದ್ರಗಳಲ್ಲಿ ಕನ್ನಡಕ್ಕೆ ಮಾನ್ಯತೆ ನೀಡಬೇಕು. ನಾಡು, ನುಡಿ ಅಭಿವೃದ್ಧಿಗೆ ಶ್ರಮಿಸಿದ ಎಲ್ಲಾ ಮಹನೀಯರನ್ನು ಸ್ಮರಿಸುವ ಮೂಲಕ ಕನ್ನಡ ಉಳಿಸಿ, ಬೆಳೆಸುವುದು ಎಲ್ಲಾ ಕನ್ನಡಿಗರ ಕರ್ತವ್ಯ. ಕನ್ನಡ ಒಂದು ದಿಟ್ಟ ಭಾಷೆಯಾಗಿದ್ದು, ದೇಶೀಯ ಭಾಷೆಯಲ್ಲಿ ಕನ್ನಡದ ಕಂಪನ್ನು ಬೀರುತ್ತಿದೆ. ಪಾಶ್ಚಿಮಾತ್ಯರು ಯೋಗ, ಭರತ ನಾಟ್ಯ ಎಂದು ನಮ್ಮ ಸಂಸ್ಕೃತಿಗೆ ಮಾರು ಹೋಗುತ್ತಿದ್ದಾರೆ. ಆದರೆ ನಾವು ಮಮ್ಮಿ, ಡ್ಯಾಡಿ ಎಂದು ಅವರತ್ತ ಮುಖ ಮಾಡಿದ್ದೇವೆ. ಶಿಕ್ಷಣದಲ್ಲಿ ಕನ್ನಡ ಕಡ್ಡಾಯವಾಗಬೇಕು. ಉದ್ಯೋಗದಲ್ಲೂ ಕನ್ನಡಕ್ಕೆ ಮೀಸಲಾತಿ ನೀಡಬೇಕು. ಕನ್ನಡ ಶಾಲೆಗಳನ್ನು ಉಳಿಸಿ, ಬೆಳೆಸಿದರೆ ಕನ್ನಡ ಸುಭದ್ರವಾಗುತ್ತದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಜಿ.ಮಹಾದೇವಪ್ಪ, ಗೌರವ ಕೋಶಾಧಿಕಾರಿ ಕೆ.ರಾಘವೇಂದ್ರ ಶೆಟ್ಟಿ, ನಿವೃತ್ತ ಮುಖ್ಯ ಶಿಕ್ಷಕರಾದ ಎಚ್.ಜಯಶ್ರೀ, ಕನ್ನಡ ಸಾಹಿತ್ಯ ಪರಿಷತ್ ತೆಲಗಿ ಹೋಬಳಿ ಘಟಕದ ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ, ಕನ್ನಡ ಸಾಹಿತ್ಯ ಪರಿಷತ್ ಚಿಗಟೇರಿ ಹೋಬಳಿ ಘಟಕದ ಅಧ್ಯಕ್ಷ ಸಿ.ರಾಮನಗೌಡ, ಅರಸಿಕೇರಿ ಹೋಬಳಿ ಘಟಕದ ಅಧ್ಯಕ್ಷ ಎಂ.ಸುರೇಶ್, ಮುಖಂಡರಾದ ಬಿ. ರಂಗಪ್ಪ, ನಾಗರಾಜನಾಯ್ಕ ಸೇರಿದಂತೆ, ಇತರರು ಇದ್ದರು.

## ಎಲೆಬೇತೂರಿನಲ್ಲಿ ಸಂಭ್ರಮದ ಕನ್ನಡ ರಾಜ್ಯೋತ್ಸವ ಆಚರಣೆ



ದಾವಣಗೆರೆ, ನ. 2- ಶ್ರೀ ಕೊಂಡಜ್ಜಿ ಬಸಪ್ಪ ಕನ್ನಡ ಮಾಧ್ಯಮ ಪ್ರೌಢಶಾಲೆ, ಶ್ರೀ ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಮತ್ತು ಪೌಢಶಾಲೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವವನ್ನು ಸಡಗರ, ಸಂಭ್ರಮಗಳಿಂದ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರುಣಾ ಜೀವ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕ ಎಲೆಬೇತೂರಿನ ಷಡಕ್ಷರಪ್ಪ, ಸ್ಥಳೀಯ ಸಲಹಾ ಸಮಿತಿಯ ಅಧ್ಯಕ್ಷ ಹೆಚ್. ಬಸವರಾಜಪ್ಪ ಮತ್ತು ಕನ್ನಡ ಅಧ್ಯಾಪಕ ಎಸ್.ಆರ್. ನಾಗರಾಜ್ ಕನ್ನಡದ ಇತಿಹಾಸ, ಹಿರಿಮೆ-ಗರಿಮೆಗಳ ಕುರಿತು ಮಾತನಾಡಿದರು.

ಎ.ಕೆ. ಫೌಂಡೇಷನ್‌ನ ಮುಖ್ಯಸ್ಥ ಬಿ. ಕೊಟ್ರೇಶ್ ಶಾಲೆಗೆ ಅಂದಾಜು 25 ಸಾವಿರ ಮೌಲ್ಯದ ಧ್ವನಿವರ್ಧಕ ನೀಡಿ ಮಾತನಾಡಿದರು.

ಸ್ಥಳೀಯ ಸಲಹ ಸಮಿತಿಯ ಅಧ್ಯಕ್ಷ ಎಂ. ಬಸವರಾಜಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಉಭಯ ಶಾಲೆಗಳ ಸ್ಥಳೀಯ ಸಲಹಾ ಸಮಿತಿಯ ಸದಸ್ಯರಾದ ಕೊಟ್ರೇಶ್, ರಾಜಣ್ಣ, ಅಧ್ಯಾಪಕ ಹೆಚ್.ಎಸ್. ದ್ಯಾಮೇಶ್, ಎಸ್.ಓ. ಷಣ್ಮುಖಪ್ಪ, ಅನಿತಾ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ನೂತನ್ ಕೆ, ಮೇಘನಾ ಬಿ, ಲಕ್ಷ್ಮೀ ಆರ್, ಪೂಜಾ ಟಿ.ಆರ್, ಸುಪ್ರಭೆ ಡಿ ಎಸ್ ಕನ್ನಡ ಭಾಷೆ ಕುರಿತು ಮಾತನಾಡಿದರು.

ಸಿಂಚನಾ ಮತ್ತು ಸಂಗಡಿಗರು ಕನ್ನಡ ಹಾಡುಗಳನ್ನು ಹಾಡಿದರು. ಮುಖ್ಯೋಪಾಧ್ಯಾಯರಾದ ಎಂ.ಬಿ. ಪ್ರೇಮಾ ಸ್ವಾಗತಿಸಿದರು. ಬಿ.ಎಂ. ಶಶಿಕಲಾ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಜಿ.ಆರ್. ಸುನಿತ ವಂದಿಸಿದರು.

## ಮೆಟಾದ ವರ್ತನೆ ಆಧರಿತ ಜಾಹೀರಾತಿಗೆ ಯುರೋಪ್ ನಿರ್ಬಂಧ

ಸ್ಯಾನ್ ಫ್ರಾನ್ಸಿಸ್ಕೋ, ನ. 2 – ಮೆಟಾ ಕಂಪನಿಯ ವರ್ತನೆ ಆಧರಿತ ಜಾಹೀರಾತುಗಳ ಮೇಲೆ ಯುರೋಪ್ ಅಧಿಕಾರಿಗಳು ಮತ್ತಷ್ಟು ನಿರ್ಬಂಧ ಹೇರಿದ್ದಾರೆ. ಖಾಸಗಿತನದ ಸುರಕ್ಷತೆಗಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಮ ಮಾಲೀಕತ್ವ ಹೊಂದಿರುವ ಮೆಟಾ ಕಂಪನಿಯು ವರ್ತನೆ ಆಧರಿತ ಜಾಹೀರಾತುಗಳನ್ನು ಬಳಸುತ್ತಿದೆ. ವ್ಯಕ್ತಿಗಳ ಆನ್‌ಲೈನ್ ವರ್ತನೆ ಆಧರಿಸಿ ನಿರ್ದಿಷ್ಟ ಜಾಹೀರಾತು ಪ್ರಸಾರ ಮಾಡಲಾಗುತ್ತದೆ.

ಮೆಟಾ ಕಂಪನಿಯು ಸಮ್ಮತಿ ಪಡೆಯದೇ ಮಾಹಿತಿ ಸಂಗ್ರಹಿಸಿದೆ ಎಂದು ಯುರೋಪ್ ಮಾಹಿತಿ ರಕ್ಷಣಾ ಮಂಡಳಿ ಆರೋಪಿಸಿದ್ದು, ಪ್ರತಿ ದಿನಕ್ಕೆ 90 ಸಾವಿರ ಡಾಲರ್‌ಗಳ ದಂಡ ವಿಧಿಸಿತ್ತು. ಆಗಸ್ಟ್ 14ರಿಂದಲೂ ಈ ದಂಡ ಬಾಕಿ ಇದೆ. ಹೊಸ ನಿರ್ಬಂಧ ಯುರೋಪ್ ಒಕ್ಕೂಟ ಹಾಗೂ ಮೆಟಾ ನಡುವೆ ಸಂಘರ್ಷಕ್ಕೆ ಕಾರಣವಾಗಲಿದೆ.

ನಿಯಂತ್ರಕರ ಜೊತೆ ಸಹಕರಿಸುವುದಾಗಿ ಹಾಗೂ ಜಾಹೀರಾತು ಮುಕ್ತವಾದ ಸೇವೆಯ ಆಯ್ಕೆಯನ್ನು ಯುರೋಪ್‌ಗೆ ನೀಡುವುದಾಗಿ ಮೆಟಾ ತಿಳಿಸಿತ್ತು. ತಿಂಗಳಿಗೆ 10.59 ಡಾಲರ್ ಶುಲ್ಕದಲ್ಲಿ ತನ್ನ ಎಲ್ಲಾ ಉತ್ಪನ್ನಗಳನ್ನು ನೀಡುವುದಾಗಿ ಹೇಳಿತ್ತು.

ಆದರೆ, ಮೆಟಾದ ಪ್ರಸ್ತಾಪಿತ ಕ್ರಮಗಳು ಯುರೋಪಿನ ಕಾನೂನು ಮಾನದಂಡಕ್ಕೆ ಅನುಗುಣವಾಗಿಲ್ಲ. ಗ್ರಾಹಕರು ಹಣ ಪಾವತಿ ಇಲ್ಲವೇ ಖಾಸಗಿತನದ ಹಕ್ಕು ಎರಡರಲ್ಲಿ ಒಂದು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ ಎಂದು ಆಕ್ಷೇಪ ವ್ಯಕ್ತವಾಗುತ್ತಿದೆ.

## ಮಸೂದೆಗಳಿಗೆ ಅಂಗೀಕಾರ ವಿಳಂಬ

### ರಾಜ್ಯಪಾಲರ ವಿರುದ್ಧ ಸುಪ್ರೀಂನಲ್ಲಿ ಕೇರಳ ಅರ್ಜಿ

ನವದೆಹಲಿ, ನ. 2 - ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ಒಪ್ಪಿಗೆ ನೀಡುತ್ತಿಲ್ಲ. ಇದರಿಂದಾಗಿ ಜನರ ಹಕ್ಕುಗಳಿಗೆ ಸೋಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಕೇರಳ ಸರ್ಕಾರ ಅರ್ಜಿ ದಾಖಲಿಸಿದೆ.

ಇದಕ್ಕೂ ಮುಂಚೆ ತಮಿಳುನಾಡು ಹಾಗೂ ಪಂಜಾಬ್ ಸರ್ಕಾರಗಳು ತಮ್ಮ ರಾಜ್ಯಗಳ ರಾಜ್ಯಪಾಲರ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದವು.

ರಾಜ್ಯಪಾಲರು ನಿಷ್ಕ್ರಿಯರಾಗಿರುವ ಕಾರಣ ಎಂಟು ಮಸೂದೆಗಳು ಬಾಕಿ ಉಳಿದಿವೆ. ಈ ಮಸೂದೆಗಳು ಜನಹಿತಕ್ಕೆ ಹಾಗೂ ಜನರಿಗೆ ನೆರವು ನೀಡುವುದಕ್ಕೆ ಸಂಬಂಧಿಸಿದವಾಗಿವೆ. ವಿಳಂಬದಿಂದಾಗಿ ಜನರಿಗೆ ಸೌಲಭ್ಯಗಳ ನಿರಾಕರಣೆಯಾಗುತ್ತಿದೆ ಎಂದು ಕೇರಳ ಹೇಳಿದೆ.

ಈ ಮಸೂದೆಗಳ ಪೈಕಿ ಮೂರು ಎರಡು ವರ್ಷಗಳಿಂದ ವಿಳಂಬವಾಗಿವೆ. ಇನ್ನು ಮೂರು ವರ್ಷದಿಂದ ಬಾಕಿ ಇದೆ. ಇದರಿಂದಾಗಿ ಸಂವಿಧಾನದ ಮೂಲ ತತ್ವಗಳಿಗೆ ಧಕ್ಕೆಯಾಗಿದೆ ಎಂದು ಕೇರಳ ಸರ್ಕಾರದ ಅರ್ಜಿಯಲ್ಲಿ ತಿಳಿಸಲಾಗಿದೆ.

# ಲೋಕಿಕೆರೆ : ನಿರ್ಮಾಣ ಹಂತದಲ್ಲಿರುವ ಶ್ರೀ ವಿಜಯದುರ್ಗಾ ಪರಮೇಶ್ವರಿ ದೇವಸ್ಥಾನ

ದಾವಣಗೆರೆಯಿಂದ ಸುಮಾರು 18 ಕಿ. ಮೀ. ದೂರದಲ್ಲಿರುವ ಲೋಕಿಕೆರೆ ಗ್ರಾಮದ ಬಗ್ಗೆ ಈಗಾಗಲೇ ದಿನಕ್ಕೊಂದರಂತೆ ಹಲವಾರು ರೀತಿಯ ಕತೆಗಳು ಜನರ ಬಾಯಿಂದ ಬಾಯಿಗೆ ಬರತೊಡಗಿವೆ. ಈ ಊರಿಗೆ ಇಷ್ಟರಲ್ಲಿಯೇ ಪವಾಡ ಸದೃಶವೆಂಬಂತೆ ಪವಾಡ ನಾಯಕಿಯ ಆಗಮನವಾಗಲಿದ್ದು, ಅದೇ ಆ ದೇವಿಯ ಮೂರ್ತಿ ಪ್ರತಿಷ್ಠಾಪನೆಗೆ ದಿನಾಂಕ ನಿಗದಿಯಾಗಿದೆ.

ಈ ದೇವಸ್ಥಾನದಲ್ಲಿ ಪ್ರತಿಷ್ಠಾಪನೆಯಾಗುತ್ತಿರುವ ಶ್ರೀ ಲೋಕನಾಯಕಿ ವಿಜಯದುರ್ಗ ಪರಮೇಶ್ವರಿ ಆರಂಭದಲ್ಲಿಯೇ ಬಹಳಷ್ಟು ಪವಾಡಗಳನ್ನು ತನ್ನ ಭಕ್ತ ಸಮೂಹಕ್ಕೆ ತೋರಿಸಿಬಿಟ್ಟಿದ್ದಾಳೆ. ಈ ದೇವಿಯ ಮೂರ್ತಿ ಇಲ್ಲಿ ಪ್ರತಿಷ್ಠಾಪನೆಗೆ ಮೂಲಕಾರಣ ಜಿಲ್ಲೆಯ ಕತ್ತಲಗೆರೆ ಗ್ರಾಮದವರೇ ಆದ ಸೊಪ್ಪಿನ ತಿಪ್ಪಣ್ಣ.

ಕತ್ತಲಗೆರೆ ಗ್ರಾಮದ ದಿವಂಗತ ಸೊಪ್ಪಿನ ಹನುಮಂತಪ್ಪ ಮತ್ತು ಶ್ರೀಮತಿ ಸಿದ್ದಲಿಂಗಮ್ಮ ದಂಪತಿಯ ಪಂಚಮ ಪುತ್ರರಾಗಿರುವ ಸೊಪ್ಪಿನ ತಿಪ್ಪಣ್ಣನವರು ತಮ್ಮ ಗುರುಗಳಾದ ಬೆಂಗಳೂರಿನ ರಾಜರಾಜೇಶ್ವರಿ ನಗರದ ಶ್ರೀ ದಿನೇಶ್ ಗುರೂಜಿಯವರ ಮಾರ್ಗದರ್ಶನದಲ್ಲಿ ಈ ದೇವಾಲಯ ನಿರ್ಮಿಸುತ್ತಿದ್ದಾರೆ.

ಈ ಮೂರ್ತಿಯ ಇತಿಹಾಸ ಬಹು ದೊಡ್ಡದಾಗಿದ್ದು, ಪವಾಡ ಸೃಷ್ಟಿಸಿರುವ ಈ ಲೋಕನಾಯಕಿ ವಿಜಯದುರ್ಗ ಪರಮೇಶ್ವರಿ ಮೂರ್ತಿಯನ್ನು ಕೆತ್ತಿರುವ ಶಿಲ್ಪಿಗಳು ಅದನ್ನು ಬೆಂಗಳೂರಿನ ನೆಲಮಂಗಲದ ಬೂದಿಹಾಳ್ ಗ್ರಾಮದಲ್ಲಿ ಸುಮಾರು 50 ಎಕರೆ ಜಮೀನಿನಲ್ಲಿ 2019ರಲ್ಲಿ 101 ಹೋಮಕುಂಡದ ಮೂಲಕ 1500 ಜನ ಪುರೋಹಿತರೊಂದಿಗೆ,



ದಿನೇಶ್ ಗುರೂಜಿಯವರ ಸಾರಥ್ಯದಲ್ಲಿ ಆಯಾತ ಚಂಡಿ ಮಹಾಯಾಗದ ಮೂಲಕ ಪ್ರತಿಷ್ಠಾಪನೆಗೆ ಸಿದ್ದ ಮಾಡಲಾಗಿತ್ತು.

ಈ ಮೂರ್ತಿಗೆ ಮಹಾಯಾಗದ ಪೂಜೆಯಂತೂ ನಡೆಯಿತು. ದೇವಸ್ಥಾನವಿಲ್ಲದೆ, ದೇವಸ್ಥಾನ ನಿರ್ಮಾಣಕ್ಕೆ ಯೋಚಿಸಿದ ಭಕ್ತವೃಂದ ಮೂರ್ತಿಯನ್ನು ಕಾರ್ಕಳಕ್ಕೆ ಕಳಿಸಿಕೊಡಲಾಗಿತ್ತು. ಆದರೆ, ಮೂರ್ತಿಯು ಆ ಸ್ಥಳದಲ್ಲಿ ಇರದೇ ಪೂಜಾ ಯಾಗ ಮಾಡಿದ ಪೂಜೆ ನೆರವೇರಿಸಿದವರ ಮನೆಗೆ ಅಂದರೆ ರಾಜರಾಜೇಶ್ವರಿ ನಗರದ ಸೊಪ್ಪಿನ ತಿಪ್ಪಣ್ಣನವರ ಮನೆಗೆ ಶಿಲ್ಪಿಗಳೇ ತಂದು ಇರಿಸಿದರು.ಈ ಮೂರ್ತಿಯ ಪ್ರತಿಷ್ಠಾಪನೆಗೆ ಅನೇಕ ರೀತಿಯ ಸಮಸ್ಯೆಗಳು ಉದ್ಭವವಾಗಿ ವಿಧಿಯಿಲ್ಲದೇ ದೇವಿಯ ಮೂರ್ತಿಯನ್ನು ಸಿದ್ಧವಾಗಿದ್ದ ದೇವಸ್ಥಾನವೊಂದರಲ್ಲಿ ಪ್ರತಿಷ್ಠಾಪನೆ ಮಾಡಲು ತಿರುಪತಿಯ ಭಕ್ತರು ನಿರ್ಧರಿಸಿ, ಸ್ಥಳಾಂತರ ಮಾಡುವ ಸಮಯದಲ್ಲಿ ಮಹಾಮಾತೆ ಹೊಸಕೋಟೆಯ ಬಳಿ ಮುಂದಕ್ಕೆ ಚಲಿಸದೇ, ಅಲ್ಲಿಯೇ ನಿಂತು ಬಿಟ್ಟಳು. ಇದರ ಬಗ್ಗೆ ಚರ್ಚೆಗೆ ಬಿದ್ದ ಭಕ್ತ ಸಮೂಹ, ಎಲ್ಲಿಗೆ ಮೂರ್ತಿಯನ್ನು ಕಳಿಸುವುದು ಎಂದು ಚಿಂತಿಸುತ್ತಿದ್ದಾಗ, ಆನೇಕಲ್, ತಿರುಪತಿ ಮತ್ತಿತರೆ ಕಡೆಯವರು ತಮ್ಮ ಊರಿಗೆ ತೆಗೆದುಕೊಂಡು ಹೋಗಲು ಮತ್ತೆ ಯತ್ನಿಸಿದಾಗ ವಿಧಿಯಿಲ್ಲದೇ ಚೀಟಿ ಎತ್ತಿದಾಗ ಅದು ಕತ್ತಲಗೆರೆಯ ತಿಪ್ಪಣ್ಣನವರಿಗೆ ಒಲಿದುಬಂದಿದೆ.

ಗ್ರಾಮದಲ್ಲಿ ಪ್ರತಿಷ್ಠಾಪನೆಗೊಳ್ಳುವ ಈ ಮೂರ್ತಿ ಈ ಮೊದಲು ಬೆಂಗಳೂರಿನ ತಿಪ್ಪಣ್ಣನವರ ಪುಟ್ಟ ಮನೆಯಲ್ಲಿ ಒಂದೂವರೆ ವರ್ಷಗಳ ಕಾಲ ನೆಲೆಸಿದ್ದು, ಇದೀಗ ಲೋಕಿಕೆರೆ ಗ್ರಾಮದಲ್ಲಿ ನಿರ್ಮಾಣವಾಗಿ ಅಂತಿಮ ಹಂತದಲ್ಲಿರುವ ತ್ರಿಕೂಟಾಚಲ ಮಂದಿರದಲ್ಲಿ ಪ್ರತಿಷ್ಠಾಪನೆಗಾಗಿ ಸಿದ್ಧವಾಗಿದ್ದಾಳೆ. ದೇವಸ್ಥಾನ ಕಾರ್ಯ ಭರದಿಂದ ಸಾಗಿದೆ.

ದೇವಸ್ಥಾನದಲ್ಲಿ ಅರ್ಧನಾರೀಶ್ವರ ಮೂರ್ತಿ, ಆಂಜನೇಯ ಮೂರ್ತಿ, ಮಹಾಗಣಪತಿ ಮೂರ್ತಿಗ ಳಲ್ಲದೇ ಶ್ರೀ ಲಕ್ಷ್ಮೀನಾರಾಯಣನ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಬೇಕೆಂದು ತಿಪ್ಪಣ್ಣ ಸಂಕಲ್ಪ ಮಾಡಿಕೊಂಡಿದ್ದಾರೆ. ಇತಿಹಾಸದಲ್ಲಿ ಲೋಕಿಕೆರೆಗೆ ಹೊಯ್ಸಳರ ಕಾಲದಿಂದಲೂ ಮಹಾ ಕೊಡುಗೆ ಇದ್ದು, ಹಲವಾರು ಕೆರೆಗಳ ಹೆಸರುಗಳು ಈ ಊರಿನ ಆಜುಬಾಜಿನಲ್ಲಿದ್ದು, 2021ರಲ್ಲಿ ಈ ದೇವಸ್ಥಾನದ ನಿರ್ಮಾಣ ಕಾರ್ಯವನ್ನು ವಿಧಿವತ್ತಾಗಿ, ಶಾಸ್ತ್ರಬದ್ಧ ವಾಗಿ ದಿನೇಶ್ ಗುರೂಜಿಯವರ ಸಾರಥ್ಯದಲ್ಲಿ ಪಂಡಿತ, ಪುರೋಹಿತರ ಮೂಲಕ ನೆರವೇರಿಸಿದ್ದು, 2024ರ ಜನವರಿ ಅಥವಾ ಫೆಬ್ರವರಿಯಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ದಿನಾಂಕ ನಿಗದಿಪಡಿಸಿದ್ದಾರೆ.

**- ಎಸ್.ಬಿ. ಜಿನದತ್ತ**, ದಾವಣಗೆರೆ.

# ಅನಾದಿ ಕಾಲದಿಂದಲೂ ಕನ್ನಡದ ಉಳಿವಿನ ಹೋರಾಟ ನಡೆದಿದೆ

## ಕೊಟ್ಟೂರು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ವಿ.ಕಾರ್ತಿಕ್



ಕೊಟ್ಟೂರು, ನ.2- ಅನಾದಿ ಕಾಲದಿಂದಲೂ ಕನ್ನಡದ ಉಳಿವಿಗಾಗಿ ಸಾಕಷ್ಟು ರಾಜ ಮನೆತನಗಳು, ಸಂಘಟನೆಗಳು ಮತ್ತು ಕನ್ನಡದ ಅಭಿಮಾನಿಗಳು ನಿರಂತರ ಹೋರಾಟ ನಡೆಸಿದ್ದಾರೆ ಎಂದು ತಹಶೀಲ್ದಾರ್ ವಿ. ಕಾರ್ತಿಕ್ ಹೇಳಿದರು.

ಎಪಿಎಂಸಿ ಆವರಣದಲ್ಲಿ ಶಿಕ್ಷಣ ಇಲಾಖೆ, ತಾಲ್ಲೂಕು ಆಡಳಿತ ಹಾಗೂ ತಾಲ್ಲೂಕು ಪಂಚಾಯಿತಿ ಮತ್ತು ಪಟ್ಟಣ ಪಂಚಾಯ್ತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇಂದು ಈ ಆಚರಣೆ ನಿಜಕ್ಕೂ ಅರ್ಥಪೂರ್ಣ, ಕರ್ನಾಟಕ ರಾಜ್ಯ ಎಲ್ಲರನ್ನೂ ಕೈಬೀಸಿ ಕರೆಯುವ ಮತ್ತು ಎಲ್ಲಾ ರಾಜ್ಯ, ದೇಶದವರನ್ನು ಕರುಣೆ ಸಲಹುತ್ತಿರುವ ರಾಜ್ಯ, ಕನ್ನಡದ ನೆಲ ಜಲ ಇಲ್ಲಿನ ಆದರಣೀಯ ಸ್ಥಳಗಳು ಮಹಾ ಇತಿಹಾಸವನ್ನೇ ಸಾರುತ್ತಿವೆ. ಮತ್ತು ಇಲ್ಲಿ ಸಾಹಿತ್ಯ, ಸಾಂಸ್ಕೃತಿಕ, ಸಂಗೀತ, ನೃತ್ಯ, ಜಾನಪದ, ಕಲಾ ರಂಗಗಳೆಲ್ಲವೂ ದೇಶದಲ್ಲಿ ಹಾಗೂ ಇಡೀ ವಿಶ್ವದಲ್ಲಿ ರಾಜ್ಯವನ್ನು ಮೇರು ಪರ್ವತಕ್ಕೆ ಕೊಂಡೊಯ್ಯುತ್ತಿವೆ ಎಂದು ಹೇಳಿದರು.

ಇಲ್ಲಿನ ಶ್ರೀ ಗುರು ಬಸವೇಶ್ವರ ದೇವಸ್ಥಾನದಿಂದ, ಪಟ್ಟಣದ ಎಲ್ಲಾ ಶಾಲೆಯ ಮಕ್ಕಳು ಹಾಗೂ ಎಲ್ಲಾ ಅಧಿಕಾರಿ ವರ್ಗದವರು ಸಕಲ ವಾದ್ಯಗಳೊಂದಿಗೆ ತಾಯಿ ಭುವನೇಶ್ವರಿ ಭಾವಚಿತ್ರವನ್ನು ಟ್ರ್ಯಾಕ್ಟರ್ ಮೂಲಕ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ವಿದ್ಯಾರ್ಥಿಗಳಿಂದ ಕನ್ನಡದ ರಾಜ್ಯೋತ್ಸವದ ಬಗ್ಗೆ ವಿಶೇಷವಾಗಿ ಕನ್ನಡದ 5 ಗೀತೆಗಳನ್ನು ಸೊಗಸಾಗಿ ಹಾಡಲಾಯಿತು.

ತದನಂತರ ಶ್ರೀ ಭುವನೇಶ್ವರಿ ದೇವಿ ಕುರಿತು ಎಲ್ಲಾ ಶಾಲಾ ಮಕ್ಕಳಿಂದ ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ವಿವಿಧ ರಂಗದಲ್ಲಿ ಸಾಧನೆಗೈದ ಶಿವರಾಜ್ (ಕನ್ನಡಿಗ ಮಾಧ್ಯಮ ರಂಗ) ಶ್ರೀಮತಿ ಪದ್ಮ ಜಾಗಟಗೆರೆ (ಸಾಹಿತ್ಯ) ನಾಗೇಶ್ ಪೂಜಾರ್ (ರಂಗಭೂಮಿ) ಮೂಲಿಮನಿ ಕೊಟ್ರೇಶ್ (ಸಂಗೀತ ಕ್ಷೇತ್ರ) ಸತೀಶ್ (ಸಮಾಜ ಸೇವೆ) ಇವರುಗಳಿಗೆ ತಾಲ್ಲೂಕು ಆಡಳಿತ ಹಾಗೂ ತಾಲ್ಲೂಕು ಪಂಚಾಯಿತಿ ಮತ್ತು ಪಟ್ಟಣ ಪಂಚಾಯತಿ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ತಾಪಂ ಸಹಾಯಕ ನಿರ್ದೇಶಕ ವಿಜಯಕುಮಾರ್, ಇಓ ವೈ. ರವಿ ಕುಮಾರ್, ಪಪಂ ಮುಖ್ಯಾಧಿಕಾರಿ ಎ. ನಸರುಲ್ಲಾ, ಎಪಿಎಂಸಿ ಕಾರ್ಯದರ್ಶಿ ವೀರಣ್ಣ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ದೇವರಮನಿ ಕೊಟ್ರೇಶ್, ಪಟ್ಟಣ ಪಂಚಾಯ್ತಿ ಸದಸ್ಯ ಕೆಂಗರಾಜ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ಕೊಟ್ರೇಶ್, ಮೈದೂರು ಚೀಪ್ ಕಮಿಟಿ ಸದಸ್ಯ ಶಶಿಧರ್, ಕೊಟ್ಟೂರು ಅಜ್ಜಪ್ಪ, ನಿಂಗಪ್ಪ ಮತ್ತಿತರರು ಪಾಲ್ಗೊಂಡಿದ್ದರು. ಗುರು ಬಸವರಾಜ್ ಸ್ವಾಗತಿಸಿದರು .

# ವಿಕಲಚೇತನರನ್ನು ಗೌರವದಿಂದ ಕಾಣಬೇಕು



## ಜಗಳೂರು ಶಾಸಕ ಬಿ. ದೇವೇಂದ್ರಪ್ಪ ಕರೆ

ಜಗಳೂರು, ನ. 2- ವಿಕಲಚೇತನರನ್ನು ಗೌರವದಿಂದ ಕಾಣಬೇಕು. ಪೋಷಕರಿಗೆ ಆತ್ಮಸ್ಥೈರ್ಯ ತುಂಬಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಗುರುಭವನದಲ್ಲಿ ಶಿಕ್ಷಣ ಇಲಾಖೆಯ ಸರ್ವ ಶಿಕ್ಷ ಅಭಿಯಾನದಡಿ ವಿಕಲಚೇತನ ಮಕ್ಕಳಿಗೆ ತ್ರಿಚಕ್ರ ಬೈಸಿಕಲ್ ಹಾಗೂ ಅಂಧ ಮಕ್ಕಳಿಗೆ ಸಾಧನ ಸಲಕರಣೆ ವಿತರಿಸಿ ಅವರು ಮಾತನಾಡಿದರು

ವಿಕಲಚೇತನದಿಂದ ಮತ್ತೊಬ್ಬರನ್ನು ಅವಲಂಬಿಸಿರುವುದು ಕಂಡು ನನಗೆ ಮಾತು ಬರುತ್ತಿಲ್ಲ ಎಂದು ಭಾವುಕರಾದರು. ಬಡತನಕ್ಕಿಂತ ಮಿಗಿಲಾದ ಶಾಪ ಅಂಗವೈಕಲ್ಯತೆ. ಆದ್ದರಿಂದ ಪ್ರತಿಯೊಬ್ಬರೂ ಅವರನ್ನು ತಾತ್ಸಾರ ಮಾಡದೇ ಗೌರವಿಸಬೇಕು ಎಂದರು.

ಸರ್ಕಾರದಿಂದ ಶಿಕ್ಷಣ ಇಲಾಖೆಯಡಿ ಅರ್ಹರನ್ನು ಗುರುತಿಸಿ, ಅವರಿಗೆ ಗೃಹಪಾಠ, ಸಾಧನ ಸಲಕರಣೆ ವಿತರಿಸುತ್ತಿರು ವುದು ಶ್ಲಾಘನೀಯ. ನಾನು ಕ್ಷೇತ್ರದಲ್ಲಿ ವಿಕಲಚೇತನರಿಗೆ ಸೌಲಭ್ಯ ಕಲ್ಪಿಸಲು ಸದಾ ಬದ್ಧನಾಗಿರುವೆ ಎಂದು ಭರವಸೆ ನೀಡಿದರು.

ಶಿಕ್ಷಕರ ವೃತ್ತಿ ಪವಿತ್ರವಾದದ್ದು. ಕ್ಷೇತ್ರದಲ್ಲಿ ಕೆಲವರಿಂದ ಇಡೀ ಶಿಕ್ಷಕ ವೃಂದ ತಲೆ ತಗ್ಗಿಸುವಂ ತಾಗಿದ್ದು, ಅದಕ್ಕೆ ಕಾರಣ ರಾಜಕಾರಣದ ವ್ಯವಸ್ಥೆ.

ನನ್ನ ಆಡಳಿತಾವಧಿಯಲ್ಲಿ ಎಲ್ಲರೂ ಸರಿದಾರಿಗೆ ಬಂದು ಉತ್ತಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೆ ಪ್ರಸಕ್ತ ಸಾಲಿನ ಸೆ. 5ರಂದು ನಡೆದ ಶಿಕ್ಷಕರ ದಿನಾಚರಣೆ ಸಾಕ್ಷಿಯಾಗಿತ್ತು ಎಂದು ಪ್ರಶಂಶಿಸಿದರು. ಇದೇ ವೇಳೆ ಶಾಸಕರು ವೈಯಕ್ತಿಕವಾಗಿ ತಾಲ್ಲೂಕಿನ 76 ದೈಹಿಕ ಶಿಕ್ಷಕರಿಗೆ ಟ್ರ್ಯಾಕ್ ಸೂಟ್, ಸಮವಸ್ತ್ರಗಳನ್ನು ವಿತರಿಸಿ, ಗೌರವಿಸಿದರು.

ಸಮಾರಂಭದಲ್ಲಿ ಬಿಇಓ ಹಾಲಮೂರ್ತಿ, ಬಿಆರ್‌ಸಿ ಡಿಡಿ ಹಾಲಪ್ಪ, ಪ್ರಾಂಶುಪಾಲ ಎ. ಎಲ್.ತಿಪ್ಪೇಸ್ವಾಮಿ, ದೈಹಿಕ ಶಿಕ್ಷಣಾಧಿಕಾರಿ ಸುರೇಶ್ ರೆಡ್ಡಿ, ದೈಹಿಕ ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಮೂರ್ತಿ, ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಗೌಸ್, ಶಂಷುದ್ದೀನ್ ಮತ್ತಿತರರು ಉಪಸ್ಥಿತರಿದ್ದರು.

# ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಕರ್ನಾಟಕ ರಾಜ್ಯೋತ್ಸವ



ದಾವಣಗೆರೆ, ನ.2- ನಗರದ ಯುನೈಟೆಡ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ 68ನೇ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಲಾಯಿತು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಿ.ದಾದಾಪೀರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ರಾಜ್ಯೋತ್ಸವ ಆಚರಣೆಗೆ ಅರ್ಥ ಬರಬೇಕಾದರೆ ಕನ್ನಡ ಶಿಕ್ಷಕರು ಮಕ್ಕಳು ಕನ್ನಡ ಭಾಷೆಯನ್ನು ಬಳಸುವ ಹಾಗೆ ಮತ್ತು ಕನ್ನಡ ಗುಣಮಟ್ಟ ಕಲಿಕೆ ಭಾಷೆಯ ಬಳಕೆ ಅದರ ಅವಶ್ಯಕತೆ ಬಗ್ಗೆ ಮನ ಮುಟ್ಟುವ ಹಾಗೆ ತಿಳಿಸಿ ಕೊಟ್ಟರು.

ಶಾಲೆಯ ಪ್ರಾಂಶುಪಾಲ ಎಂ. ವಾಸೀಂ ಪಾಷಾ ಮಾತನಾಡಿ, ಕನ್ನಡ ಭಾಷೆ, ಕರ್ನಾಟಕ ರಾಜ್ಯ ಏಕೀಕರಣಗೊಂಡ ರೀತಿ ಕುರಿತು, ಏಕೀಕರಣಕ್ಕಾಗಿ ಹೋರಾಟ ಮಾಡಿದ ಹೋರಾಟಗಾರರ ಬಗ್ಗೆ, ಕರ್ನಾಟಕ ಎಂಬ ಹೆಸರು ಬಂದ ರೀತಿ ಕುರಿತು ಬಹಳ ಸರಳವಾಗಿ ತಮ್ಮ ಭಾಷಣದಲ್ಲಿ ತಿಳಿಸಿದರು.

ಶಾಲೆಯ ಕನ್ನಡ ಶಿಕ್ಷಕ ಜೆ. ಇಬ್ರಾಹಿಂ ಕನ್ನಡ ಭಾಷೆ ಉಗಮ, ಬೆಳವಣಿಗೆ ರೀತಿ, ಭಾಷೆಯಿಂದ ಸಾಧನೆ ಮಾಡಿದ ಸಾಧಕರ ಶ್ರಮದ ಬಗ್ಗೆ ತಿಳಿಸಿದರು.

9ನೇ ತರಗತಿ ವಿದ್ಯಾರ್ಥಿನಿ ಕು. ಅದಿಯಾ ಮಿಸ್ಬಾ ಮಾತನಾಡಿದರು. ಶಾಲಾ ಸಂಯೋಜಕರಾದ ಶ್ರೀಮತಿ ಶರ್ಫುನ್ನೀಸಾ ಹಾಗೂ ಶಾಲಾ ಆಡಳಿತ ಅಧಿಕಾರಿ ಅಶ್ಫಾಕ್ ಅಹಮದ್ ಉಪಸ್ಥಿತರಿದ್ದರು.

# ಅಭಿವೃದ್ಧಿ ಸ್ಥಗಿತ, ಆಶ್ವಾಸನೆ ಈಡೇರಿಕೆಗೆ ಪರದಾಟ

**(1ನೇ ಪುಟದಿಂದ)** ಅಧಿಕಾರದ ಎರಡನೇ ಅವಧಿಯಲ್ಲಿ ಪಕ್ಷ ಮತ್ತು ಸರ್ಕಾರದ ಮೇಲೆ ನಿಯಂತ್ರಣ ಇಲ್ಲದ ಪರಿಸ್ಥಿತಿಯಲ್ಲಿ ಇದ್ದಾರೆ.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆ ಹೊರತು ಪಡಿಸಿ, ಗೃಹಲಕ್ಷ್ಮಿ ಯೋಜನೆ ಸೇರಿದಂತೆ ಉಳಿದ ಯೋಜನೆಗಳಿಗೆ ಸಂಪನ್ಮೂಲ ಕ್ರೋಢೀಕರಣಕ್ಕೆ ಕಸರತ್ತು ಮಾಡುತ್ತಿದ್ದಾರೆ.

ಸರ್ಕಾರ ಆರ್ಥಿಕ ದಿವಾಳಿಯಾಗಿದ್ದು, ಶಾಸಕರ ಅನುದಾನದ ಎರಡು ಕೋಟಿ ರೂ.ನಲ್ಲಿ ಕೇವಲ 50 ಲಕ್ಷ ರೂ. ಮಾತ್ರ ಬಿಡುಗಡೆ ಮಾಡಿದ್ದು, ಎಸ್‌ಸಿ, ಎಸ್‌ಟಿ ಯೋಜನೆಗಳ ಅನುಷ್ಠಾನ ಹಾಗೂ ನಿಗಮ-ಮಂಡಳಿಗಳಿಗೆ ಹಣ ಬಿಡುಗಡೆ ಮಾಡಿಲ್ಲ.

ಬರಪೀಡಿತ ಪ್ರದೇಶಕ್ಕೆ ಮುಖ್ಯಮಂತ್ರಿ ಸೇರಿದಂತೆ ಯಾವೊಬ್ಬ ಸಚಿವರೂ ಭೇಟಿ ನೀಡಿ ವಾಸ್ತವಿಕ ಸ್ಥಿತಿ ತಿಳಿಯುವ ಪ್ರಯತ್ನ ಮಾಡಿಲ್ಲ.

ರೈತರು ಬರದ ಸಂಕಷ್ಟದಲ್ಲಿರುವ ಈ ಸಂದರ್ಭದಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಟ್ರಾನ್ಸ್‌ಫಾರ್ಮರ್ ಸಹಿತ ಉಚಿತ ಮೂಲಸೌಕರ್ಯ ಒದಗಿಸುವ ಯೋಜನೆಯನ್ನು ರಾಜ್ಯ ಸರ್ಕಾರ ರದ್ದು ಮಾಡಿದೆ.

ಇತ್ತೀಚೆಗೆ ರಾಜ್ಯಾದ್ಯಂತ ನಡೆದ ಆದಾಯ ತೆರಿಗೆ (ಐಟಿ) ದಾಳಿಯಲ್ಲಿ 100 ಕೋಟಿ ರೂ.ಗೂ ಹೆಚ್ಚು ಹಣ ಪತ್ತೆ ಯಾಗಿದ್ದು, ಸರ್ಕಾರದ ಭ್ರಷ್ಟಾಚಾರ ಬಯ ಲಾಗಿದೆ. ವರ್ಗಾವಣೆ ದಂಧೆ ಮುಂದುವರೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ನಾಯಕತ್ವ ಬಣಗಳ ಜಗ್ಗಾಟ ತಾರಕಕ್ಕೇರಿದೆ.

ಕಾವೇರಿ ಜಲ ನ್ಯಾಯಮಂಡಳಿ ಮುಂದೆ ರಾಜ್ಯದ ಜಲ ಸಂಕಷ್ಟವನ್ನು ಸಮರ್ಥವಾಗಿ ಮಂಡಿಸಲು ವಿಫಲವಾಗಿ, ಕಳೆದ ಎರಡು ತಿಂಗಳಿನಿಂದ ತಮಿಳುನಾಡಿಗೆ ನಿರಂತರ ನೀರು ಹರಿಸಲಾಗುತ್ತಿದೆ. ಇದರಿಂದ ಕುಡಿಯುವ ನೀರಿನ ಸಂಕಷ್ಟ ಎದುರಾಗಿದೆ. ಸಂಪನ್ಮೂಲಗಳ ಒತ್ತಡದಲ್ಲಿರುವ ಸಿದ್ದರಾಮಯ್ಯ, ಎಲ್ಲದಕ್ಕೂ ಕೇಂದ್ರದ ಕಡೆ ನೋಡುತ್ತಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

# ಅಕ್ರಮ ಪಂಪ್‌ಸೆಟ್‌ಗಳ ತೆರವು ಕಾರ್ಯಾಚರಣೆ



**(1ನೇ ಪುಟದಿಂದ)** ಬೆಸ್ಕಾಂ ಮತ್ತು ಪೊಲೀಸ್ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಕೆಲವು ಕಡೆ ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ರೈತರು ಅಡ್ಡಿ ಪಡಿಸಲು ಯತ್ನಿಸಿದಾಗ ಪೊಲೀಸರು ಮಧ್ಯಪ್ರವೇಶ ಮಾಡಿದಾಗ ರೈತರು ಸುಮ್ಮನಾಗಿದ್ದಾರೆಂದು ಹೇಳಲಾಗಿದೆ.

**ಎಸ್‌ಇ ಭೇಟಿ :** ಭದ್ರಾ ಯೋಜನೆಯ ಅಧೀಕ್ಷಕ ಇಂಜಿನಿಯರ್ ಸುಜಾತ ಅವರು ಗುರುವಾರ ಅಕ್ರಮ ಪಂಪ್‌ಸೆಟ್‌ಗಳ ತೆರವು ಕಾರ್ಯಾಚರಣೆ ಸ್ಥಳಕ್ಕೆ ಭೇಟಿ ನೀಡಿದ್ದರು. ನಂತರ ಅಲ್ಲಿಂದ ನಾಲೆಯ ಮಾರ್ಗದ ಮೂಲಕ ಕೊಮಾರನಹಳ್ಳಿವರೆಗೆ ಬಂದು ನೀರಿನ ಮಟ್ಟವನ್ನು ಪರಿಶೀಲಿಸಿದ್ದಾರೆ.

# ಹರಿಹರದಲ್ಲಿ ಗಣೇಶೋತ್ಸವ : ಅನ್ನ ಸಂತರ್ಪಣೆಗೆ ಶಿವಶಂಕರ್ ಚಾಲನೆ



ಹರಿಹರ, ನ.2- ನಗರದ ಹೊಸಭರಂಪುರ ಬಡಾವಣೆಯ ಶ್ರೀ ಗ್ರಾಮದೇವತೆ ದೇವಸ್ಥಾನದ ಆವರಣದಲ್ಲಿ, ಭರಂಪುರ ಯುವಕ ಸಂಘದ ವತಿಯಿಂದ ಹರಿಹರ ಕಾ ರಾಜ್ ಗಣೇಶ ಪ್ರತಿಷ್ಠಾಪಿಸಿ, ಭಾನುವಾರದ ವಿಸರ್ಜನಾ ಕಾರ್ಯಕ್ರಮದ ಅಂಗವಾಗಿ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಜೆಡಿಸ್ ಅಧ್ಯಕ್ಷ ಬಿ. ಚಿದಾನಂದಪ್ಪ ಹಾಗೂ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಪೂರ್, ಉಪಾಧ್ಯಕ್ಷ ಕೆ.ಜಿ. ಸಿದ್ದೇಶ್ ಚಾಲನೆ ನೀಡಿದರು.

ಇನ್‌ಸೈಟ್ಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ. ವಿನಯಕುಮಾರ್ ಕಕ್ಕರಗೊಳ್ಳ, ಉಪಾಧ್ಯಕ್ಷ ಕೆ.ಜಿ. ಸಿದ್ದೇಶ್, ಸದಸ್ಯರಾದ ರಜನಿಕಾಂತ್, ಬಿ. ಅಲ್ತಾಫ್, ರಜನಿಕಾಂತ್ ಎಸ್.ಎಂ, ವಸಂತ್, ಹನುಮಂತಪ್ಪ, ಭರಂಪುರ ಯುವಕ ಸಂಘದ ಅಧ್ಯಕ್ಷ ಸುರೇಶ್ ಚಂದಪೂರ್, ಗ್ರಾಮದೇವತೆ ದೇವಸ್ಥಾನ ಸಮಿತಿ ಅಧ್ಯಕ್ಷ ಪೂಜಾರ್ ಈರಣ್ಣ, ಕಾರ್ಯದರ್ಶಿ ಕೆ.ಬಿ. ರಾಜಶೇಖರ್, ಉಪಾಧ್ಯಕ್ಷ ಬೆಣ್ಣೆ ರೇವಣಸಿದ್ದಪ್ಪ, ಸಹ ಕಾರ್ಯದರ್ಶಿ ಗುತ್ಯಪ್ಪ, ನಿರ್ದೇಶಕರಾದ ಎಂ ಚಿದಾನಂದ ಕಂಚಿಕೇರಿ, ಪರಮೇಶ್ವರಪ್ಪ, ಹಾವನೂರು ಈರಣ್ಣ, ರಾಘು ಚೌಗಲೆ ಮತ್ತಿತರರು ಹಾಜರಿದ್ದರು.

# ದಾನ - ಧರ್ಮದಿಂದಲೇ ನನಗೆ ಶ್ರೇಯಸ್ಸು ಸಿಕ್ಕಿದೆ : ಎಸ್ಸೆಸ್

**(1ನೇ ಪುಟದಿಂದ)** ಸಮಾಜದ ಕೆಲಸ ಮಾಡುತ್ತಿರುವ ಎಸ್ಸೆಸ್ ಶತಾಯುಷಿಗಳಾಗಲಿ ಎಂದು ಜವಳಿ ಉದ್ಯಮಿಯೂ ಆಗಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಹಿರಿಯ ನಿರ್ದೇಶಕ ಬಿ.ಸಿ. ಉಮಾಪತಿ ಭಗವಂತನಲ್ಲಿ ಪ್ರಾರ್ಥಿಸಿದರು.

ಎಸ್ಸೆಸ್ ಅವರೊಂದಿಗೆ ನಾವಿದ್ದೇವೆ ಎನ್ನುವುದೇ ನಮ್ಮ ಪುಣ್ಯ. ಅವರ ಆಯಸ್ಸು ನೂರಾಗಬೇಕು. ಶತಾಯುಷಿಯ ಸಂಭ್ರಮಾಚರಣೆಯನ್ನು ಮಾಡುವಂತಹ ಭಾಗ್ಯ ನಮ್ಮೆಲ್ಲರಿಗೂ ಸಿಗಬೇಕು ಎಂದು ಉಮಾಪತಿ ಆಶಯ ವ್ಯಕ್ತಪಡಿಸಿದರು.

**ಎಸ್ಸೆಸ್ ಸೇವೆಗಳ ಪ್ರತಿಬಿಂಬ :** ಹಿರಿಯ ಕೈಗಾರಿಕೋದ್ಯಮಿಯೂ ಆಗಿರುವ ಬಾಪೂಜಿ ಸಹಕಾರಿ ಬ್ಯಾಂಕ್ ಹಿರಿಯ ನಿರ್ದೇಶಕ ಅಥಣಿ ಎಸ್. ವೀರಣ್ಣ ಮಾತನಾಡಿ, ನಾಲ್ಕು ಗೌರವ ಡಾಕ್ಟರೇಟ್ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ ಎಂದರೆ, ಅವು ಎಸ್ಸೆಸ್ ಅವರು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಅನುಪಮ ಮತ್ತು ಮಾದರಿ - ಅರ್ಥಪೂರ್ಣ ಹಾಗೂ ಶಾಶ್ವತ ಸೇವೆಗಳ ಪ್ರತಿಬಿಂಬ ಎಂದು ಬಣ್ಣಿಸಿದರು.

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷರೂ ಆಗಿರುವ ಜಿಲ್ಲಾ ಸಹಕಾರ ಬ್ಯಾಂಕುಗಳ ಒಕ್ಕೂಟದ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್.ಜಿ.ಶ್ರೀನಿವಾಸಮೂರ್ತಿ, ಶ್ರೀ ಅಂಬಾಭವಾನಿ ಅರ್ಬನ್ ಕೋ-ಆರಪೇಟಿವ್ ಬ್ಯಾಂಕ್ ಅಧ್ಯಕ್ಷ ಗೋಪಾಲರಾವ್ ಮಾನೆ, ಶಿವ ಸಹಕಾರಿ ಬ್ಯಾಂಕ್ ಉಪಾಧ್ಯಕ್ಷ ಐಗೂರು ಚಂದ್ರಶೇಖರ್, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ, ನಿರ್ದೇಶಕ ದೇವರಮನೆ ಶಿವಕುಮಾರ್, ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ ಪರಶುರಾಮಪ್ಪ, ನಿರ್ದೇಶಕರುಗಳಾದ ಎ.ಹೆಚ್. ಕುಬೇಂದ್ರಪ್ಪ, ಕಿರುವಾಡಿ ವಿ. ಸೋಮಶೇಖರ್, ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಬಿ.ಹೆಚ್. ಪರಶುರಾಮಪ್ಪ, ವ್ಯವಸ್ಥಾಪಕ ಮಂಜುನಾಥ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕಡಲೆ ಬೆಳೆ ನವೀನ ತಳಿ ಯಾಂತ್ರಿಕ ಕಟಾವಿಗೆ ಸೂಕ್ತ

## ಭೀಮನೇರಿ ಗ್ರಾಮದ ರೈತರ ಸಭೆಯಲ್ಲಿ ಬೇಸಾಯ ತಜ್ಞ ಬಿ.ಓ ಮಲ್ಲಿಕಾರ್ಜುನ್ ಸಲಹೆ

ದಾವಣಗೆರೆ, ನ.2- ಹಿಂಗಾರಿ ಬೆಳೆಯಾಗಿ ಕಡಲೆಯಲ್ಲಿ ನವೀನ ತಳಿಗಳಾದ ಜಿಬಿಎಂ-2 ಮತ್ತು ಎನ್‌ಬಿಇಜಿ-47 ಯಾಂತ್ರೀಕೃತ ಕಟಾವಿಗಾಗಿ ಸೂಕ್ತ ತಳಿಗಳಾಗಿವೆ ಎಂದು ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ಅಭಿಪ್ರಾಯಪಟ್ಟರು. ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ (ದಾವಣಗೆರೆ) ಇವರು ಯಾಂತ್ರೀಕೃತ ಕಟಾವು ಹಾಗೂ ಹೆಚ್ಚಿನ ಇಳುವರಿ ಕೊಡುವ ಕಡಲೆ ಬೆಳೆಯಲ್ಲಿ ವಿವಿಧ ಸೂಕ್ತ ತಳಿಗಳ ತುಲನೆಯ ಕ್ಷೇತ್ರ ಪ್ರಯೋಗ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಚನ್ನಗಿರಿ ತಾಲ್ಲೂಕಿನ ಭೀಮನೇರಿ ಗ್ರಾಮದ ಆಯ್ದ ರೈತರು ಭಾಗವಹಿಸಿದ್ದರು.

ಕಡಲೆ ಬೆಳೆಯಲ್ಲಿ ಯಾಂತ್ರೀಕೃತ ಕಟಾವಿಗೆ ಸೂಕ್ತವಾದ ತಳಿಗಳಾದ ಜಿಬಿಎಂ-2 ಮತ್ತು ಎನ್‌ಬಿಇಜಿ-47 ನೀರಾವರಿಗೆ ಸೂಕ್ತ ಹಾಗೂ ಜೈವಿಕ ಗೊಬ್ಬರಗಳಾದ ರೈಜೋಬಿಯಂ ಮತ್ತು ಪಿ.ಎಸ್.ಬಿ. ತಲಾ 200 ಗ್ರಾಂ ಪ್ರತಿ ಎಕರೆ ಬೀಜಕ್ಕೆ ಬೀಜೋ ಪಚಾರ ಮಾಡಿ ಬಿತ್ತನೆ ಮಾಡುವುದರಿಂದ ರಾಸಾಯನಿಕ ಗೊಬ್ಬ ರದ ಬಳಕೆಯನ್ನು ಶೇಕಡಾ 25ರಷ್ಟು ಕಡಿಮೆ ಮಾಡಬಹುದು ಎಂದು ಅಭಿಪ್ರಾ ಯಪಟ್ಟರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ರೈತರಿಗೆ ಒಳಸುರಿವುಗಳನ್ನು ನೀಡಲಾಯಿತು.

# ನಾನೇ ಸಿಎಂ

**(1ನೇ ಪುಟದಿಂದ)** ಮಲತಾಯಿ ಧೋರಣೆ ತೋರುತ್ತಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಶಾಸಕರು ಅವರ ಹಣದಲ್ಲಿ ವಿದೇಶ ಪ್ರವಾಸ ಹೋಗುತ್ತಿದ್ದಾರೆ, ಸರ್ಕಾರದಿಂದ ನಾವು ಯಾರನ್ನೂ ಕಳಿಸೋಲ್ಲ ಎಂದವರು ಸ್ಪಷ್ಟಪಡಿಸಿದರು.


**ಬೇಕಾಗಿದ್ದಾರೆ**
ಮನೆಯಲ್ಲಿದ್ದುಕೊಂಡು ವಯಸ್ಸಾದ ಮಹಿಳೆಯನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಮೊ. 97407-02055

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ LIC ಕಾಲೋನಿಯಲ್ಲಿ 45x50 South, 40x50 South, 50x80 South, 55x40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. ಬಿ 30x40 ಉತ್ತರ ಹೊಸ ಮನೆ ಇದೆ. 30x50 ಪಶ್ಚಿಮ ಹೊಸದು. ಎಸ್.ಎಸ್. ಬಿ ಬ್ಲಾಕ್, 30x62 ಪಶ್ಚಿಮ, ತರಳಬಾಳು ಮನೆ, 40x50 ಉತ್ತರ, ಎಂಸಿಸಿ ಬಿ ಬ್ಲಾಕ್ ಮನೆ ಇದೆ.
ಏಜೆಂಟರು ಎಸ್. ಯಲ್ಲೋಜಿರಾವ್
97418 11694

**ಹೆಣ್ಣು ನಾಯಿ ಮರಿ ಮಾರಾಟಕ್ಕಿದೆ**
Shihtzu (ಶಿಹ್‌ತ್ಸು)
ಹೆಣ್ಣು ನಾಯಿ ಮರಿ ಮಾರಾಟಕ್ಕಿದೆ.
ಡಿಸಿಎಂ ಟೌನ್ ಶಿಪ್, ದಾವಣಗೆರೆ.
96631 66427

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಬಳದೊಂದಿಗೆ, ಊಟ-ವಸತಿ ಸೌಲಭ್ಯವುಂಟು. ಸಂಪರ್ಕಿಸಿ :
98442-94446

**ಜಮೀನು ಮಾರಾಟಕ್ಕಿದೆ**
ಅರಸಾಪುರ 2 ಎಕರೆ ಇದೆ. ಬಾತಿ ಮಂದಾರ ಶಾಲೆ ಹತ್ತಿರ 1 ಎಕರೆ 3 ಗುಂಟೆ, ಹೊಸ ಬಾತಿ, ಹಳೇ ಬಾತಿಯ ಹತ್ತಿರ 4 ಎಕರೆ 20 ಗುಂಟೆ ಇದೆ. ಅಡಿಕೆ ತೋಟಗಳು ಇವೆ.
ಏಜೆಂಟರು ಎಸ್. ಯಲ್ಲೋಜಿರಾವ್
97418 11694

**ಸಾಕಲು ಬೆಕ್ಕಿನ ಮರಿ ಬೇಕಾದರೆ ಕರೆ ಮಾಡಿ**
96864 62502, 63635 52021

**WANTED**
S.V. Marketing Davangere
Marketing Executive
Above than 3 years experience. No age bar.
94480 46571, 78993 37571

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
97433 83672

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ 30x50 ಹಳೆಯ ರಶ್ಮಿ ಹಾಸ್ಟೆಲ್ ಹತ್ತಿರ, 30x60 ಪೂರ್ವ ಮತ್ತು ಪಶ್ಚಿಮ 44x60 ಪೂರ್ವ ಮತ್ತು ಎಂಸಿಸಿ ಎ ಬ್ಲಾಕ್ 40x63 ಪೂರ್ವ ಬಸವೇಶ್ವರ. 50x100 ಗೋಡೌನ್ ಬಾಡಿಗೆಗೆ. ಕರೂರು ಇಂಡಸ್ಟ್ರೀಯಲ್ ಏರಿಯಾ.
ಏಜೆಂಟರು ಎಸ್. ಯಲ್ಲೋಜಿರಾವ್
97418 11694

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, TV, Washing Machine Technician ಬೇಕಾಗಿದ್ದಾರೆ.
ಸಂಬಳ +ಇನ್ಸೆಂಟಿವ್ಸ್ ನೀಡುತ್ತೇವೆ.
ಸಿಸ್ಟಂ ವರ್ಕ್‌ಗೆ ಲೇಡಿ ಬೇಕಾಗಿದ್ದಾರೆ.
98805 31599

**ಹೆಸರು ಸ್ಪಷ್ಟೀಕರಣ**
ನಾನು ಶ್ರೀಮತಿ ಸುಧಾ ಕೋಂ ಹನುಮಂತಪ್ಪ, 31 ವರ್ಷ, ನಂ. 995, ಎಸ್.ಜೆ.ಎಂ. ನಗರ, ದಾವಣಗೆರೆ ವಾಸಿಯಾದಾ ನಾನು ನನ್ನ ಬ್ಯಾಂಕ್ ಹೆಚ್‌ಡಿಎಫ್‌ಸಿ ಮಂಡಿಪೇಟೆ ದಾವಣಗೆರೆ ಪಾಸ್ ಪುಸ್ತಕದಲ್ಲಿ ನನ್ನ ಹೆಸರು ಲಲಿತಮ್ಮ ಎಂದು ನಮೂದಾಗಿದೆ. ಆದರೆ ಆಧಾರ್ ಕಾರ್ಡ್ ಮತ್ತು ಇತರೆ ದಾಖಲೆಗಳಲ್ಲಿ ನನ್ನ ಹೆಸರು ಸುಧಾ ಎಂದು ಸರಿಯಾಗಿರುತ್ತದೆ.
ಈ ಮೇಲ್ಕಂಡ ಎರಡೂ ಹೆಸರುಗಳೂ ನನ್ನದೇ ಆಗಿದ್ದು, ಇನ್ನು ಮುಂದೆ ನನ್ನ ಎಲ್ಲಾ ದಾಖಲೆಗಳಲ್ಲೂ, ವ್ಯವಹಾರಗಳಲ್ಲೂ ಸುಧಾ ಎಂಬ ಹೆಸರನ್ನು ಬಳಸುತ್ತೇನೆ ಎಂದು ದಿ.: 02.11.2023ರಂದು ನೋಟರಿ ದಾವಣಗೆರೆಯವರ ಮುಂದೆ ಪ್ರಮಾಣ ಮಾಡಿದ್ದೇನೆ.

**ಉಷಾ ಟ್ರೇಡಿಂಗ್ ಕಂಪನಿ**

ಅಧಿಕೃತ ಮಾರಾಟಗಾರರು
ಡರ್ಬಿ ಹೊಲಿಗೆ ಯಂತ್ರಗಳು ಮತ್ತು ಬಿಡಿ ಭಾಗಗಳು. ಮಂಡಿಪೇಟೆ, ಗೂಡ್ ಶೆಡ್ ರಸ್ತೆ, ದಾವಣಗೆರೆ-1. ಎಲ್ಲಾ ಕಂಪನಿಗಳ ಹೊಲಿಗೆ ಯಂತ್ರಗಳ ಮಾರಾಟ ಹಾಗೂ ರಿಪೇರಿ ಮಾಡಲಾಗುವುದು.
94484 49617, 94805 00808

**ಡ್ರೈವರ್ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿರುವ ಪ್ರತಿಷ್ಠಿತ ವಿದ್ಯಾಸಂಸ್ಥೆಗೆ ಹೆವಿ ಲೈಸನ್ಸ್ ಹೊಂದಿರುವ ಅನುಭವಿ ಬಸ್ ಡ್ರೈವರ್ ಬೇಕಾಗಿದ್ದಾರೆ.
99640 17474

**ಗುಮಾಸ್ತರು ಬೇಕಾಗಿದ್ದಾರೆ**
ಬೆಳ್ಳಿ ಬಂಗಾರದ ಅಂಗಡಿಗೆ ಗುಮಾಸ್ತರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
98444 44772

**ಮನೆ ಬಾಡಿಗೆಗೆ ಇದೆ**
2BHK ಗ್ರೌಂಡ್ ಫ್ಲೋರ್, ಆರ್.ಎಂ.ಸಿ. ಲಿಂಕ್ ರಸ್ತೆ, ದೇವರಾಜ್ ಬೋರ್‌ವೆಲ್ ಹತ್ತಿರ.
95005 72015, 98440 63830

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದುವಾಡ ಸೈ. ನಂ. 44 (30x50) ಪಶ್ಚಿಮ, ನೈಋತ್ಯ ಮೂಲೆ
3) ಕುಂದುವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಊಟ ವಸತಿಯ ಸೌಲಭ್ಯವಿದೆ.
ಸಂಬಳ- 8000-12000
ಮೊ : 97311 55583

**ಬೇಕಾಗಿದ್ದಾರೆ**
ಸರ್ವೀಸ್ ಅಡ್ವೈಸರ್ ಅನುಭವವುಳ್ಳವರು ಮತ್ತು ಟೆಕ್ನೀಷಿಯನ್ ಬೇಕಾಗಿದ್ದಾರೆ.
Salary + Incentive
ESI, PF ಒಳಗೊಂಡಿರುತ್ತದೆ.
ಶ್ರೀನಿವಾಸ ಹೊಂಡಾ
99166 31266

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**CCTV ಫಿಟ್ಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಶಿಕ್ಷಣ ಅರ್ಹತೆ ಇರುವುದಿಲ್ಲ, ಅನುಭವ ಮುಖ್ಯ, ಉತ್ತಮವಾದ ಸಂಬಳ ಕೊಡಲಾಗುವುದು.
98447 57474

**T.C. ಕಳೆದಿದೆ**
ಅಂಕಿತಾ ಆರ್. D/o ರವಿ ಆರ್., 5ನೇ ತಿರುವು, 2ನೇ ಹಂತ, ಜಯನಗರ, ದಾವಣಗೆರೆಯ ನಿವಾಸಿಯಾದ ನಾನು ಶ್ರೀ ಸಿದ್ದಗಂಗಾ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಉತ್ತೀರ್ಣಳಾಗಿರುತ್ತೇನೆ. ಇತ್ತೀಚೆಗೆ ವ್ಯಾಸಂಗ ವರ್ಗಾವಣೆ ಪತ್ರ (TC No. SSPU/72/2022-23) ಕಾಣೆಯಾಗಿರುತ್ತದೆ. ತಮಗೆ ಎಲ್ಲಾದರೂ ಕಂಡು ಬಂದಲ್ಲಿ ಕೆಳಗಿನ ಮೊಬೈಲ್ ಸಂಖ್ಯೆಗೆ ತಿಳಿಸಲು ಕೋರಿದೆ.
81050 12537

**ಬಾಡಿಗೆಗೆ ಇದೆ**
ವೆಲ್ಡಿಂಗ್ ವರ್ಕ್, ಸ್ಟಾಕ್ ಗೋಡೌನ್‌ಗೆ, ಫ್ಯಾಕ್ಟರಿ ಮಾಡಲು 10ಹೆಚ್‌ಪಿ ಕರೆಂಟ್ ಸೌಲಭ್ಯವಿರುವ ಗೋಡೌನ್ ಪಿ.ಬಿ. ರಸ್ತೆ, ಹೋಟೆಲ್ ಪೂಜಾ ಹತ್ತಿರ, ಬಾಡಿಗೆಗೆ ಇದೆ. ಹಾಗೂ ಟೈರ್ ರಿಮೋಲ್ಡ್ ಮಿಷನ್ ಮಾರಾಟಕ್ಕಿದೆ.
98451 20295
90353 63078

**ಹೊಸ ಮನೆ ಬಾಡಿಗೆಗೆ ಲೀಸ್‌ಗೆ ಇದೆ**
2 BHK ಎಸ್.ಎಸ್. ಹೈಟೆಕ್ ಬಡಾವಣೆ, ಜೆ.ಹೆಚ್ ಪಟೇಲ್ ಬಡಾವಣೆ, ವಾಜಪೇಯಿ ಬಡಾವಣೆ.
ಏಜೆಂಟ್ 73532 55225

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ ಅಥವಾ ಯಾವುದೇ ಪದವಿ ಆಗಿರಬೇಕು.
ಕಾವೇರಿ ಮೆಡಿಹೌಸ್ ಪ್ರೈ.ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 2.

**LADIES PG BUILDING FOR RENT**
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
Mob : 95351 14063, 96203 71544, 97428 35642

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬಾಡಿಗೆಗೆ ಇದೆ**
ವೆಲ್ಡಿಂಗ್ ವರ್ಕ್ಸ್ ಅಥವಾ ಲೇತ್ ವರ್ಕ್ಸ್ ಇಲ್ಲವೇ ಸ್ಟಾಕ್ ಗೋಡೌನ್‌ಗೆ ಇಲ್ಲವೇ ಫ್ಯಾಕ್ಟರಿ ಮಾಡಲು 10 HP ಕರೆಂಟ್ ಸೌಲಭ್ಯವಿರುವ ಗೋಡೌನ್ ಬಾಡಿಗೆಗೆ ಇದೆ. ರಿಮೋಲ್ಡ್ ಫ್ಯಾಕ್ಟರಿ ಮಾರಾಟಕ್ಕಿದೆ.
98451 20295, 90353 63078
ಪಿ.ಬಿ.ರಸ್ತೆ, ಹೋಟೆಲ್ ಪೂಜಾ ಹತ್ತಿರ.

**JOB OPPORTUNITY**
Female Office Assistant
Good in Office work, Computer Skills, good in customer dealing.freshers can aslo apply B.Com., M.Com., & MBA
for Contact
97312 18567
Send C.V - hardsoftdvg@gmail.com

**ಮನೆ ಮಾರಾಟಕ್ಕಿದೆ**
ಹರಿಹರ ಪಟ್ಟಣದ ಹೈಸ್ಕೂಲ್ ಬಡಾವಣೆಯ 4ನೇ ಮೇನ್, 1ನೇ ಕ್ರಾಸ್‌ನಲ್ಲಿ ಶ್ರೀ ಗಿರಿಯಮ್ಮ ಕಾಲೇಜು ಎದುರು, 50X40 ಅಳತೆಯಲ್ಲಿರುವ ಎರಡು ಆರ್‌ಸಿಸಿ ಮನೆಗಳು, ಮನೆ ನಂ. 64 ಮತ್ತು 65 ಮಾರಾಟಕ್ಕಿರುತ್ತವೆ.
ಆಸಕ್ತಿಯುಳ್ಳವರು ಶ್ರೀ ಜಿ.ಹೆಚ್. ಮಂಜುನಾಥ,
88849 62111

**FOR RENT**
1st Floor Hall Size = 28x43, Commercial Office Space. MCC `B' Block, Boys Hostel Road, 7th Cross, 9th Main. Contact :
82177 72482



## ಸಿರಿಗೆರೆಗೆ ಇಂದು ನಾಡೋಜ ಮಹೇಶ್ ಜೋಶಿ

ಚಿತ್ರದುರ್ಗ ತಾಲ್ಲೂಕು ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಆಶ್ರಯದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ನಡೆಯಲಿರುವ ಕನ್ನಡ ನುಡಿ ಹಬ್ಬದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಅವರು ಇಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಮೂರು ದಿನಗಳ ಕರ್ನಾಟಕ ರಾಜ್ಯೋತ್ಸವದ ನುಡಿ ಹಬ್ಬದಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯವನ್ನು ವಹಿಸಲಿದ್ದು, ನಾಡಿನ ಹೆಸರಾಂತ ವಿದ್ವಾಂಸರು, ಕವಿಗಳು ಮತ್ತು ಸಾಂಸ್ಕೃತಿಕ ತಂಡಗಳು ಭಾಗವಹಿಸಲಿವೆ.

ಈ ನುಡಿ ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಲು ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳು, ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಕನ್ನಡ ಬೋಧನೆ ಮಾಡುತ್ತಿರುವ ಅಧ್ಯಾಪಕರುಗಳಿಗೆ ಅನ್ಯ ಕಾರ್ಯ ನಿಮಿತ್ಯ ಸೌಲಭ್ಯ ಕಲ್ಪಿಸಿ, ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ಶಾಲೆಗಳ ಮುಖ್ಯಸ್ಥರುಗಳಿಗೆ ಆದೇಶ ಹೊರಡಿಸಿದ್ದಾರೆ. ಈ ನುಡಿ ಹಬ್ಬದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರುಗಳು ಮತ್ತು ಪದಾಧಿಕಾರಿಗಳು ಹಾಗೂ ನಾಡಿನ ಮೂಲೆ ಮೂಲೆಗಳಿಂದ ಕನ್ನಡ ಸಾಹಿತ್ಯಾಸಕ್ತರು ಭಾಗವಹಿಸಲಿದ್ದಾರೆ ಎಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿರುತ್ತಾರೆ.

## 'ವರ್ಲ್ಡ್ ಕಪ್ ನಮ್ಮದು' ವಿಡಿಯೋ ವೀಕ್ಷಿಸಿ ಶುಭ ಹಾರೈಸಿದ ಸಿದ್ಧಗಂಗಾ ಶ್ರೀಗಳು



ದಾವಣಗೆರೆ, ನ.2- ಈ ಬಾರಿಯ ಐಸಿಸಿ ವರ್ಲ್ಡ್ ಕಪ್ ಗೆಲ್ಲುವ ಎಲ್ಲ ಅವಕಾಶವಿರುವ ಭರವಸೆಯಿಂದ ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ ಶಾಲಾ-ಕಾಲೇಜಿನ ಮಕ್ಕಳು ತಾವೇ ಸ್ವತಃ ನಿರ್ಮಿಸಿರುವ 'ವರ್ಲ್ಡ್ ಕಪ್ ನಮ್ಮದು' ಹಾಡಿನ ವೀಡಿಯೋವನ್ನು ತುಮಕೂರಿನ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿ ವೀಕ್ಷಿಸಿ ಮಕ್ಕಳ ಕ್ರಿಯಾಶೀಲತೆಯನ್ನು ಶ್ಲಾಘಿಸಿದರು.

ಹಾಡು ದೇಶಭಕ್ತಿಯನ್ನು ಬಿಂಬಿಸುವಂತಿದೆ, ಕ್ರಿಕೆಟ್ ವರ್ಲ್ಡ್ ಕಪ್ ಭಾರತ ಗೆಲ್ಲುವಂತಾಗಲಿ ಎಂದು ಶುಭ ಹಾರೈಸಿದರು. ವಿಡಿಯೋ ಬಗ್ಗೆ ವಿವರಣೆಯನ್ನು ಸಿದ್ಧಗಂಗಾ ಸಂಸ್ಥೆಯ ನಿರ್ದೇಶಕ ಡಾ|| ಜಯಂತ್‌ರವರಿಂದ ಪಡೆದು ತಮ್ಮ ಸಂದೇಶದ ಮೂಲಕ ಯಶಸ್ಸು ಕೋರಿ ಸಿದ್ಧಗಂಗಾ ಸಂಸ್ಥೆಯ ಸಂಸ್ಥಾಪಕ ಎಂ.ಎಸ್. ಶಿವಣ್ಣನವರನ್ನು ಸ್ಮರಿಸಿಕೊಂಡರು. ವಿಡಿಯೋವನ್ನು siddaganga school ಚಾನೆಲ್ ಮೂಲಕ ಯೂಟ್ಯೂಬ್‌ನಲ್ಲಿ ವೀಕ್ಷಿಸಬಹುದಾಗಿದೆ.

## ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಕನ್ನಡ ರಾಜ್ಯೋತ್ಸವ

ದಾವಣಗೆರೆ ಇಲೆವೆನ್ಸ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ.

ನಾಳೆ ಬೆಳಿಗ್ಗೆ 9-30ಗಂಟೆಗೆ ಧ್ವಜಾರೋಹಣ ನೆರವೇರಿಸಲಾಗುವುದು. ಜಿಲ್ಲಾ ಕ್ರೀಡಾಪಟುಗಳ ಸಂಘದ ದಿನೇಶ್ ಕೆ.ಶೆಟ್ಟಿ, ಶಿವಗಂಗಾ ಶ್ರೀನಿವಾಸ್, ರಾಜುರೆಡ್ಡಿ, ಹೆಚ್.ಮಹಾದೇವ್, ಕುರುಡಿ ಗಿರೀಶ್, ಜಯಪ್ರಕಾಶ್ ಗೌಡ ಭಾಗವಹಿಸುವರು. ಸಂಜೆ 6-30 ಗಂಟೆಗೆ ಭದ್ರಾವತಿ ಬ್ರದರ್ಸ್ ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

## ಅಸಂಘಟಿತ ಕಾರ್ಮಿಕರ ಅಪಘಾತ ಪರಿಹಾರಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ನ. 2- ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಯಡಿ ಅಸಂಘಟಿತ ಕಾರ್ಮಿಕರು ಇ-ಶ್ರಮ ಪೋರ್ಟಲ್ ಮೂಲಕ ನೋಂದಾಯಿತರಾಗಿ ಅಪಘಾತಗೊಂಡ ಫಲಾನುಭವಿಗಳಿಗೆ 2 ಲಕ್ಷ ಅಪಘಾತ ಪರಿಹಾರಕ್ಕಾಗಿ ಅರ್ಜಿ ಅಹ್ವಾನಿಸಲಾಗಿದೆ. ಫಲಾನುಭವಿಗಳು 26 ಆಗಸ್ಟ್ 2021 ರಿಂದ 31 ಮಾರ್ಚ್ 2022ರ ಒಳಗಾಗಿ ನೋಂದಾಯಿಸಿ ಅಪಘಾತಗೊಂಡವರಿಗೆ ಪರಿಹಾರ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ವಿವರಕ್ಕೆ 08192-237332ಗೆ ಸಂಪರ್ಕಿಸ ಬಹುದೆಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಜಿ. ಇಬ್ರಾಹಿಂ ಸಾಬ್ ತಿಳಿಸಿದ್ದಾರೆ.

## ಐ.ಎನ್.ಡಿ.ಐ.ಎ. ಮೈತ್ರಿಗೆ ಕಾಂಗ್ರೆಸ್‌ನಿಂದ ಹಿನ್ನಡೆ ಎಂದ ನಿತೀಶ್

ನವದೆಹಲಿ, ನ. 2 – ಐ.ಎನ್.ಡಿ.ಐ.ಎ. ಮೈತ್ರಿಕೂಟ ಬಿರುಸು ಕಂಡುಕೊಳ್ಳಲು ಸಾಧ್ಯವಾಗದೇ ಇರುವುದಕ್ಕೆ ಕಾಂಗ್ರೆಸ್ ಕಾರಣ ಎಂದು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಆರೋಪಿಸಿದ್ದಾರೆ.

ಪಾಟ್ನಾದಲ್ಲಿ ಸಿ.ಪಿ.ಐ. ಆಯೋಜಿಸಿದ್ದ ಸಮಾವೇಶದಲ್ಲಿ ಮಾತನಾಡಿದ ಜೆಡಿ (ಯು) ನಾಯಕ ನಿತೀಶ್ ಕುಮಾರ್, ಕಾಂಗ್ರೆಸ್ ಪಕ್ಷ ಐದು ರಾಜ್ಯಗಳ ಚುನಾವಣೆಯಲ್ಲಿ ತೊಡಗಿಕೊಂಡಿದೆ. ಹೀಗಾಗಿ ಐ.ಎನ್.ಡಿ.ಐ.ಎ. ಮೈತ್ರಿಕೂಟ ಬೆಳೆಸಲು ಗಮನ ಹರಿಸುತ್ತಿಲ್ಲ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮೈತ್ರಿಕೂಟದಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಈ ಮೈತ್ರಿಕೂಟದಲ್ಲಿ ಕಾಂಗ್ರೆಸ್ ಮುಂಚೂಣಿ ಪಾತ್ರ ವಹಿಸಬೇಕು ಎಂದು ನಾವೆಲ್ಲರೂ ನಿರ್ಧರಿಸಿದ್ದೆವು. ಆದರೆ, ಚುನಾವಣೆಯ ನಂತರವೇ ಅವರು ಈ ಬಗ್ಗೆ ಗಮನ ಹರಿಸುವಂತೆ ಕಾಣುತ್ತಿದೆ ಎಂದು ನಿತೀಶ್ ಹೇಳಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಬಿಹಾರ ಕಾಂಗ್ರೆಸ್ ಅಧ್ಯಕ್ಷ ಅಖಿಲೇಶ್ ಪ್ರಸಾದ್ ಸಿಂಗ್, ಐದು ರಾಜ್ಯಗಳ ಚುನಾವಣೆಯೂ ಮುಖ್ಯವಾಗಿದೆ ಎಂದಿದ್ದಾರೆ.

# ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ನಾಳೆ ಬರ ಅಧ್ಯಯನ

ಹೊನ್ನಾಳಿ, ನ.2- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ನಾಡಿದ್ದು ದಿನಾಂಕ 4ರಿಂದ ಮೂರು ದಿನಗಳ ಕಾಲ ಬರ ಅಧ್ಯಯನ ಪ್ರವಾಸ ಕೈಗೊಳ್ಳಲಾಗಿದೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ತಿಳಿಸಿದ್ದಾರೆ.



ನಗರದ ಪ್ರವಾಸಿ ಮಂದಿರದಲ್ಲಿ ಗುರುವಾರ ತಾಲ್ಲೂಕು ಮಂಡಲದ ಅಧ್ಯಕ್ಷರ ನೇತೃತ್ವದಲ್ಲಿ ಪದಾಧಿಕಾರಿಗಳು, ವಿವಿಧ ಮೋರ್ಚಾಗಳ ಅಧ್ಯಕ್ಷರು, ಮುಖಂಡರುಗಳು, ಕಾರ್ಯಕರ್ತರು, ಜಿಲ್ಲಾ ಮಟ್ಟದ ಪದಾಧಿಕಾರಿಗಳ ತುರ್ತು ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಳೆದ ಮೂರು ತಿಂಗಳ ಹಿಂದೆಯೇ ಹೊನ್ನಾಳಿ -ನ್ಯಾಮತಿ ಅವಳಿ ತಾಲ್ಲೂಕಿನ ಐದಾರು ಹಳ್ಳಿಗಳಲ್ಲಿ ಬರ ಪ್ರವಾಸ ಮಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣಭೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಕೃಷಿ ಸಚಿವ ಚಲುವರಾಯಸ್ವಾಮಿ ಅವರನ್ನು ಭೇಟಿ ಮಾಡಿ ಬರಗಾಲ ಪಟ್ಟಿಗೆ ಸೇರಿಸುವಂತೆ ಮನವಿ ಮಾಡಿದ್ದೇ, ಪರಿಣಾಮ ಅವಳಿ ತಾಲ್ಲೂಕುಗಳನ್ನು ಬರಗಾಲ ಪಟ್ಟಿಗೆ ಸೇರಿಸಲಾಗಿದೆ, ಆದರೇ ಇದುವರೆಗೂ ಕೂಡ ಹಣ ಬಿಡುಗಡೆಯಾಗಿಲ್ಲ ಎಂದರು.

ನಾನು ಎಲ್ಲಿಯೂ ಬಿಜೆಪಿ ಬಿಡುತ್ತೇನೆ, ಕಾಂಗ್ರೆಸ್ ಸೇರುತ್ತೇನೆಂದು ಹೇಳಿಲ್ಲ, ಆದರೆ ನನ್ನ ವಿರುದ್ಧ ಅಪಪ್ರಚಾರ ಮಾಡುವ ಕೆಲಸ ಮಾಡಲಾಗುತ್ತಿದೆ ಎಂದ ರೇಣುಕಾಚಾರ್ಯ, ಪಕ್ಷದಲ್ಲಿ ನನ್ನನ್ನು ಕಡೆಗಣಿಸಲಾಗುತ್ತಿದೆ. ಹಾಗಂತ ನಾನು ಪಕ್ಷದ ವಿರುದ್ಧ ಮಾತನಾಡಿಲ್ಲ, ಆದರೆ ನಾನು ವಾಸ್ತವವನ್ನು ಮಾತನಾಡಿದ್ದೇನೆ. ಅಲ್ಲದೇ ಪಕ್ಷದ ತಪ್ಪು ನಿರ್ಧಾರಗಳ ವಿರುದ್ಧ ಧ್ವನಿ ಎತ್ತಿದ್ದೇನೆ ಎಂದರು.

ಬೆಂಗಳೂರಿನಲ್ಲಿ ನಿಕಟಪೂರ್ವ ಸಿಎಂ ಬಸವರಾಜ ಬೊಮ್ಮಾಯಿ ಅವರ ಆರೋಗ್ಯ ವಿಚಾರಿಸಿದ ಸಂದರ್ಭದಲ್ಲಿ ಅವರ ತಪ್ಪು ನಿರ್ಧಾರಗಳ ಬಗ್ಗೆಯೂ ಹೇಳಿದ್ದೇನೆ ಎಂದ ರೇಣುಕಾಚಾರ್ಯ, ಯಡಿಯೂರಪ್ಪನವರು ರಾಜ್ಯಾಧ್ಯಕ್ಷರಾದ ಸಂದರ್ಭದಲ್ಲಿ ಇಡೀ ರಾಜ್ಯದ ಜನರು ಯುಗಾದಿ ಹಬ್ಬದ ರೀತಿ ಸಂಭ್ರಮಿಸಿದರು. ಅದಾದ ನಂತರ ವ್ಯವಸ್ಥಿತವಾಗಿ ಯಡಿ ಯೂರಪ್ಪನವರ ವಿರುದ್ಧ ಷಡ್ಯಂತ್ರ ಮಾಡಿ ರಾಯಣ್ಣ ಬ್ರಿಗೇಡ್ ಕಟ್ಟಿಸಿ ಕೊನೆಗೆ ಯಡಿ ಯೂರಪ್ಪನವರ ವಿರುದ್ಧ ಇಲ್ಲಸಲ್ಲದ ಹೇಳಿಕೆ ಗಳನ್ನು ನೀಡಿ, ಯಡಿಯೂರಪ್ಪನವರನ್ನು ಕೊನೆಗೂ ಇಳಿಸುವ ಕೆಲಸ ಮಾಡಿದರು ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಕಾಂಗ್ರೆಸ್ ವೈಫಲ್ಯಗಳು ಸಾಕಷ್ಟು ಇದ್ದು ಯಾರೂ ಕೂಡ ಹೋರಾಟ ಮಾಡುತ್ತಿಲ್ಲ ಎಂದ ರೇಣುಕಾಚಾರ್ಯ ಬೆಕ್ಕಿಗೆ ಘಂಟೆ ಕಟ್ಟುವವರು ಯಾರು? ಎಂಬ ಪ್ರಶ್ನೆ ಉದ್ಭವವಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ.ಸುರೇಶ್, ಮುಖಂಡರುಗಳಾದ ದೊಡ್ಡೇರಿ ರಾಜಣ್ಣ, ಅರಕೆರೆ ನಾಗರಾಜ್, ಎ.ಬಿ.ಹನುಮಂತಪ್ಪ, ಬೀರೇಶ್, ದಿಡಗೂರು ಪಾಲಾಕ್ಷಪ್ಪ, ಕುಬೇರಪ್ಪ, ಪುರಸಭೆ ಸದಸ್ಯ ಧರ್ಮಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೆ.ವಿ.ಚನ್ನಪ್ಪ, ಸುರೇಂದ್ರ ನಾಯ್ಕ ಸೇರಿದಂತೆ ಮತ್ತಿತರರಿದ್ದರು.

### ನನ್ನ ವಿರುದ್ಧ ಸಂಸದರಿಂದ ಅಪಪ್ರಚಾರ

ಸಂಸದರು 2014 ರ ಚುನಾವಣೆಯಲ್ಲಿ ನಾನು ಲೋಕಸಭೆ ಚುನಾವಣೆಗೆ ನಿಲ್ಲೋಲ್ಲ ಎಂದು ಹೇಳಿದ ಸಂದರ್ಭದಲ್ಲಿ ನಾವೆಲ್ಲಾ ಇದ್ದೇವೆ ಎಂದು ಹೇಳಿ ಗೆಲ್ಲಿಸಿದೆವು. 2019 ರಲ್ಲೂ ಅವರು ನಿಲ್ಲೋಲ್ಲ ಎಂದು ಹೇಳಿದಾಗಲೂ ನಾವು ಈ ರೀತಿ ಹೇಳಬೇಡಿ ಎಂದು ಹೇಳಿ ಅವರನ್ನು ಗೆಲ್ಲಿಸಿದ್ದೆವು. ಆದರೆ ಕೊನೆಗೆ ಅವರು ಸ್ಪರ್ಧೆ ಮಾಡೋಲ್ಲ ಎಂದು ಹೇಳಿದ ಸಂದರ್ಭದಲ್ಲಿ ನಾನು ಪಕ್ಷ ಏನು ತೀರ್ಮಾನ ಕೈಗೊಳ್ಳುತ್ತೋ ನೋಡೋಣ ಎಂದು ಹೇಳಿದ ಬಳಿಕ, ಸಂಸದರು ನನ್ನ ಮೇಲೆ ಅಪಪ್ರಚಾರ ಮಾಡುವ ಕೆಲಸ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೇ ನನ್ನ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದಾರೆ.

-ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವ



## ರಾಜ್ಯೋತ್ಸವ ಮೆರವಣಿಗೆಯಲ್ಲಿ ಸುವರ್ಣ ಕರ್ನಾಟಕ ವೇದಿಕೆಯ 'ವಿಕ್ರಮ್ ಲ್ಯಾಂಡರ್' ಸ್ತಬ್ಧ ಚಿತ್ರ

ದಾವಣಗೆರೆ, ನ.2- 68ನೇ ಕರ್ನಾಟಕ ರಾಜ್ಯೋತ್ಸವ ಮತ್ತು 50ವರ್ಷ ಕರ್ನಾಟಕ ಸಂಭ್ರಮ ಆಚರಣೆ ಪ್ರಯುಕ್ತ ಜಿಲ್ಲಾಡಳಿತಯಿಂದ ಹಮ್ಮಿಕೊಂಡಿದ್ದ ತಾಯಿ ಭುವನೇಶ್ವರಿಯ ಮೆರವಣಿಗೆಯಲ್ಲಿ ಸುವರ್ಣ ಕರ್ನಾಟಕ ವೇದಿಕೆ ವತಿಯಿಂದ ಸ್ತಬ್ಧ ಚಿತ್ರ ನೀಡಲಾಗಿತ್ತು. ಅದರಲ್ಲಿ ಬಲಭಾಗ ವಿಕ್ರಮ ಲ್ಯಾಂಡರ್ ಚಿತ್ರವನ್ನು ಪ್ರದರ್ಶಿಸಲಾಗಿತ್ತು. ಎಡಭಾಗದಲ್ಲಿ ಮಹಾನೀಯರ ಭಾವ ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಮೇಲ್ಭಾಗದಲ್ಲಿ ತಾಯಿ ಭುವನೇಶ್ವರಿಯ ವೇಶದಲ್ಲಿ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್ ಅವರ 5 ವರ್ಷದ ಪುತ್ರಿ ಎಸ್. ಜೀವಿತ ಕಂಗೊಳಿಸಿದರು.

## ರೈಲ್ವೇ ಖಾಸಗೀಕರಣ ವಿರೋಧಿಸಿ ಇಂದು ನಗರದಲ್ಲಿ ಸಿಐಟಿಯು ಪ್ರತಿಭಟನೆ

ರೈಲ್ವೇ ಖಾಸಗೀಕರಣ ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ವತಿಯಿಂದ ಇಂದು ಮಧ್ಯಾಹ್ನ 12 ಗಂಟೆಗೆ ರೈಲ್ವೇ ನಿಲ್ದಾಣದ ಬಳಿ ಪ್ರತಿಭಟನೆ ನಡೆಸಲಾಗುವುದು ಎಂದು ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜ್ ತಿಳಿಸಿದ್ದಾರೆ.

## ಕಾಡಜ್ಜಿಯಲ್ಲಿ ಇಂದು ಸೆಕೆಂಡರಿ ಕೃಷಿ ಅರಿವು ಕಾರ್ಯಕ್ರಮ

ಕಾಡಜ್ಜಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10-30ಕ್ಕೆ 'ಸೆಕೆಂಡರಿ ಕೃಷಿ ಯೋಜನೆ ಅಡಿಯಲ್ಲಿ ಉದ್ದಿಮೆದಾರ'ರಾಗಿ ಕುರಿತಂತೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ಕನ್ನಡ ಬಳಕೆಗೆ ಒತ್ತಾಯಿಸಿ ಮಹಾನಗರ ಪಾಲಿಕೆಗೆ ಕರವೇ ಕಾರ್ಯಕರ್ತರ ಮುತ್ತಿಗೆ



ದಾವಣಗೆರೆ, ನ. 2- ಕನ್ನಡ ಭಾಷೆಯನ್ನು ಸಮರ್ಪಕವಾಗಿ ಬಳಕೆ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ಕಾರ್ಯಕರ್ತರು ಮಹಾನಗರ ಪಾಲಿಕೆಗೆ ಇಂದು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಇದೇ ಸಂದರ್ಭದಲ್ಲಿ ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ಅನೇಕ ಬಾರಿ ಪ್ರತಿಭಟನೆ ಮಾಡಿ ಮಹಾನಗರ ಪಾಲಿಕೆಗೆ ಬಣ್ಣ ಹಚ್ಚುವ ಮೂಲಕ ಹೋರಾಟ ಕೂಡ ನಡೆಸಲಾಗಿದೆ. ಆದರೂ ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗದಿರುವುದು ದುರಂತವೇ ಸರಿ ಎಂದರು.

ಕರ್ನಾಟಕದಲ್ಲಿ ಜನಿಸಿ, ಕನ್ನಡ ಭಾಷೆ ಮಾತನಾಡಲು ಹಿಂಜರಿಯುವ ಜನರ ವಿರುದ್ಧ ಕರವೇ ಅನೇಕ ಹೋರಾಟಗಳನ್ನು ಮಾಡುತ್ತಾ ಬಂದಿದೆ. ಆಂಗ್ಲ ಭಾಷೆ ನಾಮಫಲಕಗಳಿಗೆ ಮಸಿ ಬಳಿಯುವ ಮೂಲಕ ಎಚ್ಚರಿಕೆ ನೀಡಲಾಗಿದೆ. ಆದರೂ ಪಾಲಿಕೆ ಕೆಲವು ಅಧಿಕಾರಿಗಳು ಕುಮ್ಮಕ್ಕು ನೀಡುತ್ತಿರುವುದಕ್ಕೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಜಾಹೀರಾತು ಫಲಕಗಳು ಶೇ. 90 ರಷ್ಟು ಕನ್ನಡದಲ್ಲಿಯೇ ಇರಬೇಕು. ಇಲ್ಲದಿದ್ದರೆ ದಂಡ ಹಾಕಲಾಗುವುದು ಎಂಬ ಸರ್ಕಾರದ ಆದೇಶವಿದ್ದರೂ ಸಹ ಕೆಲವು ಅಂಗಡಿ ಮಾಲೀಕರು ಅಧಿಕಾರಿಗಳೊಂದಿಗೆ ಶಾಮೀಲಾಗಿ ಆದೇಶವನ್ನು ಗಾಳಿಗೆ ತೂರಿದ್ದಾರೆ ಎಂದರು.

ಕೂಡಲೇ ಪಾಲಿಕೆ ಆಯುಕ್ತರು ಮತ್ತು ಮಹಾಪೌರರು ತುರ್ತುಸಭೆ ನಡೆಸಿ, ಫ್ಲೆಕ್ಸ್, ಪ್ರಿಂಟರ್ಸ್ ಮತ್ತು ಡಿಸೈನರ್ಸ್ , ಅಳವಡಿಕೆ ಮಾಡುವವರಿಗೆ ನೋಟಿಸ್ ನೀಡಬೇಕು. ಇದಕ್ಕೂ ಮೀರಿದರೆ ದಂಡ ವಿಧಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಬಿವುಲ್ಲಾ, ಲೋಕೇಶ್, ಜಿ.ಎಸ್. ಸಂತೋಷ್, ತಮನ್ನಾ ರಫೀಕ್. ದಾದೀಶ್, ದಾದಾಪೀರ್, ಪ್ರಕಾಶ್. ರವಿ, ಅಕ್ಷಯ್, ಹರೀಶ್, ದಾದಾಪೀರ್, ಧೀರೇಂದ್ರ, ಸಾಕಮ್ಮ, ಈಶ್ವರ್, ಅಯೂಬ್, ನಾಗರಾಜ್ ಮತ್ತಿತರರು ಪಾಲ್ಗೊಂಡಿದ್ದರು.



## ಭಾನುವಳ್ಳಿಯಲ್ಲಿ ಸಂಭ್ರಮದ ಕನ್ನಡ ರಾಜ್ಯೋತ್ಸವ

ಮಲೇಬೆನ್ನೂರು, ನ.2- ಭಾನುವಳ್ಳಿ ಗ್ರಾಮದ ವಿನಾಯಕ ಶಾಲೆಯಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರಭಾವತಿ ಮಂಜುನಾಥ್ ಮತ್ತು ಪ್ರಾಚಾರ್ಯ ಚಂದ್ರಶೇಖರ್ ಲಮಾಣಿ ಅವರು ವಿದ್ಯಾರ್ಥಿಗಳಿಗೆ ಕನ್ನಡ ನಾಡಿನ ಹಿರಿಮೆ ಬಗ್ಗೆ ತಿಳಿಸಿದರು.

ಬೂದಿಹಾಳ್ ಬಸವನಗೌಡ ಪ್ರೌಢಶಾಲೆಯ ಶಿಕ್ಷಕ ಹಾಗೂ ರಾಜ್ಯ ಪ್ರೌಢ ಶಾಲಾ ಶಿಕ್ಷಕರ ಸಂಘದ ರಾಜ್ಯ ಪರಿಷತ್ ಸದಸ್ಯ ಜೆ.ಆರ್.ಮಂಜುನಾಥ್ ಅವರು, ಕನ್ನಡ ನಾಡಿನ ನೆಲ, ಜಲ, ನುಡಿಯ ಬಗ್ಗೆ ತಿಳಿಸಿಕೊಟ್ಟರು. ವಿದ್ಯಾಸಂಸ್ಥೆ ಅಧ್ಯಕ್ಷ ರಾಮಪ್ಪ ಜೋಗಪ್ಪನವರ್ ಅಧ್ಯಕ್ಷತೆ ವಹಿಸಿದ್ದರು.

ಶಿಕ್ಷಕರಾದ ಶಿವಾನಂದ್, ಅಂಜುಂ, ಶಫಿ, ಕಾವ್ಯ, ಸಿದ್ದಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

## ವಿವಿಧ ಯೋಜನೆ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

ದಾವಣಗೆರೆ, ನ. 2 ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳ ವತಿಯಿಂದ ವಿವಿಧ ಯೋಜನೆಗಳಿಗೆ ಅರ್ಹ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸ್ವಯಂ ಉದ್ಯೋಗ ಯೋಜನೆ, ಐ.ಎಸ್.ಬಿ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಎಂ.ಸಿ.ಎಫ್ ಪ್ರೇರಣಾ ಯೋಜನೆ, ಗಂಗಾ ಕಲ್ಯಾಣ ಯೋಜನೆ ಮತ್ತು ಭೂ ಒಡೆತನ ಯೋಜನೆಗಳಡಿ ಸೌಲಭ್ಯ ಒದಗಿಸಲಾಗುತ್ತದೆ. ನಿಗಮಗಳ ವ್ಯಾಪ್ತಿಗೆ ಒಳಪಡುವ ಜನಾಂಗದ ಫಲಾನುಭವಿಗಳು ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ಸೇವಾ ಕೇಂದ್ರಗಳಲ್ಲಿ ವೆಬ್‌ಸೈಟ್ https://sevasindhu.karnaqaka.gov.in ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಇದೇ ದಿನಾಂಕ29 ಕೊನೆಯ ದಿನ.

ಹೆಚ್ಚಿನ ಮಾಹಿತಿಗಾಗಿ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಸಂಪರ್ಕಿಸಲು ನಿಗಮದ ಡಿ.ಎಂ. ಪಿ. ರಮೇಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ತೋಟಗಾರಿಕೆ ಬೆಳೆಗಳ ಸಮಗ್ರ ನಿರ್ವಹಣೆ ತರಬೇತಿ

ಪ್ರಸ್ತುತ ಮಳೆ ಕೊರತೆಯಿಂದ ಜಿಲ್ಲೆಯ ತೋಟಗಾರಿಕೆ ಬೆಳೆಗಳಲ್ಲಿ ಪ್ರಮುಖವಾಗಿ ಇಳುವರಿಯ ಕೊರತೆ, ರೋಗ ಮತ್ತು ಕೀಟಗಳ ಹಾವಳಿ ಹೆಚ್ಚಾಗುತ್ತಿದ್ದು, ರೈತರು ಆತಂಕಕ್ಕೆ ಒಳಗಾಗಿದ್ದಾರೆ. ಆದ್ದರಿಂದ ತೋಟಗಾರಿಕೆ ಬೆಳೆಗಳ ಸಮಗ್ರ ನಿರ್ವಹಣೆ ಬಗ್ಗೆ ತರಬೇತಿ ಹಾಗೂ ರೈತ ವಿಜ್ಞಾನಿಗಳ ಸಂವಾದ ಕಾರ್ಯಕ್ರಮವನ್ನು ಇಂದು ಬೆಳಗ್ಗೆ 10 ಗಂಟೆಗೆ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ದೇವರಾಜ ಟಿ.ಎನ್. ತಿಳಿಸಿದ್ದಾರೆ.

## ಸಾಲ ಸೌಲಭ್ಯ : ಅವಧಿ ವಿಸ್ತರಣೆ

ದಾವಣಗೆರೆ, ನ. 2- ಡಿ ದೇವರಾಜ ಅರಸು ಹಿಂದುಳಿದ ಅಭಿವೃದ್ಧಿ ನಿಗಮ, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮಗಳಿಂದ ಸಾಲ ಸೌಲಭ್ಯ ಯೋಜನೆಗಳ ಅರ್ಜಿ ಅವಧಿಯನ್ನು ಇದೇ ದಿನಾಂಕ 10 ವರೆಗೆ ವಿಸ್ತರಿಸಲಾಗಿದೆ.

## ನಗರದಲ್ಲಿ ನಾಡಿದ್ದು 'ಪುನೀತ್ ರಾಜ್ ಕಪ್' ಚದುರಂಗ ಸ್ಪರ್ಧೆ

ದಾವಣಗೆರೆ,ನ.2- ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜಕುಮಾರ್ ಸವಿನೆನಪಿಗಾಗಿ ಇದೇ ದಿನಾಂಕ 5 ರಂದು ರಾಜ್ಯ ಮಟ್ಟದ ಓಪನ್ ರ್‍ಯಾಪಿಡ್ ಚದುರಂಗ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಚೆಸ್ ಕ್ಲಬ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ಪಂದ್ಯಾವಳಿಯಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ ಸುಮಾರು 300 ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸುವರು. ವಿಜೇತರಿಗೆ ಒಟ್ಟು ರೂ.50,000/- ಬಹುಮಾನದ ಮೊತ್ತ ಇದ್ದು ಜೊತೆಗೆ 150 ಟ್ರೋಫಿಗಳನ್ನು ವಿತರಿಸಲಾಗುವುದು.

ಭಾಗವಹಿಸುವ ಕ್ರೀಡಾಪಟುಗಳು ಇದೇ ದಿನಾಂಕ 4 ರೊಳಗೆ ಚೆಸ್ ಕ್ಲಬ್‌ನ ಕಾರ್ಯದರ್ಶಿ ಯುವರಾಜ್ (9945613469) ಮತ್ತು ಮಂಜುಳಾ (7259310197) ಇವರಲ್ಲಿ ಹೆಸರು ನೋಂದಾಯಿಸಿ ಕೊಳ್ಳಬಹುದು.

## ನಗರದಲ್ಲಿ ಇಂದಿನ ಜಿಲ್ಲಾ ಕಂದಾಯ ಇಲಾಖೆಯ ಸಭೆಯಲ್ಲಿ ಕಂದಾಯ ಸಚಿವರು

ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಇಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಮಧ್ಯಾಹ್ನ ಮಧ್ಯಾಹ್ನ 12.30ಕ್ಕೆ ಪಕ್ಷದ ಕಚೇರಿಗೆ ಭೇಟಿ ನೀಡುವರು. ನಂತರ ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ದಾವಣಗೆರೆ ಜಿಲ್ಲೆಯ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ಸಂಜೆ 6 ಕ್ಕೆ ಬೆಂಗಳೂರಿಗೆ ತೆರಳುವರು.

# ಜಗತ್ತಿನೆಲ್ಲೆಡೆ ತನ್ನ ಕೀರ್ತಿ ಹರಡಿರುವ ಕನ್ನಡ ನಾಡು, ನುಡಿ, ಸಂಸ್ಕೃತಿ

### ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಪ್ರೌಢಶಾಲೆಯ ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲ ಸತ್ಯನಾರಾಯಣ ರೆಡ್ಡಿ

ದಾವಣಗೆರೆ, ನ. 2- ನಗರದ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಪ್ರೌಢಶಾಲೆಯ ಪ್ರಾಂಶುಪಾಲ ಸತ್ಯನಾರಾಯಣ ರೆಡ್ಡಿ ಅವರು, ಕನ್ನಡದ ಪ್ರಥಮಗಳು, ಕನ್ನಡ ನಾಡಿನ ಭೌಗೋಳಿಕ ವೈಶಿಷ್ಟ್ಯತೆ, ತಾಂತ್ರಿಕ ಮತ್ತು ವೈಜ್ಞಾನಿಕ ಅನ್ವೇಷಣೆಗಳ ಕುರಿತು 68 ಅಂಶಗಳ ಮಾಹಿತಿಯನ್ನು ನೀಡುವ ಮೂಲಕ ಜಗತ್ತಿನೆಲ್ಲೆಡೆ ತನ್ನ ಕೀರ್ತಿ ಹರಡಿರುವ ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಮಹತ್ವವನ್ನು ಪರಿಚಯಿಸಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಕನ್ನಡ ಸಹ ಶಿಕ್ಷಕ ಸಿದ್ದಪ್ಪ ಮಾತನಾಡಿ, ಕನ್ನಡ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರಿಸುತ್ತಾ, ಅಷ್ಟ ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಕನ್ನಡ ಸಾಹಿತ್ಯ, ಕವಿ ಪಂಪನಿಂದ ಇಲ್ಲಿಯವರೆಗೆ ನೂರಾರು ಕವಿಗಳಿಂದ ಅತ್ಯಂತ ಶ್ರೀಮಂತಗೊಂಡ ಸಾಹಿತ್ಯವಾಗಿದೆ. ಸಾಹಿತ್ಯವನ್ನು, ಸಾಹಿತ್ಯದ ಅಭಿರುಚಿಯನ್ನು ನಾವು ಮೈಗೂಡಿಸಿಕೊಂಡು ಕನ್ನಡತನವನ್ನು ನಮ್ಮ ನರನಾಡಿಗಳಲ್ಲಿ ಹರಿದಾಡುವಂತೆ ಮಾಡೋಣ ಎಂದು ತಿಳಿಸಿದರು.

ಸಹ ಶಿಕ್ಷಕಿ ಶ್ರೀಮತಿ ವಿನೋದ ಅವರು ಮಾತನಾಡಿ, ನಮ್ಮ ಬಸವಾದಿ ಶಿವಶರಣರ ಸಾಹಿತ್ಯ ಇಂದಿಗೂ ನೈಜ ಜೀವನದ ಆಗು-ಹೋಗುಗಳ ಮೇಲೆ ಪ್ರಭಾವ ಬೀರುವಂತದ್ದು. ಕನಕ, ಪುರಂದರು, ವಿಜಯದಾಸ, ವ್ಯಾಸರಾಯರಂತಹ ದಾಸಶ್ರೇಷ್ಠರಿಂದ ರಚಿತವಾದ ಭಕ್ತಿ ಪ್ರಧಾನ ಕೀರ್ತನ ಸಾಹಿತ್ಯದ ಸವಿಯನ್ನು ಉಣಬಡಿಸಿದರು.

ಕನ್ನಡ ಭಾಷಾ ವಿಭಾಗದ ಮುಖ್ಯಸ್ಥ ನಾಗರಾಜ್ ಮಾತನಾಡಿ, ಕನ್ನಡ ಜನಪದ ಸಾಹಿತ್ಯ ಹಳ್ಳಿಯ ಪ್ರತಿಯೊಂದು ನೈಜ ಜೀವನ ಸಂಬಂಧ ಹಾಗೂ ನಿತ್ಯದ ಕಾರ್ಯ ಚಟುವಟಿಕೆಗಳ ಅನುಭವಗಳನ್ನು ಅವಿದ್ಯಾವಂತರಾದ ಜನಪದರು ಅತ್ಯಂತ ಲಯಬದ್ಧವಾಗಿ ಜಾನಪದ ಗೀತೆಗಳನ್ನು ರಚಿಸಿರುವರು ಎಂದು ನಮ್ಮ ಜನಪದ ಮಣ್ಣಿನ ಸಂಸ್ಕೃತಿಯ ಸೊಗಡನ್ನು ಪರಿಚಯಿಸಿದರು.

ವಿದ್ಯಾರ್ಥಿಗಳಾದ ಕು. ಕವನ ಮತ್ತು ಕು. ಸುಶಾಂತ್ ಮಾತನಾಡಿ, ಕರ್ನಾಟಕ ಏಕೀಕರಣ ಮತ್ತು ಕನ್ನಡ ಭಾಷಾ ಸಾಹಿತ್ಯ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಗೀತೆಗಳಿಗೆ ನೃತ್ಯವನ್ನು ಪ್ರದರ್ಶಿಸಿದರು.

ಮುಖ್ಯ ಅತಿಥಿಗಳಾದ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ವಿನೋದ್, ಮುಖ್ಯೋಪಾಧ್ಯಾಯ ಬಿ.ಎಂ. ಬಸವರಾಜಯ್ಯ, ಶ್ರೀನಿವಾಸ್ ಮೂರ್ತಿ, ಯುವರಾಜ್ ಉಪಸ್ಥಿತರಿದ್ದರು.

ಸಾಗರ್ ಸ್ವಾಗತಿಸಿದರು. ಬಿಲ್ವ ವಂದಿಸಿದರು. ಚಂದನಾ, ರಿತಿಕಾ ಕಾರ್ಯಕ್ರಮ ನಿರೂಪಿಸಿದರು.

## ಲಯನ್ಸ್‌ನಿಂದ ನೇತ್ರ ತಪಾಸಣಾ ಶಿಬಿರ



ದಾವಣಗೆರೆ, ನ. 2 - ಲಯನ್ಸ್ ಕ್ಲಬ್ ಮತ್ತು ದಾವಣಗೆರೆ ನೇತ್ರಾಲಯದ ವತಿಯಿಂದ ನಗರದ ಲಯನ್ಸ್ ಭವನದಲ್ಲಿ ವಿಶ್ವ ದೃಷ್ಟಿ ದಿನದ ಅಂಗವಾಗಿ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಇಂದು ನಡೆಸಲಾಯಿತು. ಶಿಬಿರದ ಉದ್ಘಾಟನೆಯನ್ನು ಲಯನ್ಸ್ ಕ್ಲಬ್‌ನ ಪ್ರಾಂತೀಯ ಅಧ್ಯಕ್ಷ ಲಯನ್ ಓಂಕಾರಪ್ಪ ನೆರವೇರಿಸಿದರು. ಈ ಸಂದರ್ಭದಲ್ಲಿ ಲಯನ್ಸ್ ಶಾಲೆಯ ಚೇರ್ಮನ್ ಲಯನ್ ಆರ್. ಜಿ. ಶ್ರೀನಿವಾಸ್ ಮೂರ್ತಿ ಹಾಗೂ ಇತರರು ಭಾಗವಹಿಸಿದ್ದರು.

## ನಗರದ ಆಂಜನೇಯ ಬಡಾವಣೆಯಲ್ಲಿ ನಾಳೆ ನಾಗರಿಕ ಹಿತರಕ್ಷಣಾ ಸಮಿತಿಯ ಸಭೆ

ದಾವಣಗೆರೆ, ನ.2- ಸ್ಥಳೀಯ ಆಂಜನೇಯ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ನಾಡಿದ್ದು ದಿನಾಂಕ 4ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಕರೆಯಲಾಗಿದೆ. ಸಮಿತಿಯ ಕಾರ್ಯಾಲಯದಲ್ಲಿ ಈ ಸಭೆಯನ್ನು ಕರೆಯಲಾಗಿದೆ ಎಂದು ಸಮಿತಿ ಕಾರ್ಯದರ್ಶಿ ಶ್ರೀಮತಿ ವಸಂತ ತಿಳಿಸಿದ್ದಾರೆ.

## 'ಮೈ ಲಾರ್ಡ್' ನಿಲ್ಲಿಸಿದರೆ ಅರ್ಧ ಸಂಬಳ ಕೊಡುವೆ ಎಂದ ಜಡ್ಜ್

ನವದೆಹಲಿ, ನ. 2 - 'ಮೈ ಲಾರ್ಡ್' ಹಾಗೂ 'ಯುವರ್ ಲಾರ್ಡ್‌ಶಿಪ್' ಎಂದು ವಕೀಲರು ತಮ್ಮನ್ನು ಉದ್ದೇಶಿಸಿ ಹೇಳುವುದಕ್ಕೆ ಅಸಮಾಧಾನಗೊಂಡ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ, ಈ ರೀತಿ ಕರೆಯುವುದನ್ನು ನಿಲ್ಲಿಸಿದರೆ ಅರ್ಧ ಸಂಬಳ ಕೊಡುವುದಾಗಿ ಹೇಳಿದ್ದಾರೆ.

ಹಿರಿಯ ವಕೀಲರು ಪದೇ ಪದೇ ಮೈ ಲಾರ್ಡ್ ಎಂದು ಕರೆಯುತ್ತಿರುವುದಕ್ಕೆ ಅಸಮಾಧಾನಗೊಂಡ ನ್ಯಾಯಮೂರ್ತಿ ಪಿ.ಎಸ್. ನರಸಿಂಹ, ಮೈ ಲಾರ್ಡ್ ಎಂದು ಕರೆಯದಂತೆ ಎಷ್ಟು ಬಾರಿ ಹೇಳಬೇಕು? ಈ ರೀತಿ ಕರೆಯುವುದನ್ನು ನಿಲ್ಲಿಸಿದರೆ ನನ್ನ ಅರ್ಧ ಸಂಬಳ ನಿನಗೆ ಕೊಡುತ್ತೇನೆ ಎಂದಿದ್ದಾರೆ.

ವಕೀಲರು ವಾದ ಮಂಡಿಸುವಾಗ ಮೈ ಲಾರ್ಡ್ ಇಲ್ಲವೇ ಯುವರ್ ಲಾರ್ಡ್‌ಶಿಪ್ ಎಂಬ ಪದ ಬಳಸುವುದು ಸಾಮಾನ್ಯವಾಗಿದೆ. ಆದರೆ, ಇವು ವಸಹಾತುಶಾಹಿ ಕಾಲದ ಪದಗಳು ಹಾಗೂ ಗುಲಾಮಗಿರಿಯ ಸಂಕೇತ ಎಂಬ ಆಕ್ಷೇಪಗಳಿವೆ.

2006ರಲ್ಲಿ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಈ ರೀತಿಯ ಪದಗಳ ಬಳಕೆಯನ್ನು ನಿಲ್ಲಿಸುವಂತೆ ನಿರ್ಣಯ ತೆಗೆದುಕೊಂಡಿತ್ತು. ಆದರೆ, ಆ ನಿರ್ಣಯ ಇನ್ನೂ ವಾಡಿಕೆಯಲ್ಲಿ ಜಾರಿಯಾಗಿಲ್ಲ.


## ಡಾ. ವಿಶ್ವನಾಥ್‌ಗೆ ಇಂಗ್ಲೆಂಡ್‌ನ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್ ಫೆಲೋಶಿಪ್



ದಾವಣಗೆರೆ, ನ. 2- ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ನೆಫ್ರಾಲಜಿ ವಿಭಾಗದ ಮುಖ್ಯಸ್ಥ ಡಾ. ಎಸ್. ವಿಶ್ವನಾಥ್ ಅವರಿಗೆ ಇಂಗ್ಲೆಂಡ್‌ನ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್ ಪ್ರತಿಷ್ಠಿತ ಫೆಲೋಶಿಪ್ ಎಫ್‌ಆರ್‌ಸಿಪಿ (ಲಂಡನ್) ನೀಡಿದೆ.

ವಿಶ್ವನಾಥ್, ಮಣಿಪಾಲ್ ವಿಶ್ವವಿದ್ಯಾನಿಲಯದ ನೆಫ್ರಾಲಜಿಯಲ್ಲಿ ಹೆಚ್ಚುವರಿ ಪ್ರಾಧ್ಯಾಪಕರಾಗಿದ್ದು, ದಾವಣಗೆರೆಯ ಜೆಜೆಎಂ ವೈದ್ಯಕೀಯ ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ. ದಾವಣಗೆರೆ ವಿದ್ಯಾನಗರದ ದಿ. ಪ್ರೊ.ಶಿವಮಲ್ಲಪ್ಪ ಅವರ ಪುತ್ರ.

## ನಗರಕ್ಕೆ ಇಂದು ಸಚಿವ ಕೃಷ್ಣ ಭೈರೇಗೌಡ



ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ. ಇಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಸಚಿವರು ಆಗಮಿಸಲಿದ್ದು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆವ ಸಭೆಯಲ್ಲಿ ಭಾಗವಹಿಸುವರು.

## ನಗರಕ್ಕಿಂದು ವಿಷ್ಣು ಕನ್ನಡ ರಥ ಆಗಮನ

ಕನ್ನಡ ನಾಡು, ನುಡಿ, ಸಂಸ್ಕೃತಿಯ ಜಾಗೃತಿಗಾಗಿ ಕಲಾವಿದ ಜ್ಯೂನಿಯರ್ ವಿಷ್ಣುವರ್ಧನ್ ನಾಗಬಸಯ್ಯ ಮಳಲಿಮಠ ಅವರು ವಿಷ್ಣು ಕನ್ನಡ ರಥದೊಂದಿಗೆ ಬೆಂಗಳೂರಿನಿಂದ ಬೆಳಗಾವಿವರೆಗೆ ಯಾತ್ರೆ ಆರಂಭಿಸಿ ಬೆಳಗಾವಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಿ, ವಿಷ್ಣು ಕನ್ನಡ ರಥದೊಂದಿಗೆ ಇಂದು ಬೆಳಿಗ್ಗೆ 10.30 ಕ್ಕೆ ನಗರಕ್ಕೆ ಆಗಮಿಸಲಿದ್ದಾರೆ. ವಿನೋಬನಗರದ ಸಿದ್ಧಗಂಗಾ ಶ್ರೀ ಉದ್ಯಾನವನದ ಹತ್ತಿರ ಸಿದ್ಧಗಂಗಾ ಗೆಳೆಯರ ಬಳಗದವರು ಆಚರಿಸುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

## ಬ್ಯಾಗ್‌ನಲ್ಲಿದ್ದ ಬಂಗಾರದ ಸರ ಕಳ್ಳತನ

ದಾವಣಗೆರೆ, ನ. 2 - ಮಹಿಳೆಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 5000 ರೂ ನಗದು, 1.10 ಲಕ್ಷ ಮೌಲ್ಯದ 20 ಗ್ರಾಂನ ಬಂಗಾರದ ಸರವನ್ನು ಕಳ್ಳರು ಎಗರಿಸಿರುವ ಘಟನೆ ಹರಿಹರ ಜೆ.ಸಿ. ಬಡಾವಣೆಯಲ್ಲಿ ಬುಧವಾರ ನಡೆದಿದೆ.

ಬಡಾವಣೆಯ 5ನೇ ಮುಖ್ಯರಸ್ತೆ, 9ನೇ ಕ್ರಾಸ್‌ನ ನಿವಾಸಿ ನಿರ್ಮಲಾ ಎಸ್. ಜಿ. ಸರ ಕಳೆದುಕೊಂಡವರು. ಅವರು ದಾವಣಗೆರೆಯಿಂದ ಹರಿಹರಕ್ಕೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಹೋಗಿದ್ದರು. ಮನೆಗೆ ಹೋಗಿ ನೋಡಿದಾಗ ಬ್ಯಾಗ್‌ನಲ್ಲಿದ್ದ ಚಿನ್ನದ ಸರ ಹಾಗೂ ಹಣ ಇರಲಿಲ್ಲ. ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪರಂಪರೆ ಹೊತ್ತು ನಡೆಸುವ ಜವಾಬ್ದಾರಿ ಯುವಕರ ಮೇಲಿದೆ

### ಭದ್ರಾ ಕಾಲೇಜಿನ ಕನ್ನಡ ನುಡಿ ಹಬ್ಬ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್



ದಾವಣಗೆರೆ, ನ. 2 - ಕರ್ನಾಟಕ ಏಕೀಕರಣಗೊಂಡು ಹಾಗೂ ಕರ್ನಾಟಕ ಎಂದು ಮರು ನಾಮಕರಣಗೊಂಡು 50 ವರ್ಷಗಳಾದ ಸುಸಂದರ್ಭದಲ್ಲಿ ಭದ್ರಾ ಕಾಲೇಜಿನ ಯುವ ವಿದ್ಯಾರ್ಥಿ ಸಮೂಹ ಭದ್ರಾ ಕನ್ನಡ ಹಬ್ಬ ಆಚರಿಸುತ್ತಿರುವುದು ಸಂತೋಷದಾಯಕ ಕಾರ್ಯಕ್ರಮ. ಕನ್ನಡ ಹಿರಿಯ ಪರಂಪರೆಯನ್ನು ಹೊತ್ತು ನಡೆಸುವಂತಹ ಮಹತ್ತರ ಜವಾಬ್ದಾರಿ ಇಂದಿನ ಕನ್ನಡಿಗರ ಹೆಗಲ ಮೇಲಿದೆ ಎಂದು ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ತಿಳಿಸಿದರು.

ನಗರದ ಭದ್ರಾ ಕಾಲೇಜಿನ ಆವರಣದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಭದ್ರಾ ಕನ್ನಡ ನುಡಿ ಹಬ್ಬ ಹಾಗೂ ಸ್ತಬ್ಧ ಚಿತ್ರಗಳ ಮೆರವಣಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ಭದ್ರಾ ಕಾಲೇಜಿನಲ್ಲಿ ಕನ್ನಡ ನುಡಿ ಹಬ್ಬವನ್ನು ವಿಶೇಷ ಹಾಗೂ ವಿಭಿನ್ನವಾಗಿ ಸ್ತಬ್ಧ ಚಿತ್ರ ಮೆರವಣಿಗೆಯ ಮೂಲಕ ಆಚರಿಸುತ್ತಿರುವುದು ಸಂತೋಷ ತಂದಿದೆ. ನಾಡು-ನುಡಿ ಸೇವೆಗೆ ಈ ರೀತಿಯ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮೂಡಿ ಬರಲಿ ಎಂದು ಆಶಯ ವ್ಯಕ್ತಪಡಿಸಿದರು.

ಸ್ತಬ್ಧ ಚಿತ್ರ ಮೆವಣಿಗೆಯಲ್ಲಿ ಭದ್ರಾ ಕಾಲೇಜಿನ ವಿದ್ಯಾರ್ಥಿಗಳು ವಿಜಯಪುರದ ಬಸವನ ಬಾಗೇವಾಡಿ, ಮೈಸೂರು, ಕೊಡಗು, ಉಡುಪಿ, ಮಂಗಳೂರು ಕರಾವಳಿ ಹಾಗೂ ಹಂಪಿಯ ಚಿತ್ರಗಳ ಬೃಹತ್ ಮೆರವಣಿಗೆಯು ಕಾಲೇಜಿನ ಆವರಣದಿಂದ ಡಾ. ಎಂ.ಸಿ. ಮೋದಿ ವೃತ್ತ, ಮಹಾನಗರ ಪಾಲಿಕೆ ಮೂಲಕ ಜಯದೇವ ವೃತ್ತದವರೆಗೆ ಮೆರವಣಿಗೆಯ ಮೂಲಕ ತೆರಳಿತು.

ನಂತರ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಇಂದಿನ ಯುವ ಜನಾಂಗ ತಾವಾಯಿತು, ತಮ್ಮಪಾಡಾಯಿತು ಎಂದು ಮುಳುಗಿರುವವರ ಮಧ್ಯ ಈ ರೀತಿಯ ಕನ್ನಡ ನಾಡು-ನುಡಿ, ದೇಶ ಸೇವೆಗೆ ಕಿಂಚಿತ್ತಾದರೂ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದರು.

ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್. ಎಸ್. ಮಂಜುನಾಥ್ ಕುರ್ಕಿ ಮಾತನಾಡಿ, ಕನ್ನಡ ನುಡಿ ನಮನ ಸ್ಲಲಿಸುತ್ತಿರುವ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿ, ಕನ್ನಡ ಭಾಷೆಯ ಜೀವಂತಿಕೆಯು ನಾಡಿನ ಜನರ ನಾಲಿಗೆ ಮೇಲೆ ನಿರಂತರವಾಗಿರಲಿ ಎಂದು ಆಶಿಸಿದರು.

ಕನ್ನಡ ಪರ ಹೋರಾಟಗಾರ ಬಂಕಾಪುರದ ಚನ್ನಬಸಪ್ಪ ಹಾಗೂ ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಅವರಿಗೆ ಈ ಸಂದರ್ಭದಲ್ಲಿ ಭದ್ರಾ ಕಾಲೇಜಿನ ಆಡಳಿತ ಮಂಡಳಿ ಪರವಾಗಿ ಸನ್ಮಾನಿಸಿ, ಗೌರವಿಸಲಾಯಿತು.

ಬಂಕಾಪುರದ ಚನ್ನಬಸಪ್ಪ ಮಾತನಾಡಿ, ವಿವಿಧ ವೇಷ-ಭೂಷಣದಲ್ಲಿ ನೆರೆದಿರುವ ಕಲಾವಿದ ವಿದ್ಯಾರ್ಥಿಗಳನ್ನು ಶ್ಲಾಘಿಸುತ್ತಾ, ಇದೊಂದು ಐತಿಹಾಸಿಕ ಮೆವರಣಿಗೆಯಾಗಿದೆ ಎಂದು ತಿಳಿಸಿದರು.

ಭಾರತ ಸ್ವಾತಂತ್ರ್ಯಕ್ಕೆ ಕನ್ನಡಿಗರು ತಮ್ಮದೇ ಆದ ಗುರುತರ ಕಾಣಿಕೆ ನೀಡಿದ್ದಾರೆ. ಅನೇಕ ವೀರ ಹೋರಾಟಗಾರರ ಪರಿಶ್ರಮದ ಫಲವಾಗಿ ಇಂತಹ ಭವ್ಯ ಪರಂಪರೆ ನಮ್ಮ ನಾಡಿಗೆ ಇದೆ ಎಂದು ಸ್ಮರಿಸಿದರು.

ಬಾ.ಮ. ಬಸವರಾಜಯ್ಯ ಮಾತನಾಡಿ, ಇಂದಿನ ಮಾಧ್ಯಮಗಳು ಕನ್ನಡವನ್ನು ನುಂಗಿ ಇತರೆ ಭಾಷೆಗಳಿಂದ ಪದಗಳನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಕನ್ನಡ ಸಾಹಿತ್ಯವನ್ನು ಕುರಿತು ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಅಧ್ಯಾಪಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಹೆಚ್. ಮುರುಗೇಂದ್ರಪ್ಪ, ಪ್ರಾಂಶುಪಾಲರಾದ ಪ್ರೊ.ಟಿ. ಮುರುಗೇಶ್, ಡಿ. ಚಂದ್ರಪ್ಪ, ಮ್ಯಾನೇಜಿಂಗ್ ಟ್ರಸ್ಟಿ ಎಂ. ಸಂಕೇತ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕನ್ನಡ ರಾಜ್ಯೋತ್ಸವ ನಿತ್ಯೋತ್ಸವವಾಗಲಿ

### ದಕ್ಷಿಣ ಸಂಚಾರ ಪೊಲೀಸ್ ಠಾಣೆಯ ಪಿ.ಎಸ್.ಐ.ಡಿ.ಹೆಚ್. ನಿರ್ಮಲ ಆಶಯ



ದಾವಣಗೆರೆ, ನ. 2- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಕಲಾಕುಂಚ ಕಛೇರಿಯ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಕರ್ನಾಟಕ ಸುವರ್ಣ ಸಂಭ್ರಮ ಕಾರ್ಯಕ್ರಮ ಆಚರಿಸಲಾಯಿತು.

ನಗರದ ಜಯದೇವ ವೃತ್ತದಿಂದ ಕಲಾಕುಂಚದ ಮಹಿಳೆಯರು ಕನ್ನಡ ಪೇಟದೊಂದಿಗೆ ದ್ವಿಚಕ್ರ ವಾಹನ ಯಾನ (ಬೈಕ್ ರ್‍ಯಾಲಿ)ವನ್ನು ಕನ್ನಡ ಬಾವುಟದ ಹಾರಾಟದೊಂದಿಗೆ ಉದ್ಘಾಟಿಸಿದ ನಗರದ ದಕ್ಷಿಣ ಸಂಚಾರ ಪೊಲೀಸ್ ಠಾಣೆಯ ಪಿ.ಎಸ್.ಐ. ಡಿ.ಹೆಚ್. ನಿರ್ಮಲ ಮಾತನಾಡಿ, ಕನ್ನಡ ರಾಜ್ಯೋತ್ಸವ ಕೇವಲ ನವೆಂಬರ್‌ಗೆ ಸೀಮಿತವಾಗದೇ ಮಹಾಕವಿ ನಿಸಾರ್ ಅಹ್ಮದ್‌ರವರ ಕಾವ್ಯ ಸರಣಿಯಂತೆ ನಿತ್ಯೋತ್ಸವ ಆಗಬೇಕು. ಕಲಾಕುಂಚದ ಮೂರುವರೆ ದಶಕಗಳ ಈ ಕನ್ನಡ ಕಠಿಣ ಪರಿಶ್ರಮ ಇತರೆ ಕನ್ನಡ ಸಂಘಟನೆಗಳಿಗೆ ಮಾದರಿ ಎಂದರು.

ಕಲಾಕುಂಚದ ಗೌರವ ಅಧ್ಯಕ್ಷ ನಲ್ಲೂರು ಲಕ್ಷ್ಮಣ್‌ರಾವ್, ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ, ಸಮಾನ ಮನಸ್ಕರ ಸೇವಾ ಸಮಿತಿಯ ಸಂಸ್ಥಾಪಕ ಅಬ್ದುಲ್ ಸತ್ತಾರ್ ಸಾಬ್ ಮಾತನಾಡಿದರು.

ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ, ಕಲಾಕುಂಚ ವಿವಿಧ ಶಾಖೆಗಳ ಅಧ್ಯಕ್ಷರುಗಳಾದ ವಿ. ಕೃಷ್ಣಮೂರ್ತಿ, ರಾಜಶೇಖರ ಬೆನ್ನೂರು, ಶ್ರೀಮತಿ ಪ್ರಭಾ ರವೀಂದ್ರ, ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್‌ಶೆಣೈ ಉಪಸ್ಥಿತರಿದ್ದರು.

ಶ್ರೀಮತಿ ಲೀಲಾ ಸುಭಾಷ್ ಮತ್ತು ತಂಡ ಕನ್ನಡ ಗೀತೆ ಹಾಡಿದರು. ಗಣೇಶ್ ಶೆಣೈ ಸ್ವಾಗತಿಸಿದರು.

## ಅಂಚೆ ಮೂಲಕವೂ 2 ಸಾವಿರ ರೂ. ನೋಟುಗಳ ವಿನಿಮಯ



ನವದೆಹಲಿ, ನ. 2 - ರಿಸರ್ವ್ ಬ್ಯಾಂಕ್‌ಗೆ ಅಂಚೆ ಮೂಲಕ ಹಣ ಕಳಿಸಿ 2 ಸಾವಿರ ರೂ.ಗಳ ನೋಟುಗಳನ್ನು ವಿನಿಮಯ ಮಾಡಿಕೊಳ್ಳ ಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಿಸರ್ವ್ ಬ್ಯಾಂಕ್ ಪ್ರಾಂತೀಯ ಕಚೇರಿಗಳಲ್ಲಿ ನೋಟುಗಳ ವಿನಿಮಯಕ್ಕೆ ಅವಕಾಶವಿದೆ. ಜನರು ವಿಮೆ ಮಾಡಿರುವ ಅಂಚೆ ಮೂಲಕ ನೋಟುಗಳ ವಿನಿಮಯ ಮಾಡಿಕೊಳ್ಳ ಬಹುದಾಗಿದೆ.

ಅಂಚೆ ಮೂಲಕ ಹಣ ಕಳಿಸಿದಾಗ, ಆ ಮೊತ್ತವನ್ನು ಸಂಬಂಧಿಸಿದವರ ಖಾತೆಗೆ ಜಮಾ ಮಾಡ ಲಾಗುವುದು. ಇದು ಸುಲಲಿತ ಹಾಗೂ ಸುರಕ್ಷಿತ ಮಾರ್ಗವಾಗಿದೆ. ಇದರಿಂದ ಜನರು ನಿರ್ದಿಷ್ಟ ಬ್ಯಾಂಕ್ ಕಚೇರಿಗಳಿಗೆ ತೆರಳಿ ಸರದಿಯಲ್ಲಿ ನಿಲ್ಲುವುದು ತಪ್ಪುತ್ತದೆ ಎಂದು ರಿಸರ್ವ್ ಬ್ಯಾಂಕ್ ಪ್ರಾಂತೀಯ ನಿರ್ದೇಶಕ ರೋಹಿತ್ ಪಿ. ದಾಸ್ ತಿಳಿಸಿದ್ದಾರೆ.

## ವಾಯು ಮಾಲಿನ್ಯದಿಂದ ಸಕ್ಕರೆ ಕಾಯಿಲೆ ಅಪಾಯ ಹೆಚ್ಚು

ನವದೆಹಲಿ, ನ. 2 - ವಾಯು ಮಾಲಿನ್ಯಕ್ಕೆ ಸಿಲುಕುವವರಲ್ಲಿ ಟೈಪ್ - 2 ರೀತಿಯ ಸಕ್ಕರೆ ಕಾಯಿಲೆ ಅಪಾಯ ಹೆಚ್ಚಾಗಿದೆ ಎಂದು ಬಿಎಂಜೆ ಓಪನ್ ಡಯಾಬಿಟಿಸ್ ರೀಸರ್ಚ್ ಅಂಡ್ ಕೇರ್ ನಿಯತಕಾಲಿಕದಲ್ಲಿ ಪ್ರಕಟವಾದ ವರದಿ ತಿಳಿಸಿದೆ.

ದೆಹಲಿ ಹಾಗೂ ಚೆನ್ನೈಗಳಲ್ಲಿ ಪಿಎ 2.5 ಮಾಲಿ ನ್ಯದ ಅಧ್ಯಯನ ಮಾಡಿ ಈ ವರದಿ ರೂಪಿಸಲಾಗಿದೆ. ಈ ಅತಿ ಸೂಕ್ಷ್ಮ ದೂಳಿನ ಕಣಗಳಿಂದ ರಕ್ತದಲ್ಲಿ ಸಕ್ಕರೆ ಮಟ್ಟ ಹೆಚ್ಚಾಗುತ್ತದೆ ಹಾಗೂ ಟೈಪ್ - 2 ಸಕ್ಕರೆ ಕಾಯಿಲೆ ಅಪಾಯ ಹೆಚ್ಚಾಗುತ್ತದೆ ಎಂದು ವರದಿ ತಿಳಿಸಿದೆ. ಈ ಮಾಲಿನ್ಯವು ಹಲವು ರೀತಿಯ ಹೃದಯ ಸಂಬಂಧಿ ಸಮಸ್ಯೆಗಳಿಗೂ ಕಾರಣವಾಗುತ್ತದೆ ಎಂದು ವರದಿ ತಿಳಿಸಿದೆ. 2010ರಿಂದ 2017ರ ನಡುವೆ 12 ಸಾವಿರ ಜನರ ಅಧ್ಯಯನ ನಡೆಸಿ ವರದಿ ರೂಪಿಸಲಾಗಿದೆ.

## ವಿಚಾರಣೆಗೆ ಹಾಜರಾಗದ ಕೇಜ್ರಿವಾಲ್



ನವದೆಹಲಿ, ನ. 2 - ಅಬಕಾರಿ ನೀತಿಯ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ಎದುರು ದೆಹಲಿ ಮುಖ್ಯ ಮಂತ್ರಿ ಅರವಿಂದ ಕೇಜ್ರಿವಾಲ್ ಹಾಜರಾಗಿಲ್ಲ. ಅವರಿಗೆ ಜಾರಿ ನಿರ್ದೇಶನಾಲಯ ಮತ್ತೆ ಸಮನ್ಸ್ ಕಳಿಸಲಿದೆ.

ತಮಗೆ ಕಳಿಸಲಾಗಿರುವ ಸಮನ್ಸ್ ಅಸ್ಪಷ್ಟವಾಗಿದೆ, ದುರುದ್ದೇಶಪೂರಿತವಾಗಿದೆ ಹಾಗೂ ಕಾನೂನಿಗೆ ವಿರುದ್ಧವಾಗಿದೆ ಎಂದು ಅಧಿಕಾರಿಗಳಿಗೆ ಕೇಜ್ರಿವಾಲ್ ಎರಡು ಪುಟಗಳ ಪತ್ರ ಬರೆದಿದ್ದಾರೆ.

## ಖೈದಿಗಳಿಗೆ ಆಧಾರ್ ಪರಿಶೀಲನೆ ಕಡ್ಡಾಯ

ನವದೆಹಲಿ, ನ. 2 – ಎಲ್ಲ ಬಂಧಿತರು ಹಾಗೂ ಅವರಿಗೆ ಭೇಟಿ ನೀಡುವವರು ಇನ್ನು ಮುಂದೆ ಆಧಾರ್ ಪರಿಶೀಲನೆಗೆ ಒಳಗಾಗಬೇಕು ಎಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಖೈದಿಗಳ ಸುರಕ್ಷತೆ ಹಾಗೂ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಈ ಬಗ್ಗೆ ಎಲ್ಲಾ ರಾಜ್ಯಗಳಿಗೆ ಕೇಂದ್ರ ಗೃಹ ಸಚಿವಾಲಯ ಸೂಚನೆ ನೀಡಿದೆ. ಆಧಾರ್ ಲಿಂಕ್ ಮಾಡುವ ಕುರಿತು ವಿವರಗಳನ್ನು ಕಳಿಸಲಾಗಿದೆ.

## ದಾವಣಗೆರೆ ಕ್ಲಬ್‌ನಲ್ಲಿ ಕರ್ನಾಟಕ ರಾಜ್ಯೋತ್ಸವ



ದಾವಣಗೆರೆ, ನ.2- ಇಲ್ಲಿನ ಪ್ರವಾಸಿ ಮಂದಿರ ರಸ್ತೆಯಲ್ಲಿನ ದಾವಣಗೆರೆ ಕ್ಲಬ್‌ನಲ್ಲಿ ಬುಧವಾರ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು. ಅಧ್ಯಕ್ಷರಾದ ಎ.ಬಿ. ಚಂದ್ರಶೇಖರ್, ಖಜಾಂಚಿ ಪ್ರಶಾಂತ್ ಗುಪ್ತ, ಜಂಟಿ ಕಾರ್ಯದರ್ಶಿಗಳಾದ ಐನಹಳ್ಳಿ ಜಯದೀಪ್, ಪಲ್ಲಾಗಟ್ಟೆ ರವಿಶಂಕರ್, ನಿರ್ದೇಶಕ ಬಿ.ಟಿ. ಸುಪುತ್ರ ಹಾಗೂ ಸಿಬ್ಬಂದಿ ವರ್ಗದವರು ಈ ಸಂದರ್ಭದಲ್ಲಿದ್ದರು.

## ನೋಟುಗಳ ವಿನಿಮಯಕ್ಕೆ ಬಂದವರಿಗೆ ಆರ್ಥಿಕ ದಳದ ಪ್ರಶ್ನೆ

ಭುವನೇಶ್ವರ, ನ. 2 - ಎರಡು ಸಾವಿರ ರೂ. ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ಇಲ್ಲಿನ ರಿಸರ್ವ್ ಬ್ಯಾಂಕ್ ಕಚೇರಿ ಎದುರು ನಿಂತಿದ್ದವರನ್ನು ಒಡಿಶಾ ಪೊಲೀಸರ ಆರ್ಥಿಕ ಅಪರಾಧ ದಳದ ಅಧಿಕಾರಿಗಳು ಪ್ರಶ್ನಿಸಿದ್ದಾರೆ.

ಕೆಲವರು ದಿನಗೂಲಿ ಆಧಾರದ ಮೇಲೆ ನೋಟುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ರಿಸರ್ವ್ ಬ್ಯಾಂಕ್ ಕೌಂಟರ್‌ನಲ್ಲಿ 20 ಸಾವಿರ ರೂ. ವಿನಿಮಯ ಮಾಡಿಕೊಟ್ಟವರಿಗೆ 300 ರೂ. ಕೂಲಿ ನೀಡಲಾಗುತ್ತಿದೆ ಎಂದು ವರದಿಯಾಗಿತ್ತು. ಸರದಿಯಲ್ಲಿ ನಿಂತವರು ನಿಖರವಾಗಿ ಹತ್ತು 2,000 ರೂ. ನೋಟುಗಳನ್ನೇ ತಂದಿದ್ದಾರೆ. ಬಹುತೇಕರ ಬಳಿ ನಿರ್ದಿಷ್ಟವಾಗಿ ಇಷ್ಟೇ ಹಣ ಇರಲು ಹೇಗೆ ಸಾಧ್ಯ? ಈ ಬಗ್ಗೆ ಅನುಮಾನವಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಸರದಿಯಲ್ಲಿ ನಿಂತಿದ್ದ ಜನರನ್ನು ವಿಚಾರಿಸುವುದಷ್ಟೇ ಅಲ್ಲದೇ, ರಿಸರ್ವ್ ಬ್ಯಾಂಕ್ ಕಚೇರಿಯಲ್ಲಿನ ಸಿ.ಸಿ.ಟಿ.ವಿ. ದೃಶ್ಯಗಳನ್ನೂ ಪರಿಶೀಲಿಸಲಾಗಿದೆ.

## ಯೋಧ ಹೆಚ್. ಶಿವಕುಮಾರ್‌ಗೆ ಅದ್ಧೂರಿ ಸ್ವಾಗತ



ಮಲೇಬೆನ್ನೂರು, ನ. 2- ಭಾರತೀಯ ಭೂ ಸೇನೆಯಲ್ಲಿ 28 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ, ಮಂಗಳವಾರ ಸೇವೆಯಿಂದ ನಿವೃತ್ತರಾಗಿ ಬುಧವಾರ ಸ್ವಗ್ರಾಮ ಯಲವಟ್ಟಿಗೆ ಆಗಮಿಸಿದ ಯೋಧ ಹೆಚ್. ಶಿವಕುಮಾರ್ ಅವರನ್ನು ಗ್ರಾಮಸ್ಥರು ಹೂವು ಮಳೆ ಸುರಿಸಿ ಮತ್ತು ಮಹಿಳೆಯರು ಆರತಿ ಬೆಳಗಿ ಪೂರ್ಣ ಕುಂಭ ಮೇಳದೊಂದಿಗೆ ಅಭೂತ ಪೂರ್ವಕವಾಗಿ ಸ್ವಾಗತಿಸಿ, ಭರ್ಜರಿ ಮೆರವಣಿಗೆ ಮಾಡಿದರು.

# ಇಂಗ್ಲಿಷ್ ವ್ಯಾಮೋಹಕ್ಕೆ ಬಲಿಯಾಗಿ ಕನ್ನಡ ಮರೆತಿದ್ದೇವೆ

### ಸಾಣೇಹಳ್ಳಿಯ ಕಾರ್ಯಕ್ರಮದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿಷಾದ



ಸಾಣೇಹಳ್ಳಿ, ನ. 2- ಕನ್ನಡ ರಾಜ್ಯೋತ್ಸವ ಒಂದು ದಿನದ ಹಬ್ಬವಾಗಬಾರದು, ಅದು ನಿರಂತರ ಹಬ್ಬವಾಗಬೇಕು. ಕನ್ನಡ ರಾಜ್ಯೋತ್ಸವದ ದಿನ ಕನ್ನಡದ ಹಾಡುಗಳನ್ನು ಹೇಳಿದರೆ, ಕೇಳಿದರೆ ಕನ್ನಡ ರಾಜ್ಯೋತ್ಸವ ಆಗೋದಿಲ್ಲ. ಕನ್ನಡಕ್ಕೆ ತನ್ನದೇ ಆದ ಶಕ್ತಿ ಇದೆ. ಧರ್ಮ, ಸುಸಂಸ್ಕೃತಿ ಇದೆ. ನಾವೆಲ್ಲ ಇಂಗ್ಲಿಷ್ ವ್ಯಾಮೋಹಕ್ಕೆ ಬಲಿಯಾಗಿ ಕನ್ನಡ ಮರೆತಿದ್ದೇವೆ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.

ಇಲ್ಲಿನ ಶ್ರೀಮಠದಲ್ಲಿ ನಡೆದ ತಿಂಗಳ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ, ಅವರು ಮಾತನಾಡಿದರು.

ನಡೆ ಕನ್ನಡ, ನುಡಿ ಕನ್ನಡ, ಭಾವ ಕನ್ನಡ, ಬದುಕು ಕನ್ನಡ ಆಗಬೇಕು. ಕನ್ನಡ ಎಂದರೆ ಅದೊಂದು ಸಂಸ್ಕೃತಿ. ಕನ್ನಡ ಎನ್ನುತ್ತಲೇ ನೆನಪಾಗುವುದು ಪಂಪನಿಂದ ಕುವೆಂಪುವರೆಗೆ. ಶರಣರು, ದಾಸರು, ಅನುಭಾವಿಗಳು ಕನ್ನಡದ ಆಸ್ತಿ. ಅವರು ಬಿಟ್ಟುಹೋಗಿರುವ ಆಸ್ತಿಯನ್ನು ಉಳಿಸಿಕೊಂಡಾಗ ಮಾತ್ರ ಅಪ್ಪಟ ಕನ್ನಡಿಗರಾಗಲಿಕ್ಕೆ ಸಾಧ್ಯ ಎಂದು ಅವರು ನುಡಿದರು.

ಮನುಷ್ಯನಿಗೆ ನರ ಜನ್ಮ ಮತ್ತು ಹರ ಜನ್ಮ ಎನ್ನುವ ಎರಡು ಜನ್ಮಗಳಿವೆ. ತಂದೆ, ತಾಯಿಯಿಂದ ಬಂದದ್ದು ನರ ಜನ್ಮ, ಗುರುವಿನಿಂದ ಪಡೆದದ್ದು ಹರ ಜನ್ಮ, ಗುರುನಿಂದ ದೀಕ್ಷೆ ಮೂಲಕ ಅರಿವನ್ನು ಪಡೆದುಕೊಂಡಾಗ ಹೆಚ್ಚಿನ ಸಾಧನೆ ಮಾಡಲಿಕ್ಕೆ ಸಾಧ್ಯ. ಮನುಷ್ಯನಿಗೆ ಕಾಮನೆಗಳನ್ನು ದೂರ ಮಾಡಿಕೊಳ್ಳಬೇಕಾದರೆ ನರಜನ್ಮ ತೊಡೆದು ಹರ ಜನ್ಮ ಪಡೆದುಕೊಳ್ಳಬೇಕು. ದೀಕ್ಷೆ ಪಡೆದುಕೊಳ್ಳುವುದು ಪುಣ್ಯದ ಕಾರ್ಯ.

ದೀಕ್ಷೆ ಎಂದರೆ ಬದ್ಧತೆ, ಪ್ರಮಾಣ. ದೀಯತೆ ಮತ್ತು ಕ್ಷೀಯತೆ. ದೀಯತೆ ಎಂದರೆ ಕೊಡುವುದು ಕ್ಷೀಯತೆ ಎಂದರೆ ಕಳೆಯುವುದು. ಶರಣರು ಹೇಳಿದ್ದು ದೇವರೆಂದರೆ ನೀವು. ಪ್ರತಿಯೊಬ್ಬರು ದೇಹವನ್ನೇ ದೇವಾಲಯವನ್ನಾಗಿ ಮಾಡಿಕೊಳ್ಳಬೇಕು. ಅರಿವನ್ನು ಮೂಡಿಸುವುದು ಜ್ಞಾನ ದೀಕ್ಷೆ. ದೀಕ್ಷೆ ಪಡೆದವರು ಸೋಮಾರಿತನ ಬೆಳೆಸಿಕೊಳ್ಳದೇ ಸದಾ ಚಟುವಟಿಕೆಯಿಂದಿರಬೇಕು.

ಇವತ್ತು ನಿಮ್ಮನ್ನು ಪೂಜಾರಿ ಪುರೋಹಿತರು ದಿಕ್ಕು ತಪ್ಪಿಸುವ ಕಾರ್ಯ ಮಾಡುವರು. ಎಂತೆಂಥದ್ದೋ ಗೊಂಬೆಯನ್ನು ತಂದು ಹೋಮ-ಹವನ ಮಾಡಿ ಆಡಂಬರದ ಪೂಜೆ ಮಾಡಿಸಿ ನಿಮ್ಮನ್ನು ದಿಕ್ಕು ತಪ್ಪಿಸುವ ಕಾರ್ಯ ಮಾಡಿ ಮೌಢ್ಯಗಳನ್ನು ಬಿತ್ತುತ್ತಿದ್ದಾರೆ. ಅದು ನಿಮ್ಮ ಉದ್ಧಾರಕ್ಕಾಗಿ ಅಲ್ಲ, ಪೂಜಾರಿ ಪುರೋಹಿತರ ಸ್ವಾರ್ಥಕ್ಕಾಗಿ ಎಂದರು.

ನಿವೃತ್ತ ಪ್ರಾಚಾರ್ಯ ಐ .ಜಿ. ಚಂದ್ರಶೇಖರಯ್ಯ ಇಷ್ಟಲಿಂಗ ದೀಕ್ಷೆಯನ್ನು ನಡೆಸಿಕೊಟ್ಟರು. ವಿದ್ಯಾರ್ಥಿ ಸುಮಂತ್ ಪೂಜೆ ವ್ಯವಸ್ಥೆ ಮಾಡಿದರು.

|| ಶ್ರೀ ನಾರದಮುನಿ ಪ್ರಸನ್ನ ||
ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಹರಿಹರ ತಾಲ್ಲೂಕು ಗುಡ್ಡದ ಬೇವಿನಹಳ್ಳಿ ಗ್ರಾಮದ ವಾಸಿ
ಗೋಡಿಹಾಳ್ ಜಿ.ಹೆಚ್. ಲೋಕಪ್ಪ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.
ದಿನಾಂಕ 27.10.2023ನೇ ಶುಕ್ರವಾರ ಬೆಳಿಗ್ಗೆ 8.30ಕ್ಕೆ ನಮ್ಮ ಸಹೋದರರನಾದ
ಗೋಡಿಹಾಳ್ ಶ್ರೀ ಜಿ. ಹೆಚ್. ವೀರಪ್ಪ
(ನಿವೃತ್ತ ವರ್ಕ್ ಇನ್‌ಸ್ಪೆಕ್ಟರ್, ನೀರಾವರಿ ಇಲಾಖೆ, ಮಲೇಬೆನ್ನೂರು)
ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಶಿವಗಣಾರಾಧನೆಯನ್ನು
ದಿನಾಂಕ 4.11.2023ನೇ ಶನಿವಾರ ಬೆಳಿಗ್ಗೆ 10.31ಕ್ಕೆ ಮಲೇಬೆನ್ನೂರು ಪಟ್ಟಣದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಬಯಸುವ.

ದುಃಖತಪ್ತರು : ☆ ಶ್ರೀಮತಿ ರತ್ನಮ್ಮ ಮತ್ತು ಮ್ಕಕಳು ☆ ಶ್ರೀಮತಿ ಪುಷ್ಪ ಶ್ರೀ ಜಿ.ವಿ. ಸಂಪತ್ ಕುಮಾರ್, ☆ ಶ್ರೀಮತಿ ಶ್ವೇತ ಶ್ರೀ ಜಿ.ವಿ. ಶಿವರಾಜ್ ☆ ಶ್ರೀಮತಿ ದೀಪಿಕ ಶ್ರೀ ಜಿ.ವಿ. ಹರೀಶ್ ☆ ಕುಮಾರಿ ನಯನ, ☆ ಗೋಡಿಹಾಳ್ ವಂಶಸ್ಥರು ☆ ಮಾವಂದಿರು ☆ ಅಳಿಯಂದಿರು ☆ ಜಿ.ಬೇವಿನಹಳ್ಳಿ ಗ್ರಾಮಸ್ಥರು, ☆ ಮಲೇಬೆನ್ನೂರು ಗ್ರಾಮಸ್ಥರು ಹಾಗೂ ಬಂಧು ಮಿತ್ರರು, ಮೊ : 99004 41197.

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.